ತಕ್ಕಂತದ್ದು ಅವಶ್ಯಕ. ರಾಜ್ಯದ ಹೆಸರನ್ನು ಕರ್ನಾಟಕವೆಂದು ಬದಲಾವಣೆಮಾಡಿದ ತಕ್ಷಣಕ್ಕೆ ರಾಜ್ಯದಲ್ಲಿ ಸತ್ಯ, ಸಾಮರ್ಥ್ಯ, ಧರ್ಮ ಇತ್ಯಾದಿಗಳ ಸ್ಥಾಪನೆಯಾಗುತ್ತದೆ ಎಂದು ನಾನು ನಂಬಿಕೆ ಇಟ್ಟವನಲ್ಲ ಬಹುಶಃ ನಿಮ್ಮ ಮಾತಾ ಪಿತೃಗಳು ತಾವು ಹುಟ್ಟಿದಾಗ ಮುಂದೆ ಈ ಸಭೆಯ ಸಭಾಧ್ಯಕ್ಷಣಿಯಾಗುತ್ತೀರೆಂದು ತಿಳಿದುಕೊಂಡಿದ್ದರೋ ಏನೋ. ಏಕೆಂದರೆ ೧೬ ವರ್ಷಗಳ ಕಾಲದಲ್ಲಿ ಎಷ್ಟೋ ಗಂಡಸರು ಈ ಸಭೆಯ ಅಧ್ಯಕ್ಷರಾಗಿದ್ದಾಗ ಈ ರಾಜ್ಯದ ಹೆಸರು ಕರ್ನಾಟಕವೆಂದು ಆಗಲಿಲ್ಲ. ಆದರೆ ತಾವು ಇವೊತ್ತಿನ ದಿವಸ ಅಧ್ಯಕ್ಷರಾಗಿದ್ದಾಗ ಆ ಮಹಾ ಕೆಲಸ ಆಗಿದೆ. ಹಿಂದೆ ಎಷ್ಟೋ ಸಾರಿ ಚರ್ಚೆಮಾಡಿ ಮುಗಿಯದಿದ್ದಂತಹ ಸಮಸ್ಯೆ ಇಂದು ತಾವು ಅಧ್ಯಕ್ಷ ಸ್ಥಾನದಲ್ಲಿರುವಾಗ ಅದು ಆಯಿತು. ತುಂಬಾ ಸಂತೋಷ. ಇವತ್ತು ರಾಜ್ಯದಲ್ಲಿ ಮಹಾನಾಯಕರ ಮತ್ತು ರಾಜರುಗಳ ಸಿಂಹಾಸನ ಮರೆಯಾಗಿದೆ. ಮತ್ತು ಎಷ್ಟೋ ರಾಜರುಗಳು ಅದರ ಹಕ್ಕನ್ನು ಸಹ ಕಳೆದು ಕೊಂಡಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳಿಂದ ಕೂಡಿದ ಈ ಸಭೆಯ ಅಧ್ಯಕ್ಷರು ತಾವಾಗಿರುವುದರಿಂದ ಇಡೀ ಕರ್ನಾಟಕ ರಾಜ್ಯದ ಅಧಿಪತಿಗಳು ತಾವಾಗಿದ್ದೀರಿ. ಆದಕ್ಕೆ ನೀವು ಹುಟ್ಟಿದಾಗಲೇ ನಿಮ್ಮ ತಂದೆ ತಾಯಿಗಳು ನಿಮಗೆ 'ನಾಗ-ರತ್ನ' ಎಂಬ ಹೆಸರನ್ನು ಇಟ್ಟು ನಿಮ್ಮ ಇವತ್ತಿನ ಪದವಿಗೆ ಸರಿಹೋಗುವಂತೆಮಾಡಿದ್ದಾರೆಂದು ಕಾಣುತ್ತದೆ. ನೀವು 'ನಾಗರತ್ನ'ವಲ್ಲದೆ 'ನಾಗ ಕನ್ಯೆ'ಯೂ ಹೌದು. ಇವತ್ತು ರಾಜ್ಯಕ್ಕೆ ಹೆಸರು ಬದಲಾವಣೆಯಾದಾಗ ನಾವೆಲ್ಲರೂ ಹೇಗೆ ಸಂತೋಷ ಪಡುತ್ತೇವೆಯೋ ಹಾಗೆಯೇ ತಾವು ಅಧ್ಯಕ್ಷರಾಗಿರುವಾಗ ಈ ರಾಜ್ಯಕ್ಕೆ ಉತ್ತಮವಾದ ಆಡಳಿತ ಅತ್ಯಗತ್ಯವಾಗಿದೆ. ಈಗ ರಾಜ್ಯಾದ್ಯಂತ ಈ ನಮ್ಮ ಮಂತ್ರಿಮಂಡಲದ ಬಗ್ಗೆ ಅಲ್ಲೋಲ ಕಲ್ಲೋಲ, ಮತ್ತು ಅಸಹ್ಯ ವರ್ತನೆಗಳ ಅನೀತಿಯು ತಾಂಡವಾಡುತ್ತಿದೆ. ಇದರಿಂದ ರಾಜ್ಯದಲ್ಲಿ ಬಹುಮಂದಿ ಜನರ ಮನಸ್ಸು ನೋಯುತ್ತಿದೆ. ಸತ್ಯವಂತರ ಹೃದಯ ಕರಗಿ ನೀರಾಗುತ್ತಿದೆ. ಇವತ್ತು ಯಾವ ಪಕ್ಷದವರೇ ಇರಲಿ, ಅಥವಾ ಯಾವ ಪಂಗಡದವರೇ ಇರಲಿ, ಎಲ್ಲರನ್ನೂ ಒಂದೇ ರೀತಿಯಿಂದ ನೋಡಬೇಕಾಗಿದೆ. ಇಲ್ಲಿ ನಮ್ಮ ಮಾನ್ಯ ಪಾಟೀಲರು ಇದ್ದಾರೆ. ಅವರಿಗೆ ಒಂದು ಪ್ರಶ್ನೆಯನ್ನು ಹಾಕುತ್ತೇನೆ. ತಮ್ಮ ಮಂತ್ರಿಮಂಡಲದಲ್ಲಿ ಸಾಮಾಜಿಕ ನೀತಿ ನಿಯಮಗಳು ಇದೆಯೇ ನ್ಯಾಯ ಧರ್ಮ ಇದೆಯೇ ಎಂದು ಕೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಒಬ್ಬರು ಮಂತ್ರಿಯವರು ನಾಲ್ಕೈದು ಸಾರಿ ಬಂದಿದ್ದರು. ಅದರ ಬಗ್ಗೆ ನನಗೆ ತಿಳಿಸದೆ ಇರಲು ಕಾರಣವೇನು? ನಾನು ಪ್ರಜಾಪ್ರತಿನಿಧಿಯಲ್ಲವೆ? ನನಗೆ ತಿಳಿಸಬಾರದು ಎಂದು ನನಗೆ ಶಾಪ ಕೊಟ್ಟಿದ್ದಾರೆಯೇ? ರಾಜ್ಯದಲ್ಲಿ ಇಂತಹ ಆಡಳಿತ ನ್ಯಾಯವಲ್ಲ, ಅದರಲ್ಲಿಯೂ ಕರ್ನಾಟಕ ರಾಜ್ಯಕ್ಕೆ ಇದು ಸಲ್ಲತಕ್ಕದ್ದಲ್ಲ. ನಮ್ಮ ರಾಜ್ಯವು ಒಳ್ಳೆಯ ಆಡಳಿತದ ರಾಜ್ಯವಾಗಬೇಕು. ಹಿಂದೆ ಅನೇಕ ಹಿರಿಯರು ಮತ್ತು ತಪಸ್ವಿಗಳು ಈ ರಾಜ್ಯಕ್ಕೆ ಕರ್ನಾಟಕವಾಗಬೇಕೆಂದು ನೆನೆಸಿದ್ದರು. ನಾನು ಇವತ್ತು ಜಾತೀವಾದಿಯಲ್ಲದಿದ್ದರೂ ಒಂದು ಮಾತನ್ನು ಇಲ್ಲಿ ಹೇಳಲೇಬೇಕಾಗುತ್ತದೆ. ಇವತ್ತು ನಿಷ್ಠಾವಂತ ಜನರಿಗೆ ನಿಮ್ಮಲ್ಲಿ ಸ್ಥಾನವಿಲ್ಲದ ಹಾಗೆ ಆಗಿದೆ. ನೀವು ಇವತ್ತು ಒಕ್ಕಲಿಗರು, ಲಿಂಗಾಯಿತರು ಮತ್ತು ಹರಿಜನರನ್ನು ತುಳಿಯುವುದಕ್ಕೆ ಹೊರಟಿದ್ದೀರಿ. ನಾನು ಇನ್ನೊಂದು ಅಂಶವನ್ನು ಹೇಳುತ್ತೇನೆ. ಒಬ್ಬ ಮಂತ್ರಿಯು ಒಂದು ಪ್ರಬಲವಾದ ಕೋಮಿಗೆ ಸೇರಿದ ತಕ್ಷಣ ಅದು ಅವನಿಗೆ ಶಾಪವೇನು? ನಾನಾದರೂ ತಿಳಿದಿದ್ದೇನೆ, ಈಗಾಗಲೇ ಮಂತ್ರಿ ಮಂಡಲಕ್ಕೆ ಕೇಂದ್ರದಿಂದ ಸೂಚನೆ ಬಂದಿದೆ. ಮಂತ್ರಿಮಂಡಲದಲ್ಲಿ ಒಕ್ಕಲಿಗರ ಮತ್ತು ಲಿಂಗಾಯಿತರ ಸಂಖ್ಯೆ ಜಾಸ್ತಿಯಾಗಿರುವುದರಿಂದ ಅವರಲ್ಲಿ ಒಂದೆರಡು ಜನರನ್ನು ತೆಗೆದುಹಾಕಿ ಇನ್ಯಾರನ್ನಾದರೂ ಸೇರಿಸಿಕೊಳ್ಳಬೇಕೆಂದು ಸೂಚನೆಬಂದಿದೆ ಎಂದು ತಿಳಿದಿದ್ದೇನೆ. ನಾನು ಇವತ್ತು ಜಾತಿವಾದಿಯಲ್ಲದಿದ್ದರೂ, ಇಲ್ಲಿ ದುರಹಂಕಾರದ ಆಡಳಿತ ನಡೆಯುತ್ತಿರುವಾಗ, ದುರ್ವ್ಯವಹಾರ ನಡೆಯುತ್ತಿರುವಾಗ, ಕೆಲವು ಜಾತಿಯವರನ್ನು ತುಳಿಯುವ ಪ್ರಯತ್ನ ನಡೆಯುತ್ತಿರುವಾಗ ಈ ಮಾತನ್ನು ಸ್ಪಷ್ಟವಾಗಿ ಹೇಳದೆ ಇರುವುದಕ್ಕೆ ಸಾಧ್ಯವಿಲ್ಲ. ಇವತ್ತು ರಾಜ್ಯಕ್ಕೆ ಉಳಿಗಾಲವಿಲ್ಲದ ಹಾಗೆ ಆಗಿದೆ. ನಿಮ್ಮ ಸತ್ಯ ನಿಷ್ಠೆ ಎಲ್ಲಿ? ಶ್ರೀಮಾನ್ ಪಾಟೀಲರು ಬಿಚ್ಚು ಮನಸ್ಸಿನ ವ್ಯಕ್ತಿ. ಇವತ್ತು ಯಾವುದಾದರೂ ಒಂದು ದೇವಸ್ಥಾನಕ್ಕೆ ಬಂದು ಹೂವಿನಹಾರ ಹಾಕಿ ಪ್ರಮಾಣಮಾಡಲಿ, ಇವರ ಮಂತ್ರಿಮಂಡಲ ಸತ್ಯ ನಿಷ್ಠೆಯಿಂದ ರಾಜ್ಯದ ಕೆಲಸವನ್ನು ಮಾಡುತ್ತಿದೆಯೋ ಎಂದು. ನೀವೆಲ್ಲರೂ ಸತ್ಯದಿಂದ ಪ್ರಾಮಾಣಿಕತೆಯಿಂದ, ರಾಜ್ಯದ ಹಿತದೃಷ್ಟಿಯಿಂದ ಇವತ್ತು ಆಡಳಿತವನ್ನು ನಡೆಸುತ್ತಿದ್ದೀರಾ ಎಂದು ಹೇಳಿ. ನಿನ್ನೆ ಒಂದು ದೊಡ್ಡ ಮಾತನ್ನು ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು. ಏನೆಂದರೆ ಕಾಲ ಚಕ್ರ ಉರುಳುತ್ತಿದೆ ಎಂದು. ಇವತ್ತು ಡೊಂಬರಾಟದ ಹಾಗೆ ಮಾಡುವುದು ಬೇಡ. ಡೊಂಬರಾಟದವನು ಆಟ ಆಡಿಸುವುದಕ್ಕೆ ಬಂದಾಗ ಅಲ್ಲಿ ಮಕ್ಕಳು ಜಾಸ್ತಿ ಇದ್ದರೆ ಬರೇ ಮಿಠಾಯಿ ಕೊಟ್ಟು ಹೋಗಿ ಎಂದು ಕಳಿಸಿಬಿಡುತ್ತಾನೆ. ಆದರೆ ಇನ್ನೊಂದು ಕಡೆ ಇನ್ನೊಬ್ಬರು ನಿಮ್ಮಂಥ ದೊಡ್ಡ ಮನುಷ್ಯರು ಇದ್ದರೆ, ಪುಂಗಿ ಊದಿ ಬಿಟ್ಟು ಕಾಸು ವಸೂಲುಮಾಡುತ್ತಾನೆ.

ಪುಂಗಿ ಊದುವ ಮಂತ್ರಿಗಳು ಎಷ್ಟು ದಿವಸ ಊದುತ್ತಾರೆ? ಶ್ರೀರಂಗಪಟ್ಟಣದಲ್ಲಿ ಪರಿಸ್ಥಿತಿ ಬದಲಾವಣೆಯಾಗಿದೆ. ಅಧಿಕಾರ ದಾಹ ಇದೆ ಈ ರಾಜ್ಯದಲ್ಲಿ ಹಲವಾರು ಕೋಮುಗಳನ್ನು ತುಳಿಯುವ ಅಧಿಕಾರ ದಾಹ ಬಹು ದಿವಸ ಉಳಿಯುವುದಿಲ್ಲ: ಸಮರ್ಥಶಾಲಿಗಳನ್ನು, ನೀತಿವಂತರನ್ನು ತುಳಿಯುವುದಕ್ಕೆ ಹೊರಟು ಅಧರ್ಮದ ಹಾದಿಯನ್ನು ಹಿಡಿಯುತ್ತಿದ್ದಾರೆ. ಸತ್ಯವನ್ನು ನುಡಿಯುವವರು,

(ಶ್ರೀ ಜಿ. ಪುಟ್ಟಸ್ವಾಮಯ್ಯ)

ಯಾವಾಗಲೂ ಇಡೀ ಪ್ರಪಂಚಕ್ಕೇ ಒಂದು ತತ್ವವನ್ನು ಸಾರತಕ್ಕಂಥ ವ್ಯಕ್ತಿಗಳು ಈ ರಾಜ್ಯದ ಮುಖ್ಯ ಮಂತ್ರಿಗಳು ಆಗುವುದಕ್ಕೆ ಅರ್ಹರು. ತಮ್ಮ ಮುಖಾಂತರ ನಾನು ಹೇಳುತ್ತೇನೆ, ಯಾವುದಾದರೂ ಒಂದು ಮಾತು ಬಂದರೆ ಅದು ರಾಮಬಾಣ ಇದ್ದಂತೆ ಇರಬೇಕು. ಮಕ್ಕಳ ಆಟದಂತಾಗಬಾರದು. ನಮ್ಮನ್ನು ದೊಂಬರಾಟದ ನೀತಿಯನ್ನು ಅನುಸರಿಸುತ್ತಿದ್ದಾರೆಂದು ಹೇಳಬಾರದು. ಬಡಬೋರೇಗೌಡರ ದುಡ್ಡು ಇವರಿಗೋಸ್ಕರ ಖರ್ಚು ಆಗುತ್ತಿದೆ. ಅವರು ನಿಮಗಾಗಿ ರಕ್ತವನ್ನು, ಬೆವರನ್ನು ಸುರಿಸಿ ಕೆಲಸ ಮಾಡಿದ್ದಾರೆ. ನಿಮ್ಮನ್ನು ಬಂದೂಕದಿಂದ ಯಾರು ಹೊಡೆದರೋ ಆ ಪೋಲೀಸಿನವರೆ, ನಿಮ್ಮನ್ನು ಇವತ್ತು ಭದ್ರವಾಗಿ ಇಟ್ಟಿದ್ದಾರೆ. ನೀವು ಸುಳ್ಳು ಹೇಳುವುದು ಸರಿಯಿಲ್ಲ. ನಾನು ಆವೇಶಪೂರಿತವಾಗಿ ಹೇಳುತ್ತೇನೆ. ನೀತಿವಂತರಾದ ಜನರು ಆಡಳಿತದಲ್ಲಿ ಇರಬೇಕು, ಇವರು ಆಡಳಿತ ಬಿಡಬೇಕು, ನೀತಿಯುತವಾದ ಸರ್ಕಾರ ಸ್ಥಾಪನೆಯಾಗಬೇಕು, ದಕ್ಷ ಸರ್ಕಾರ ಸ್ಥಾಪನೆ ಆಗಬೇಕು. ಸುಮ್ಮನೆ ಅಂಕಿಅಂಶಗಳನ್ನು ಈ ಸರ್ಕಾರ ಕೊಟ್ಟರೆ ಅದು ಉಚಿತವಾಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀತಿ ಎಂದು ಹೇಳುತ್ತೀರಿ. ಅದು ಯಾವುದು ಹೇಳಿ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಖಂಡಿತವಾಗಿ ಹೇಳುತ್ತೇನೆ. ಶ್ರೀಮಾನ್ ಬಸವಲಿಂಗಪ್ಪನವರು ನನ್ನ ಮಿತ್ರರು. ಅವರ ಸವಾಲನ್ನು ಅಂಗೀಕರಿಸಿ ಒಂದು ಉದಾಹರಣೆಯನ್ನು ಹೇಳುತ್ತೇನೆ. ನನ್ನ ಕ್ಷೇತ್ರಕ್ಕೆ ಮಾನ್ಯ ಮಂತ್ರಿಗಳು ಬಂದಾಗ್ಗೆ ಅಲ್ಲಿನ ಜನಗಳ ಪ್ರತಿನಿಧಿಯಾದ ನಾನು ಯಾವಾಗಲೂ ಗೈರು ಹಾಜರಾಗುವುದಿಲ್ಲ. ನಿಮ್ಮ ಚಲನವಲನ ನೋಡಿ ನಾನು ಗೈರುಹಾಜರಾಗಬೇಕಷ್ಟೆ. ನಿಮ್ಮ ನೀತಿ ನಿಯಮಗಳು ಸರಿಯಾಗಿಲ್ಲ. ದಕ್ಷತೆಯಿಂದ ಕೆಲಸಮಾಡುವಂತಹವರ ವಿಷಯದಲ್ಲಿ ನನಗೆ ತುಂಬಾ ಅಭಿಮಾನ. ನಾನು ಅಂತಹ ಸಂದರ್ಭದಲ್ಲಿ ಗೈರುಹಾಜರಾಗತಕ್ಕ ಮನುಷ್ಯನಲ್ಲ. ಇಂತಹ ನಾಗರೀಕ ರಾಜ್ಯ ಜನತಾ ಪ್ರತಿನಿಧಿ ಮಾಡಬೇಕಾದ ಕೆಲಸವೇನೆಂಬುದನ್ನು ಈ ಒಂದು ಉದಾಹರಣೆಯ ಮೂಲಕ ಇಲ್ಲಿ ಇಟ್ಟಿದ್ದೇನೆ. ಅನೇಕ ಸಂದರ್ಭಗಳಲ್ಲಿ ನನಗೆ ಖಾಸಗಿಯಾಗಿ ಕೇಳಿದರೆ ಎಲ್ಲ ವಿಷಯಗಳನ್ನೂ ಹೇಳುತ್ತೇನೆ. ಇಲ್ಲಿ ಹೇಳಿದರೆ ಅಧ್ಯಕ್ಷರು ಅನುಮತಿ ಕೊಡುವುದಿಲ್ಲ. ಆದ್ದರಿಂದ ಈಗ ನಾನು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯಕ್ಕೆ ಹೊಸ ಹೆಸರನ್ನು ಇಟ್ಟಾಗ್ಗೆ ಈ ರಾಜ್ಯದ ಒಳಗಡೆ ಇರತಕ್ಕ ಬಹು ಮುಖ್ಯಾಂಶಗಳ ಬಗ್ಗೆ ಪ್ರಸ್ತಾಪ ಮಾಡಲಿಲ್ಲ. ದೇಶದಲ್ಲಿ ಅನೇಕ ವಿವಾದಗಳಿವೆ, ಗಡಿವಿವಾದವಿದೆ, ಕನ್ನಡನಾಡಿನ ಹೊರಪ್ರದೇಶಗಳು ಈ ರಾಜ್ಯಕ್ಕೆ ಸೇರಬೇಕಾದುದು ಇನ್ನೂ ಬಹಳವಾಗಿವೆ. ಇಂತಹ ಮುಖ್ಯ ಸಮಸ್ಯೆಗಳ ಬಗ್ಗೆ ರಾಜಕೀಯ ಸೂತ್ರವನ್ನು ವಹಿಸಿರತಕ್ಕ ಮುಖ್ಯಮಂತ್ರಿಯವರು ಒಂದು ಚಕಾರ ಶಬ್ದವನ್ನೂ ಹೇಳದೆ ಇರತಕ್ಕದ್ದು ಇದು ಬೂಟಾಟಿಕೆ ರಾಜಕೀಯ ಅಲ್ಲವೇ? ಕನ್ನಡನಾಡಿನಲ್ಲಿರುವ ಮೂರು ಕೋಟಿ ಜನಗಳಿಗೆ ಧೈರ್ಯವನ್ನು ತುಂಬತಕ್ಕ ಒಂದು ಶಬ್ದ ನಿಮ್ಮ ಸರ್ಕಾರದ ಪರವಾಗಿ ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ ಬಂತೇ? ಇಂತಹ ಮುಖ್ಯವಾದ ಪ್ರಶ್ನೆಗಳನ್ನು ಇಲ್ಲಿ ಪ್ರಶ್ನಿಸಬೇಕಾಗಿದೆ. ಮೂರುಕೋಟಿ ಜನರ ಹಿತಕ್ಕೆ ಧಕ್ಕೆಮಾಡಿರತಕ್ಕ ಬಗ್ಗೆ ಈ ಸರ್ಕಾರವನ್ನು ಅಧ್ಯಕ್ಷರ ಮುಖಾಂತರ ಒಂದು ಸವಾಲು ಇಟ್ಟು ಕೇಳುತ್ತೇನೆ.

ಇನ್ನೊಂದು ವಿಷಯ. ಈಗ ನೂತನವಾಗಿ ಕರ್ನಾಟಕವೆಂಬ ನಾಮಧೇಯವನ್ನು ಇಡತಕ್ಕ ಈ ರಾಜ್ಯದಲ್ಲಿ ಈಗಾಗಲೇ ಇರತಕ್ಕ ನ್ಯೂನತೆಗಳನ್ನು ದಕ್ಷತೆಯಿಂದ ನಿವಾರಣೆ ಮಾಡುತ್ತೇವೆಂದು ಹೇಳತಕ್ಕ ಮಾತಿಗೆ, ಗೋಜಿಗೆ ಹೋಗದೇ ಇರುವುದು ಬಹಳ ಶೋಚನೀಯ. ಇದರ ಬಗ್ಗೆ ಶ್ರೀರಂಗಪಟ್ಟಣದಲ್ಲಿ ಒಂದು ಭಿನ್ನಾಭಿಪ್ರಾಯ ಬಂತು. ಅದು ಒಂದು ರೀತಿ ಮ್ಯಾಜಿಕ್‌ನಂತಾಯಿತೆಂದೇ ಹೇಳಬೇಕಾಗುತ್ತದೆ. ಆದರೆ ರಾಜ್ಯದಲ್ಲಿರತಕ್ಕ ಬೃಹತ್ ಸಮಸ್ಯೆಗಳು ಹಾಗೆಯೇ ಉಳಿದಿವೆ. ಬಡತನವಂತೂ ನಿರ್ಮೂಲವಾಗಿಲ್ಲ. ಎಷ್ಟೋ ಜನ ಹೆಣ್ಣು ಮಕ್ಕಳು ಉದ್ಯೋಗವಿಲ್ಲದೆ ಬರಗಾಲದ ಬಗ್ಗೆ ಬಿಜಾಪುರ, ಕೋಲಾರ, ಇನ್ನೂ ಕೆಲವು ಕಡೆಗಳಲ್ಲಿ ಜನ ಅನ್ನ ಇಲ್ಲದೆ ಗೋಳಾಡುತ್ತಿರುವಾಗ ಈ ರಾಜ್ಯಕ್ಕೆ ನಿಮ್ಮ ಹೆಸರನ್ನು ಇಡಿ ಅಥವಾ ಬಸವಲಿಂಗಪ್ಪ ರಾಜ್ಯವೆಂಬ ಹೆಸರು ಇಡಿ, ಇದರಲ್ಲಿ ಏನೂ ಅಡ್ಡಿ ಇಲ್ಲ. ಈ ದೇಶದಲ್ಲಿ ಸನ್ಮಾನ್ಯ ಅಧ್ಯಕ್ಷರೆ ಯವರ ಕಾಲದಲ್ಲಿ ಅನೇಕ ಧರ್ಮಗಳನ್ನು ಆರಾಧನೆ ಮಾಡತಕ್ಕ ಜನರು ನಿಮ್ಮ ಹಿಡಿತದಲ್ಲಿಯೇ ಇದ್ದಾರೆ. ಅಂತಹ ಧರ್ಮದ ಜನರನ್ನು ರಕ್ಷಣೆ ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ. ಪಕ್ಷಾತೀತವಾಗಿ ನೀವು ರಾಜ್ಯವಾಳದಿದ್ದರೆ ಎಷ್ಟು ದಿವಸಗಳವರೆಗೆ ನೀವು ಉಳಿಯುತ್ತೀರಿ? ನೀವೂ ಉಳಿಯುವುದಿಲ್ಲ. ನಿಮ್ಮಲ್ಲಿ ಉಳಿಯುವಂಥ ರೀತಿನೀತಿಗಳೂ ಇಲ್ಲ. ನಿಮ್ಮಲ್ಲಿ ಒಂದು ನೀತಿ, ನಡತೆ ಏನೂ ಇಲ್ಲವೆಂದು ತಮ್ಮ ಮುಖಾಂತರ ಅವರಿಗೆ ಸ್ಪಷ್ಟಪಡಿಸಬೇಕಾಗಿದೆ. ಏಕೆಂದರೆ, ಈ ರಾಜ್ಯದ ಹೆಸರನ್ನು ಬದಲಾವಣೆ ಮಾಡುವ ಸಂತೋಷದಲ್ಲಿ ಬಡ ಜನರ ಕಷ್ಟಕಾರ್ಪಣ್ಯಗಳು ಜಾಗ್ರತೆಯಾಗಿ ಮಾಯವಾಗಬೇಕು. ಅಂತಹ ಒಂದು

ಶಪಥವನ್ನು ಮಾಡಬೇಕು. ಏಕೆಂದರೆ ಅಷ್ಟು ಕಾಲಾವಕಾಶವಿಲ್ಲ. ರಾಜ್ಯದ ಜನತೆ ನಮ್ಮನ್ನು ನೋಡುತ್ತಿದೆ. ಯಾವಾಗಲೂ ಒಬ್ಬ ಸದಸ್ಯನಿಗಿಂತ ಮಂತ್ರಿಯಾದವನಿಗೆ ಬಹು ದೊಡ್ಡ ಜವಾಬ್ದಾರಿ ಇರಬೇಕು. ಅವನ ಗುಣವೂ ಕೂಡ ಹಾಗೆಯೇ ಚೆನ್ನಾಗಿರಬೇಕು. ನನ್ನನ್ನು ಏಕೆ ನೋಡುತ್ತಿದ್ದೀರಿ? ಯಾವಾಗಲೂ ಮಂತ್ರಿಯಾಗಿರುವವನಿಗೆ ಕೈ, ಬಾಯಿ, ಕಚ್ಚೆ – ಇವು ಮೂರು ಚೆನ್ನಾಗಿರಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಈ ರಾಜ್ಯಕ್ಕೆ ಕರ್ನಾಟಕವೆಂದು ಹೆಸರಿಡಬೇಕೆಂದು ಈಗ ಎಷ್ಟೋ ಆಸಕ್ತಿ ವಹಿಸಿ ಈ ನಿರ್ಣಯವನ್ನು ತಂದಿದ್ದೇವೆ. ಈ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟ ವಿಷಯವನ್ನೇ ಬಿಟ್ಟು ಯಾರೋ ಉಪವಾಸ ಇದ್ದಾರೆ, ಬಟ್ಟೆ ತೊಟ್ಟುಕೊಂಡಿಲ್ಲ. ಬೀದಿಯಲ್ಲಿ ಓಡಾಡುತ್ತಿದ್ದಾರೆ ಎಂದು ಹೇಳುತ್ತಾ ಹೋದರೆ ಹೇಗೆ? ಇಂಥಾದ್ದನ್ನು ಯಾವ ಸಂದರ್ಭದಲ್ಲಿ ಹೇಳಬೇಕೋ ಆ ಸಂದರ್ಭದಲ್ಲಿ ಹೇಳಬೇಕು. ಈಗ ಕರ್ನಾಟಕವೆಂದು ಹೆಸರು ಇಡಬೇಕೆಂದಿರುವಾಗ ಯಾರ ಮೇಲೋ ಏನೋ ಸಿಟ್ಟು ಇಟ್ಟುಕೊಂಡು ಈ ರೀತಿಯಲ್ಲಿ ಇವರು ತಮ್ಮ ಸಿಟ್ಟು ಪ್ರದರ್ಶನ ಮಾಡಿದರೆ ಅದಕ್ಕೆ ನಾನೇನು ಹೇಳಲಿ?

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಶ್ರೀಮಾನ್ ಬಸಲಿಂಗಪ್ಪನವರಿಂದ ಪಾಠ ಕಲಿತುಕೊಂಡು ಹೇಳಬೇಕಾದಂಥ ವಯಸ್ಸು ನನ್ನ ವಯಸ್ಸಲ್ಲ. ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ ನಾನು ಅನುಭವದಲ್ಲಿ ಯಾರಿಗೂ ಕಡಿಮೆಯೇನೂ ಇಲ್ಲ; ಯಾವಾಗಲೂ ನಾನು ಇದ್ದುದ್ದನ್ನು ಇದ್ದ ಹಾಗೆ ಹೇಳುವವನು. ಇದರಿಂದ ಯಾವ ಒಂದು ನಿಷ್ಠೂರಕ್ಕೆ ಒಳಗಾದರೂ ನನಗೇನೂ ಚಿಂತೆ ಇಲ್ಲ. ರಾಜ್ಯಕ್ಕೆ ಕ್ಷೇಮವಾಗಬೇಕಾದರೆ ಎಂತಹ ಒಂದು ಕಠಿಣ ಪರಿಸ್ಥಿತಿಗೂ, ನಿಷ್ಠೂರಕ್ಕೂ ಸಿದ್ಧನಾಗಿದ್ದೇನೆ. ಅವರ ಆತ್ಮ ಮೊದಲು ಶುದ್ಧವಾಗಬೇಕು. ಹೊಟ್ಟೆಗೆ ಅನ್ನ ಇಲ್ಲದೆ, ಮೈಯಲ್ಲಿ ರಕ್ತವಿಲ್ಲದೆ ಪರಿತಪಿಸುತ್ತಿರುವ ಸಹಸ್ರಾರು ಜನರು ಇರುವಾಗ ಒಳಗಡೆ ಕಚೇರಿಯಲ್ಲಿ ಕೂತುಕೊಳ್ಳುವುದಕ್ಕೆ ನಿಮಗೆ ಸಿಲ್ಕ್ ಕೋಟು ಏತಕ್ಕೆಂದು ಇಡೀ ನಮ್ಮ ಕರ್ನಾಟಕ ಜನತೆ ರಾಜ್ಯಕ್ಕೆ ಹೊಸ ನಾಮಕರಣ ಮಾಡುವವರನ್ನು ಪ್ರಶ್ನೆ ಮಾಡುತ್ತದೆ. ಶೇಕಡ ಎಷ್ಟು ಜನರು ಈ ಹೊಸ ಹೆಸರಿನ ಬಗ್ಗೆ ಉತ್ತೇಜನ ಮಾಡುವವರು ಸಿಗುತ್ತಾರೆ? ಈ ದೇಶದಲ್ಲಿ ಸಮಸ್ಯೆಗಳು ಏನೇನೋ ಇವೆ. ಅವುಗಳಲ್ಲಿ ಬಹು ಮುಖ್ಯವಾದುದು ನಿರುದ್ಯೋಗ ಸಮಸ್ಯೆ. ಇದನ್ನು ನಿವಾರಣೆ ಮಾಡುವುದು ಬಹಳ ಮುಖ್ಯವಾದುದು. ಈ ದೇಶದಲ್ಲಿ ಪ್ರತಿಯೊಬ್ಬನೂ ನಾನು ಕಳ್ಳತನಕ್ಕೆ ಹೋಗದೆ ಮೋಸ ಮಾಡದೆ, ಸ್ವಶಕ್ತಿಯಿಂದ ಅನ್ನ, ಬಟ್ಟೆ ಉದ್ಯೋಗ ಒದಗಿಸಿಕೊಳ್ಳಬಲ್ಲೆ ಎಂಬುದಾಗಿ ಹೇಳುವಂತಿರಬೇಕು. ಇಂದಿರಾ ಗಾಂಧಿಯವರ ಆಶ್ರಯದಲ್ಲಿ ಬೆಳೆದಂಥ ಮಕ್ಕಳು ಹೆಚ್ಚು ಅಭಿವೃದ್ಧಿಯಾಗದೇ ಇರುವಂತೆ ಬ್ರಷ್ಟಾಚಾರ ಈ ಸರ್ಕಾರ ಮಾಡುತ್ತಿದೆ. ನಾನು ಯಾವಾಗಲೂ ಇದ್ದುದನ್ನು ಇದ್ದ ಹಾಗೆ ಹೇಳುವವನು.

ಅಧ್ಯಕ್ಷರೇ, ರಾಜ್ಯದ ಹೆಸರು ಕರ್ನಾಟಕವಾಗಬೇಕು ಎನ್ನುವಾಗಲೇ ಇಲ್ಲಿಯ ತನಕ ಇದ್ದ ಮೈಸೂರು ಎಂಬ ಹೆಸರು ಮಾಯವಾಗಬೇಕು. ಎನ್ನುವಾಗ, ಮುಂದೆ ಜಾರಿಗೆ ಬರತಕ್ಕ ಕರ್ನಾಟಕದಲ್ಲಿ ಯಾವುದೇ ಒಂದು ಜಾತಿಯನ್ನು ತುಳಿಯಬೇಕು ಅನ್ನುವ ಅಭಿಪ್ರಾಯ ಯಾರಿಗಾದರೂ ಇದ್ದರೆ ಅದು ಇಂದೇ ನಾಶವಾಗಬೇಕು, ಇಂದೇ ಎಲ್ಲರಲ್ಲೂ ಒಳ್ಳೆಯ ಭಾವನೆ, ಒಳ್ಳೆಯ ಹಾಗೂ ದಕ್ಷ ಆಡಳಿತ ರಾಜ್ಯದಲ್ಲಿ ಬೇಗ ಉಂಟಾಗಲಿ ಎಂದು ನಾನು ಆಶಿಸುತ್ತೇನೆ. ಇಂದು ರಾಜ್ಯದಲ್ಲಿ ಅನೇಕ ಅನ್ಯಾಯಗಳೂ ಅನೀತಿಯುತವಾದ ಕೆಲಸಗಳೂ ನಡೆಯುತ್ತಿವೆ. ಆತ್ಮೀಯತೆಯಿಂದ ದಕ್ಷತೆಯಿಂದ ಕೆಲಸ ಮಾಡತಕ್ಕ ಅಧಿಕಾರಿಗಳು ಇಂದು ಅನಾಹುತಗಳಿಗೆ ಈಡಾಗುತ್ತಿದ್ದಾರೆ. ಲಂಚಕೋರರ ಅದಕ್ಷ ಅಧಿಕಾರಿಗಳು ಹೆಚ್ಚುತ್ತಿದ್ದಾರೆ. ನಾನು ಎಲ್ಲರೂ ಎಂದು ಹೇಳುವುದಿಲ್ಲ ; ಸತ್ಯಸಂಧರಾದಂಥ ಅಧಿಕಾರಿಗಳು ರಾಜ್ಯದಿಂದ ಮಾಯವಾಗುತ್ತಿದ್ದಾರೆ. ಪ್ರಾಮಾಣಿಕತೆಯಿಂದ ದುಡಿಯತಕ್ಕ ಅಧಿಕಾರಿಗಳಿಗೆ ಈ ಸರ್ಕಾರದಲ್ಲಿ ಪುರಸ್ಕಾರ ಸಿಕ್ಕುವುದಿಲ್ಲ. ಇಲ್ಲಿ ಇರತಕ್ಕ ಹಿರಿಯ ಮಂತ್ರಿಗಳಾದ ಪಾಟೀಲರಲ್ಲಿ ನಾನು ಕೈ ಜೋಡಿಸಿ ಪ್ರಾರ್ಥಿಸಿಕೊಳ್ಳುತ್ತೇನೆ—ಒಳ್ಳೆಯ ಅಧಿಕಾರಿಗಳಿಗೆ ಪುರಸ್ಕಾರ ಕೊಡಿ, ಪ್ರೋತ್ಸಾಹ ಕೊಡಿ ಎಂದು. ಮಾನ್ಯ ಸಚಿವರ ಇಲಾಖೆಯಲ್ಲಿಯೇ ಒಂದು ದೊಡ್ಡ ಅನ್ಯಾಯದ ಕಥೆ ನಡೆದಿದೆ. ೨೫ ದಿನಗಳಿಂದಲೂ ಆ ಫೈಲು ಏನಾಗಿದೆಯೋ ತಿಳಿಯಲಿಲ್ಲ.

ಇನ್ನು ಅಧ್ಯಕ್ಷರು ವೇಳೆ ಆಯಿತೆಂದು ಗಂಟೆಯನ್ನು ಬಾರಿಸುತ್ತಿದ್ದಾರೆ. ಅವರ ಆಜ್ಞೆಯನ್ನು ನಾನು ಶಿರಸಾವಹಿಸಿ ಪಾಲಿಸಲೇಬೇಕು. ಅಧ್ಯಕ್ಷರೇ, ತಾವೀ ದಿವಸ ಈ ಮಾನ್ಯ ಸಭೆಗೆ ಅಧ್ಯಕ್ಷಿಣಿಯರಾಗಿ ಅದರಲ್ಲೂ ತಾವು ಇಲ್ಲಿ ನಾಗಕನ್ಯೆಯೋಪಾದಿಯಲ್ಲಿ ಅಷ್ಟೇ ಅಲ್ಲ, ತಾವು ಆ ನಾಗಕನ್ಯೆಯರಲ್ಲಿ ರತ್ನಪ್ರಾಯರಾದವರಾಗಿದ್ದೀರಿ. ಏಕೆಂದರೆ ನಾಗ ಪ್ಲಸ್ ರತ್ನ ಅಂದರೆ ಆ ನಾಗಕನ್ನೆಯರಿಗೆ ಹೇಗೆ ತಾವು ರತ್ನ ಪ್ರಾಯರಾಗಿದ್ದರೋ ಹಾಗೇ ಈ ಮಾನ್ಯ ಸಭೆಗೂ ತಾವು ರತ್ನ ಪ್ರಾಯರಾಗಿದ್ದೀರಿ. ಇಂದು ಆ ಅಧ್ಯಕ್ಷ ಪೀಠದಲ್ಲಿ ತಾವು ಒಂದು ರತ್ನದೋಪಾದಿಯಲ್ಲಿ ಶೋಭಿಸುತ್ತಿದ್ದೀರಿ. ಈ ದಿವಸ ಮೈಸೂರಿನ ಹೆಸರು ಕರ್ನಾಟಕ ಎಂದಾಗುತ್ತಿದೆ. ಈ ಹೆಸರುಗಳಿಗೆ ತಕ್ಕಂತೆ ಶ್ರೀ ಚಾಮುಂಡೇಶ್ವರಿಯು ತಮಗೂ, ರಾಜ್ಯಕ್ಕೂ ಒಳ್ಳೆಯದನ್ನು ಮಾಡಲೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಎಂ. ಬೆಳ್ಳಿಯಪ್ಪ (ಮಡಿಕೇರಿ) — ಮಾನ್ಯ ಅಧ್ಯಕ್ಷರೇ: ನಮ್ಮ ಸ್ನೇಹಿತರಾದಂಥ ಶ್ರೀಪುಟ್ಟಸ್ವಾಮಯ್ಯನವರ ಭಾಷಣವನ್ನು ನಾವು ಕೇಳುತ್ತಿರುವುದು ಇದೇ ಮೊದಲನೆಯ ಸಲವೇನೂ ಅಲ್ಲ ಅವರ ಭಾಷಣಗಳನ್ನು ಇದೇ ಸಭೆಯಲ್ಲಿ ನಾವಾಗಲೇ ಮೂರು ನಾಲ್ಕಾವರ್ತಿ ಕೇಳಿದ್ದೇವೆ ಅವರು ನನಗೆ ಸ್ನೇಹಿತರು. ಅವರು ಎಂದೇ ಭಾಷಣ ಮಾಡಲಿ, ಅವರದು ಒಂದೇ ಮಾತು ಒಂದೇ ರಾಗ, ಇವರೆಲ್ಲಾ ಶ್ರೀಮಂತ ವರ್ಗದವರು, ನಿಮ್ಮ ಪಾರ್ಟಿ ಏನು ಮಾಡಿದೆ, ನಿಮ್ಮ ಮಂತ್ರಿ ಮಂಡಲವೇನು ಮಾಡಿದೆ? ಎಂದು ಕೇಳುತ್ತಿರುವುದು ಅವರ ಭಾಷಣದ ತಿರುಳಾಗಿರುತ್ತೆ. ಒಂದಾನೊಂದು ಕಾಲಕ್ಕೆ ಈ ಕರ್ನಾಟಕ ದೇಶ, ಕನ್ನಡದ ಜನತೆ ಖಂಡತುಂಡವಾಗಿ ಹರಿದು ಹಂಚಿಹೋಗಿದ್ದಂಥ ಜನರನ್ನು ಮತ್ತು ದೇಶವನ್ನು ಒಂದುಗೂಡಿಸತಕ್ಕ ಪ್ರಯತ್ನ ಇಂದು ನಡೆದಿದೆ. ಆದರೆ ಇದರ ವಿಚಾರದಲ್ಲಿ ಅಷ್ಟೇನೂ ಹೆಚ್ಚು ಮಾತನಾಡಬೇಕಾದ್ದಿಲ್ಲ. ಆದರೆ ಈ ದಿವಸ ನಮ್ಮ ಮುಖ್ಯಮಂತ್ರಿಗಳು ಏನು ಒಂದು ಠರಾವನ್ನು ಮಂಡಿಸಿದ್ದಾರೆ ಆ ಠರಾವನ್ನು ನಾನು ಸ್ವಾಗತಿಸಿ ಅದಕ್ಕೆ ನನ್ನ ಬೆಂಬಲವನ್ನು ಕೊಡುತ್ತೇನೆ. ಈ ಸಂದರ್ಭದಲ್ಲಿ ನಾನು ಹೆಚ್ಚು ಹೇಳುವುದಕ್ಕೆ ಹೋಗದೆ ಒಂದೇ ಮಾತಿನಲ್ಲಿ ಹೇಳಬೇಕೆಂದರೆ, ೧೯೭೩ನೇ ಜುಲೈ ೨೫ನೇ ತಾರೀಖನ್ನು ನಾವು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾಗಿದೆ. ಈ ತಾರೀಖಿನಲ್ಲಿ ಇಟ್ಟ ಕರ್ನಾಟಕ ಎಂಬ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು. ಈ ದಿವಸ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಠರಾವನ್ನು ಮಂಡಿಸಿ ರಾಜ್ಯದ ಹೆಸರನ್ನು 'ಕರ್ನಾಟಕ' ಎಂದು ಕರೆಯಬೇಕೆಂದು ಹೇಳಿದ್ದಾರೆ, ಇದನ್ನು ಹಿಂದೆಯೇ ಅಂದರೆ, ೧೯೫೬ನೇ ನವೆಂಬರ್ ಒಂದನೇ ತಾರೀಖಿನ ದಿನವೇ ಮಾಡಬೇಕಾಗಿತ್ತು. ಆ ದಿವಸ ಮಾಡದೆ ಇದ್ದುದರಿಂದ ನನಗೆ ಈಗ ಆ ದಿನದ ನೆನಪೂ ಕೂಡ ಬರುತ್ತಿದೆ. ಆದರೆ ನಮ್ಮ ಕೊಡಗು ರಾಜ್ಯ ಈ ಹಿಂದೆ ಅಂದರೆ ೧೮೩೪ರಿಂದ ೧೯೪೭ರವರೆವಿಗೂ ಬ್ರಿಟಿಷರ ಆಡಳಿತಕ್ಕೆ ಒಳಪಟ್ಟು ಅದೊಂದು (ಸಿ) ಸ್ಟೇಟಾಗಿ (ಸಿ) ರಾಜ್ಯವಾಗಿ ಉಳಿದುಕೊಂಡು ಬಂದಿತ್ತು. ಇದು ಒಂದು ಚಿಕ್ಕ ಜಿಲ್ಲೆಯಾಗಿದೆ. ಇದು ೧೯೫೬ರವರೆಗೂ ಒಂದು ಪ್ರತ್ಯೇಕ ರಾಜ್ಯವಾಗಿ ಉಳಿದಿತ್ತು. ಯಾವಾಗ ಇಲ್ಲಿ ಮತ್ತೆ ಕರ್ನಾಟಕ ರಾಜ್ಯ ಉದಯವಾಗಬೇಕು ಎಂಬ ಚಟುವಟಿಕೆಗಳು ಪ್ರಾರಂಭವಾದ ಮೇಲೆ ನಾವು ಪ್ರತ್ಯೇಕವಾಗಿ ಉಳಿಯುವುದು ಸರಿಯಲ್ಲ ಎಂದು ನಾವೂ ಕೂಡ ಬಂದು ಕರ್ನಾಟಕದಲ್ಲಿ ಸೇರಿಕೊಂಡೆವು. ನಾವು ಆ ದಿವಸ ಇಲ್ಲಿ ಬಂದು ಒಂದುಗೂಡಬೇಕಾಗಿದ್ದರೆ ಎಲ್ಲ ಕನ್ನಡಿಗರ ಬಗ್ಗೆ ನಮಗಿದ್ದ—ಪ್ರೀತಿ ಪ್ರೇಮ, ಒಂದು ವಿಶ್ವಾಸ, ಒಂದು ಸೌಹಾರ್ದಭಾವನೆಯಿಂದ ಇಲ್ಲಿ ಬಂದು ಸೇರಿದೆವು ನಮ್ಮ ಹಾಗೆಯೇ ಉತ್ತರ ಕನ್ನಡ, ದಕ್ಷಿಣ ಕನ್ನಡ, ಮುಂಬೈ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕದ ಎಲ್ಲಾ ಜನರೂ ಇದೇ ಒಂದು ಪ್ರೀತಿ ವಿಶ್ವಾಸ, ಪ್ರೇಮ, ಸೌಹಾರ್ದ ಭಾವನೆಗಳಿಂದ ಬಂದು ಒಟ್ಟುಗೂಡಿದರು. ಹಾಗೆ ಒಟ್ಟುಗೂಡಿದ ಎಲ್ಲಾ ಜನರೂ ಕರ್ನಾಟಕ ರಾಜ್ಯ ಸ್ಥಾಪನೆ ಆಗಬೇಕು ಅನ್ನತಕ್ಕ ಆಸೆಯಿಂದಲೇ ಬಂದವರಾಗಿದ್ದಾರೆ. ೧೯೫೬ರಿಂದ ಇಲ್ಲಿಯವರೆಗೂ ಯಾರು ಯಾರು ಈ ಕರ್ನಾಟಕ ರಾಜ್ಯ ಸ್ಥಾಪನೆಗೆ ಏನೇನು ಪ್ರಯತ್ನ ಪಟ್ಟರು, ಅವರು ಏನೇನು ಕಷ್ಟನಷ್ಟಗಳಿಗೆ ಗುರಿಯಾದರು, ಅವರು ಏನು ತಮ್ಮ ಸ್ಥಾನಮಾನಗಳನ್ನು ಕಳೆದುಕೊಂಡರು, ಅನ್ನತಕ್ಕ ಒಂದು ಪ್ರಶ್ನೆಯನ್ನು ನಮ್ಮ ಕೊಡಗಿನ ಜನರ ಬಗ್ಗೆ ನಾನು ಇಂದು ಸ್ಮರಿಸದಿದ್ದರೆ ಅದು ತಪ್ಪಾದೀತು. ಈಗಿನ ರಾಜಕೀಯದ ವ್ಯತ್ಯಾಸ ಏನೇ ಇರಲಿ, ಶ್ರೀಮಾನ್ ನಿಜಲಿಂಗಪ್ಪನವರ ಜೊತೆಯಲ್ಲಿ ಶ್ರೀ ಪೂಣಚ್ಚ ಅವರೂ ಮತ್ತು ಬೇಳ್ ಮಾಡ—ಕರುಂಬಯ್ಯ ಇನ್ನೂ ಅನೇಕರು ಬಹಳ ಪ್ರಯತ್ನಗಳನ್ನು ನಡೆಸಿದ್ದಾರೆ. ಅವರನ್ನು ನಾನು ಈ ಸಂದರ್ಭದಲ್ಲಿ ನೆನೆಯಬೇಕಾಗಿದೆ. ಇಂದಿಗೆ ರಾಜ್ಯ ವಿಲೀನೀಕರಣವಾಗಿ ೧೭ ವರ್ಷಗಳಾಯಿತು. ಈಗ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡತಕ್ಕ ಒಂದು ಸುದಿನ ಉದಯವಾಯಿತು. ಹೀಗೆ ಒಂದು ಹೆಸರನ್ನು ಬದಲಾಯಿಸುವುದಕ್ಕೇ ೧೭ ವರ್ಷಗಳನ್ನು ತೆಗೆದುಕೊಂಡ ಮೇಲೆ ನಾವು ಇನ್ನು ಈ ಒಟ್ಟುಗೂಡಿದ ಕನ್ನಡ ಪ್ರದೇಶಗಳು ಅಂದರೆ, ಬಿಜಾಪುರ, ರಾಯಚೂರು, ಬೆಳಗಾಂ ಗುಲ್ಬರ್ಗ ಮತ್ತು ಬಿದರ್ ಇತ್ಯಾದಿ ಜಿಲ್ಲೆಗಳಲ್ಲಿ ಪದೇ ಪದೇ ಬೀಳುತ್ತಿರುವ ಕ್ಷಾಮದಿಂದ ಜನರು ಅನೇಕ ತೊಂದರೆಗಳಿಗೀಡಾಗಿದ್ದರೂ ಏಕೆ ಅವರಿಗೆ ಇಲ್ಲಿಯತನಕ ಒಂದು ರಕ್ಷಣೆ ಸಿಕ್ಕಲಿಲ್ಲ ಎಂಬುದನ್ನು ಪರಿಶೀಲಿಸಬೇಕಾಗಿದೆ. ರಾಜ್ಯ ದೊಡ್ಡದಾದರೂ ಜನರೇಕೆ ಉದ್ಧಾರವಾಗಲಿಲ್ಲ? ಇದಕ್ಕೆ ಕಾರಣಗಳು ಒಂದಲ್ಲ ಹಲವಾರು ಇರುತ್ತವೆ. ಇನ್ನು ಮುಂದಾದರೂ ಹಾಗೆ ಆಗಲಿಕ್ಕೆ ಅವಕಾಶವಾಗದಿರಲೆಂದು ಹಾರೈಸುತ್ತೇನೆ. ರಾಜ್ಯದ ಸರ್ವತೋಮುಖವಾದ ಏಳಿಗೆಗೆ ಎಲ್ಲಾ ಶಾಸಕರೂ, ಮಂತ್ರಿಗಳೂ, ಸರ್ಕಾರದಲ್ಲಿರತಕ್ಕ ಅಧಿಕಾರಿಗಳೂ ಒಂದೇ ಮನಸ್ಸಿನಿಂದ ಕೆಲಸ ಮಾಡಬೇಕು. ರಾಜ್ಯದಲ್ಲಿರತಕ್ಕ ಮೂರೂವರೆ ಕೋಟಿ ಕನ್ನಡಿಗರೆಲ್ಲರೂ ಕನ್ನಡ ಮಾತೆಯ, ಭಾರತಮಾತೆಯ ಮಕ್ಕಳು ಎಂಬ ಭಾವನೆ ಎಲ್ಲರಲ್ಲೂ ಮೂಡಬೇಕು. ಒಟ್ಟು ಮೂರೂವರೆ ಕೋಟಿ ಕನ್ನಡಿಗರನ್ನು ಒಂದು ಸರಿಸಮಾನವಾದ ರೀತಿಯಲ್ಲಿ ಉದ್ಧಾರವಾಗುವುದಕ್ಕೆ ಸಹಾಯಕವಾಗುವಂತೆ ಉದ್ಯೋಗ ಉತ್ಪನ್ನಗಳ ಮಾರ್ಗವನ್ನು ಕಲ್ಪಿಸಿ ಎಲ್ಲರ ಏಳಿಗೆಗೆ ನಾವೆಲ್ಲರೂ ಏಕಮನಸ್ಸಿನಿಂದ ದುಡಿಯೋಣ ಎಂಬ ಪ್ರಮಾಣವನ್ನು ಇಂದೇ ತೆಗೆದುಕೊಳ್ಳೋಣ ಎಂದು ಹೇಳಬಯಸುತ್ತೇನೆ.

ನಮಗೆ ಒಂದು ವಿಷಯದಲ್ಲಿ ಬೇಸರ ಬರುವುದು ಏನೆಂದರೆ, ನಾವೆಲ್ಲಾ ಮೈಸೂರು ದೇಶಕ್ಕೆ ೧೯೫೬ರಲ್ಲಿ ಸೇರಿದವು. ಬೊಂಬಾಯಿ ಕರ್ನಾಟಕ ಹೈದರಾಬಾದು ಕರ್ನಾಟಕ ಕೊಡಗು ಕರ್ನಾಟಕ, ಮುಂತಾದ ಭಾಗಗಳು ಮತ್ತು ಹಳೆಯ ಮೈಸೂರು ಸೇರಿ ಒಂದು ದೇಶವಾಯ್ತು. ೧೯೫೬ನೇ ಇಸವಿ ನವೆಂಬರಿನಿಂದ ಇಲ್ಲಿಯವರೆಗೆ ಬೇರೆ ಬೇರೆ ಭಾಗಗಳಿಂದ ಬಂದ ಆಫೀಸರುಗಳಿಗೆ ಮತ್ತು ನೌಕರರಿಗೆ ಸೀನಿಯಾರಿಟಿ ಪಟ್ಟಿಯಾಗಿಲ್ಲ. ಇವರಿಂದ ತೊಂದರೆಯಾಗಿದೆ, ಅದನ್ನು ಸರಿಯಾಗಿ ಮಾಡಿ ನೌಕರರು ಯಾವ ಭಾಗದಿಂದಲೇ ಬರಲಿ, ಎಲ್ಲರಿಗೂ ಸರಿಯಾದ ಬಡ್ತಿ, ಸ್ಥಾನಮಾನ ದೊರೆಯುವಂತೆ ನೋಡಿಕೊಳ್ಳಬೇಕು. ಕನ್ನಡತನ ಮತ್ತು ಕನ್ನಡದ ಜನರ ಉದ್ಧಾರಕ್ಕೆ ಶ್ರಮಿಸಬೇಕು.

3-[illegible]0 P.M.

ಕೆಲವು ತಿಂಗಳ ಹಿಂದೆ ಒಬ್ಬ ರಾಜಕೀಯ ಮುಖಂಡರು ಭಾಷಣ ಮಾಡುವಾಗ ಇದು ಕನ್ನಡನಾಡು ಇಲ್ಲಿ ಕೇರಳದವರು ಅಥವ ಮಾಪ್ಪಿಳ್ಳೆಯವರು ಇರಬಾರದು, ಅವರನ್ನು ಹೊಡೆದು ಓಡಿಸಬೇಕು ಎಂದು ಹೇಳಿದರು. ನಮ್ಮ ದೇಶದಲ್ಲಿ ತೆಲುಗರು, ತಮಿಳರು ಕೇರಳೀಯರು, ಎಲ್ಲರೂ ಇರುವಾಗ ಹಾಗೆ ಹೇಳಲು ಅವಕಾಶ ಕೊಡದೆ ಕನ್ನಡಿಗರು ಒಳ್ಳೆಯ ಜನರು ಎಂದು ತೋರಿಸಿ ನಮ್ಮ ದೇಶದ ಉದ್ಧಾರಕ್ಕೆ ಶ್ರಮಿಸಬೇಕು ಎಂದು ಕೇಳಿಕೊಂಡು ಈ ದಿವಸ ಮಾತನಾಡಲು ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ ಶ್ರೀ ಎಸ್. ವೈ ಪಾಟೀಲ್ (ಸಿಂಧಗಿ).—ಮಾನ್ಯ ಅಧ್ಯಕ್ಷರೇ ಕನ್ನಡನಾಡಿನ ಸಮರ್ಥ ಮುಖಂಡರಲ್ಲಿ ಒಬ್ಬರಾದ ಶ್ರೀ ಕೆ. ಹನುಮಂತಯ್ಯನವರು ಕರ್ನಾಟಕ ರಾಜ್ಯಕ್ಕೆ ಕನ್ನಡ ನಾಡಿಗೆ ಕಷ್ಟಪಟ್ಟವರಲ್ಲಿ ಒಬ್ಬರಾಗಿದ್ದಾರೆ. ಕರ್ನಾಟಕವೆಂದು ಹೆಸರಿಡುವುದಕ್ಕೆ ನಮ್ಮ ಶ್ರೀ ದೇವರಾಜ ಅರಸರ ಮಂತ್ರಿಮಂಡಲದ ಎಲ್ಲ ಸದಸ್ಯರು ಜವಾಬ್ದಾರಿ ವಹಿಸಿರಬಹುದು, ಅವರು ಸಹಾನುಭೂತಿ ತೋರಿಸಿರಬಹುದು. ಹೆಚ್ಚು ತ್ಯಾಗ ಮಾಡಿರಬಹುದು. ಆದರೂ ಈ ಸಂದರ್ಭದಲ್ಲಿ ನಾನು ಹಳೆಯ ಮೈಸೂರಿನ ಸದಸ್ಯರಿಗೆ ಅಭಿನಂದಿಸಬೇಕಾಗಿದೆ. ಏಕೆಂದರೆ ಕರ್ನಾಟಕವೆಂದು ಹೆಸರಿಡಬೇಕೆಂದು ೧೯೫೬ನೆಯ ಇಸವಿ ನವೆಂಬರ್ ೧೧ರಂದು ನಾನು ಅಸೆಂಬ್ಲಿಯಲ್ಲಿ ಹೇಳಿದಾಗ ಅನೇಕರು ಹೇಳಿದಂತೆ ಶ್ರೀ ಹನುಮಂತಯ್ಯನವರು ಮುಖ್ಯಮಂತ್ರಿ ಪದವಿಯನ್ನು ಬಿಡುವುದರಲ್ಲಿದ್ದರು ಅವರ ತ್ಯಾಗ ಬುದ್ಧಿ, ಕರ್ನಾಟಕ ರಾಜ್ಯ ನಿರ್ಮಾಣ ಮಾಡಲು ಅವರು ಮಾಡಿರುವ ಉತ್ತಮವಾದ ಕೆಲಸ ಏನಿದೆ ಅದನ್ನು ಎಲ್ಲರೂ ಒಪ್ಪಬೇಕಾಗಿದೆ. ತ್ಯಾಗ ಮಾಡುವ ಮನುಷ್ಯರಿಗೆ ಕೀರ್ತಿ ಬರಬಹುದು. ಆದರೆ ಅದಕ್ಕೆ ತಕ್ಕಂತೆ ಅವರು ಅನೇಕ ಕಷ್ಟವನ್ನೂ ಅನುಭವಿಸಬೇಕಾಗುವುದು. ಹಳೆಯ ಮೈಸೂರಿನ ಸದಸ್ಯರು ಒಳ್ಳೆಯ ಪ್ರೀತಿಯಿಂದ ಈ ನಿರ್ಣಯಕ್ಕೆ ಒಪ್ಪಿಗೆ ನೀಡಿದ್ದಾರೆ. ಮೈಸೂರು ರಾಜವಂಶದವರೂ ಸಹ ಕನ್ನಡನಾಡಿಗಾಗಿ ಶ್ರಮಿಸಿದ್ದಾರೆ. ೧೯೫೬ರಲ್ಲಿ ಮಹಾನವಮಿಯ ದಿನ ಹೈದರಾಬಾದು ಕರ್ನಾಟಕದವರಿಗೆ ಮಹಾರಾಜರೂ ದರ್ಶನ ಕೊಟ್ಟರು. ಹಿಂದೂಗಳು ಮತ್ತು ಮುಸ್ಲಿಮರು ಎಂದು ಬೇಧಮಾಡದೆ ಎಲ್ಲರ ಮೇಲೂ ಮಹಾರಾಜರು ಅಭಿಮಾನವಿಟ್ಟಿದ್ದರು. ಅದನ್ನು ತಿಳಿದು ನನಗೆ ಆನಂದವಾಯಿತು. ಕರ್ನಾಟಕಕ್ಕಾಗಿ ಹಳೆಯ ಮೈಸೂರಿನವರೂ ಟ್ರೆಜರಿ ಬೆಂಚಿನವರೂ ಮತ್ತು ಪತ್ರಿಕಾಕರ್ತರು ಮುಂತಾದವರು ಮಾಡಿರುವ ಸೇವೆಯನ್ನು ಸ್ಮರಿಸದೆ ಇರಲು ಸಾಧ್ಯವಿಲ್ಲ. ಅಂದಾನಪ್ಪ ದೊಡ್ಡಮೇಟಿಯವರು, ಮುದವೀಡು ಕೃಷ್ಣರಾಯರು, ಶಂಕರಗೌಡರು ಮುಂತಾದವರು ಕರ್ನಾಟಕಕ್ಕಾಗಿ ಪ್ರಾಣಾರ್ಪಣೆ ಮಾಡುವುದಕ್ಕೆ ಉಪವಾಸ ಮಾಡುವುದಕ್ಕೆ ತಯಾರಾಗಿದ್ದರು. ನೀವು ರಾಜೀನಾಮೆ ಕೊಡಿ ಎಂದು ನನಗೆ ಹೇಳಿದರು. ೧೨ನೆಯ ಶತಮಾನದಿಂದ ಬಸವಣ್ಣನವರು ಮುಂತಾದವರು ಕೂಡ ಕನ್ನಡನಾಡಿಗಾಗಿ ಶ್ರಮಿಸಿದ್ದಾರೆ ಆ ನ. ಕೃಷ್ಣರಾಯರು ಕುವೆಂಪು ಮುಂತಾದ ಕವಿಗಳು ಮತ್ತಿತರ ಮುಖಂಡರು ಕರ್ನಾಟಕಕ್ಕಾಗಿ ಬಹಳ ಪ್ರಯತ್ನಮಾಡಿದ್ದಾರೆ. ಮಾನ್ಯ ದೇವರಾಜ ಅರಸರವರು ಕರ್ನಾಟಕ ಎಂದು ಹೆಸರಿಡಲು ಮನಸ್ಸು ಮಾಡಿದರು, ಶ್ರೀಯುತರುಗಳಾದ ಹನುಮಂತಯ್ಯನವರು, ವೀರೇಂದ್ರ ಪಾಟೀಲರು ನಿಜಲಿಂಗಪ್ಪನವರು, ಮುಂತಾದವರ ಕಾಲದಲ್ಲಿ ಈ ಕೆಲಸವಾಗಲಿಲ್ಲ ಎಂದು ಕೆಲವರು ಹೇಳಿದ್ದಾರೆ, ಇದು ಸತ್ಯ ಮಹಾತ್ಮ ಗಾಂಧಿಯವರು. ಸುಭಾಷ್ ಚಂದ್ರಬೋಸರು ಮುಂತಾದವರು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಹೆಸರುವಾಸಿಯಾಗಿರುವಂತೆ ಕರ್ನಾಟಕಕ್ಕಾಗಿ ರಾಜಮಹಾರಾಜರುಗಳೂ ಹಿಂದಿನ ಸರ್ಕಾರದವರು ಬಹಳವಾಗಿ ಕಷ್ಟಪಟ್ಟಿದ್ದಾರೆ. ಇವರೆಲ್ಲರೂ ಕೂಡ ಇದರ ಕೀರ್ತಿಗೆ ಕಾರಣರು. ಇದಕ್ಕಾಗಿ ಈ ಸಭೆಯ ಸದಸ್ಯರೆಲ್ಲರೂ ದೇವರಾಜ ಅರಸರನ್ನು ಹೊಗಳಿದ್ದಾರೆ. ಈ ಠರಾವನ್ನು ಅವರು ತಂದರು. ಹಿಂದೆ ಕರ್ನಾಟಕವೆಂದು ಹೆಸರಿಡಬೇಕು, ಇಲ್ಲದಿದ್ದರೆ ಜನರು ಗೌರವ ಕೊಡುವುದಿಲ್ಲ, ಹೆಸರಿಟ್ಟು ಕೀರ್ತಿ ಪಡೆದುಕೊಳ್ಳಿ, ಹಾಗೆ ಮಾಡದಿದ್ದರೆ ಸತ್ಯಾಗ್ರಹ ನಾವು ಮಾಡಬೇಕಾಗುವುದುಎಂದು ನಾನು ಹೇಳಿದೆ ಇದು ಔಪಚಾರಿಕವಾದ ಮಾತಲ್ಲ. ಕರ್ನಾಟಕ ಎಂದು ಹೆಸರಿಟ್ಟದ್ದರಿಂದ ೩ ಕೋಟಿ ಜನರು ಆನಂದಪಡುವರು ಇಂಥ ಸೌಭಾಗ್ಯದ ದಿನ ಇಂದು ಬಂದಿದೆ. ಶ್ರೀಮಾನ್ ಗೋಪಾಲಗೌಡರು, ಶ್ರೀಮಾನ್ ದೊಡ್ಡ ಮೇಟಿಯವರು ಇಂದಿಲ್ಲದಿದ್ದರೂ ಅವರ ಆತ್ಮ ಕರ್ನಾಟಕವೆಂಬ ಹೆಸರನ್ನು ಮೈಸೂರಿಗೆ ಎಂದಿಡುವರೋ ಎಂದು ಎದುರು

(ಶ್ರೀ ಎಸ್. ವೈ. ಪಾಟೀಲ್)

ನೋಡುತ್ತಿತ್ತು. ಇಂದು ಅವರ ಆತ್ಮಕ್ಕೆ ತೃಪ್ತಿಯಾಗಿದೆ. ಕರ್ನಾಟಕವೆಂದು ಕರೆಯಲು ಪಾರ್ಲಿಮೆಂಟಿನಲ್ಲಿ ಠರಾವು ಅಂಗೀಕಾರವಾಗಬೇಕು. ಭಾವೈಕ್ಯದ ದೃಷ್ಟಿಯಿಂದ ಈಗ ಬಹಳ ಉತ್ತಮವಾದ ಕೆಲಸ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಈ ರಾಜ್ಯಕ್ಕೆ 'ಕರ್ನಾಟಕ' ಎಂದು ಹೆಸರನ್ನಿಡುವುದು ಅಷ್ಟು ಆನಂದವಾಗದೆ ಇದ್ದರೂ, ಭಾವನಾ ದೃಷ್ಟಿಯಿಂದ ಆನಂದವಾಗುತ್ತದೆ. ೩ ಕೋಟಿ ಜನತೆಯಲ್ಲಿ ೧೯ ಜಿಲ್ಲೆಗಳ ಸ್ಥಿತಿ ಸಮಾನವಾಗಿ ಆಗಬೇಕು. ಆರ್ಥಿಕ ದೃಷ್ಟಿಯಿಂದ, ಸಾಮಾಜಿಕ ದೃಷ್ಟಿಯಿಂದ ಹರಿಜನರಿಗೆ ಕೆಲವು ಸವಲತ್ತುಗಳು ಸಿಕ್ಕುತ್ತಿವೆ. ವಾಟಾಳ್ ನಾಗರಾಜ್‌ರವರು ನಾವು ಹರಿಜನರಾಗಬೇಕಾದರೆ ಏನು ಮಾಡಬೇಕು ಎಂದು ಕೇಳಿದರು. ಕೀಳು ಮಟ್ಟದವರ ಪರಿಸ್ಥಿತಿ ಹರಿಜನ ಅಲ್ಲದವರಲ್ಲಿಯೂ ಇದೆ. ಹರಿಜನರಿಗೆ ಪ್ರೊಟೆಕ್ಷನ್ ಕೊಟ್ಟಿರುವುದಕ್ಕೆ ನಾನು ವಿರೋಧ ಮಾಡುತ್ತಿಲ್ಲ. ಎಲ್ಲ ಹರಿಜನರ ಕಲ್ಯಾಣವಾಗಲಿ, ಆದರೆ ಬ್ರಾಹ್ಮಣರಲ್ಲಿಯೂ, ಲಿಂಗಾಯಿತರಲ್ಲಿಯೂ ಅದೇ ರೀತಿ ಬಡತನ ಇದೆ. ಬಡತನದಲ್ಲಿ ಯಾರೇ ಇರಲಿ ಅವರಿಗೆ ಸಹಾಯ ಮಾಡಬೇಕು. ಲಿಂಗವನ್ನು ಯಾರು ಧರಿಸುತ್ತಾರೋ ಅವರು ಲಿಂಗಾಯಿತರು. ಬ್ರಹ್ಮಜ್ಞಾನವುಳ್ಳವರು ಬ್ರಾಹ್ಮಣರು. ಈವೊತ್ತು ಬಸವಲಿಂಗಪ್ಪನವರು ಹರಿಜನರು ಅಲ್ಲ, ಮಲ್ಲಿಕಾರ್ಜುನಸ್ವಾಮಿಯವರು ಹರಿಜನರು ಅಲ್ಲ, ಅವರ ತಂದೆತಾಯಿಗಳು ಆ ಹೆಸರು ಹೇಳಬಹುದು. ಹಾಗೆಯೇ ಕೆ. ಹೆಚ್. ಪಾಟೀಲರು ಹಿಂದುಳಿದವರಲ್ಲ. ಆದ್ದರಿಂದ ಹರಿಜನರಾಗಲಿ ಅಥವಾ ಇನ್ನಿತರ ಕೋಮಿನವರಾಗಲಿ ಎಲ್ಲರೂ ಉತ್ತಮ ಸ್ಥಿತಿಗೆ ಬರಬೇಕು. ಕರ್ನಾಟಕ ರಾಜ್ಯ ಸರ್ವಾಂಗ ಸಂಪೃದ್ಧಿ ರಾಜ್ಯವಾಗಬೇಕು. ಈ ರಾಜ್ಯದಲ್ಲಿ ಹನುಮಂತಯ್ಯನವರ ಹೆಸರು ಹೇಳಿದರೂ ಸಹಿತ ಜನರು ಬೆಲೆ ಕೊಡುತ್ತಾರೆ. ಅದೇ ರೀತಿ ಮೊರಾರ್ಜಿ ದೇಸಾಯ್‌ರವರಿಗೆ ನಮ್ಮ ದೇಶದಲ್ಲಿ ಬೆಲೆ ಇದೆ. ಕಾಂಗ್ರೆಸ್ (ಓ) ಇರಲಿ, ಕಾಂಗ್ರೆಸ್ (ಆರ್) ಇರಲಿ ಅಥವಾ ರಿಪಬ್ಲಿಕನ್ ಪಾರ್ಟಿ ಇರಲಿ, ಯಾರೇ ಇರಲಿ ಎಲ್ಲರೂ ಕರ್ನಾಟಕ ಮಾತೆಯ ಮಕ್ಕಳು. ಈ ಕರ್ನಾಟಕ ಹೆಸರಿಗೆ ಇತಿಹಾಸ ಇದೆ, ವಿಶ್ವೇಶ್ವರಯ್ಯನವರು, ಹನುಮಂತಯ್ಯನವರು, ಮಿರ್ಜಾ ಇಸ್ಮಾಯಿಲ್‌ರವರು ಇವರೆಲ್ಲರೂ ಕನ್ನಡಿಗರು. ನಾವು ಈ ಸಭೆಯಲ್ಲಿ ಆನಂದವಾಗಿ ಮಾತನಾಡುವ ಕಾಲಕ್ಕೆ ಬಿಜಾಪುರ ಜಿಲ್ಲೆಯಲ್ಲಿ ದುಷ್ಕಾಲ ಪರಿಸ್ಥಿತಿ ಬಂದಿದೆ. ಎಲ್ಲಾ ವ್ಯವಸ್ಥೆ ಮಾಡುತ್ತಿದ್ದೇವೆ ಎಂದು ರೆವಿನ್ಯೂ ಮಿನಿಸ್ಟರ್ ಹೇಳುತ್ತಿದ್ದಾರೆ. ಆದರೂ ಅಲ್ಲಿನ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ. ಇನ್ನೂ ಮಾಡಬೇಕಾದ ಕೆಲಸ ಬಹಳಷ್ಟು ಇದೆ. ಅದನ್ನು ಕೂಡಲೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕರ್ನಾಟಕ ರಾಜ್ಯದಲ್ಲಿ ಸಮರ್ಥ ಆಡಳಿತ ಆಗಬೇಕು. ಅದು ಇಡೀ ದೇಶಕ್ಕೆ ಮಾರ್ಗದರ್ಶನ ಕೊಡಬೇಕು. ಈ ರಾಜ್ಯದ ೧೯ ಜಿಲ್ಲೆಗಳಲ್ಲಿ ಒಂದೇ ತರಹವಾದ ವ್ಯವಸ್ಥೆ ಇರಬೇಕು. ಮಂಡ್ಯ ಜಿಲ್ಲೆಯಲ್ಲಿ ಬರೀ ನೀರಾವರಿ ಪ್ರದೇಶ ಇರುವ ಹಾಗೆ ವಿಶ್ವೇಶ್ವರಯ್ಯನವರು ಮಾಡಿದ್ದಾರೆ. ಅದೇ ರೀತಿ ಸಹಾಯವನ್ನು ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಗೂ ಮಾಡಿಕೊಡಬೇಕು. ಈ ರಾಜ್ಯಕ್ಕೆ ಉತ್ತಮ ಹೆಸರು ಇಡುವಾಗ ನನಗೆ ಕೆಟ್ಟ ಮಾತನಾಡುವುದಕ್ಕೆ ಮನಸ್ಸು ಇಲ್ಲ. ಬಿಜಾಪುರ ಜಿಲ್ಲೆಯ ದುಷ್ಕಾಲ ಪರಿಸ್ಥಿತಿ ಬಗ್ಗೆ ಪುನಃ ಈ ಸದನದಲ್ಲಿ ಚರ್ಚೆಗೆ ಬರಲಾರದಂತೆ ಅಪ್ಪರ್ ಕೃಷ್ಣಾಪ್ರಾಜೆಕ್ಟಿನ ಕೆಲಸ ಮುಗಿಸಿ ಬಿಜಾಪುರ ಜಿಲ್ಲೆಗೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಡಬೇಕು. ಈ ಕರ್ನಾಟಕ ಪ್ರಾಂತ್ಯ ನಿರ್ಮಾಣವಾಗಲಿಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು, ಶ್ರೀಮಾನ್ ವೀರೇಂದ್ರ ಪಾಟೀಲರು ಸಹ ಕಾರಣರು ಇದ್ದಾರೆ. ಹಳೇ ಮೈಸೂರು ಸದಸ್ಯರು ಮೊದಲು ಈ ಹೆಸರಿಗೆ ವಿರೋಧ ಮಾಡಿದ್ದರೂ ಈಗ ಈ ಠರಾವಿಗೆ ಅನುಮತಿಯನ್ನು ಕೊಟ್ಟಿದ್ದಾರೆ. ಎಲ್ಲರೂ ಇದಕ್ಕಾಗಿ ತ್ಯಾಗ ಮಾಡಿದ್ದಾರೆ. ಕರ್ನಾಟಕ ಪ್ರಾಂತದಲ್ಲಿ ಎಲ್ಲ ನೀರಾವರಿ ಕೆಲಸಗಳು ನಡೆದು ಅದನ್ನು ಸರ್ವಾಂಗ ಸುಂದರವಾಗಿ ಮಾಡಿ ಕರ್ನಾಟಕ ರಾಜ್ಯದಿಂದ ಮತ್ತೊಂದು ಕಡೆಗೆ ಅನ್ನಕ್ಕಾಗಿ, ಬಟ್ಟೆಗಾಗಿ ಹೋಗಲಾರದಂತೆ ಮಾಡಬೇಕು. ಹಾಗೆ ಮಾಡಬೇಕಾದರೆ ಬಿಜಾಪುರ ಜಿಲ್ಲೆಗೆ ಆದಷ್ಟು ಬೇಗನೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕು. ಆಗ ಬಿಜಾಪುರ ಜಿಲ್ಲೆ ಸರ್ವಾಂಗ ಸುಂದರವಾಗಿ ಪ್ರತಿಯೊಂದು ದಿಶೆಯಲ್ಲಿಯೂ ಮುಂದಕ್ಕೆ ಬರುತ್ತದೆ. ಅದಕ್ಕೆ ಉತ್ತಮವಾದ ಕೆಲಸಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರಿಗೆ, ಕರ್ನಾಟಕ ರಾಜ್ಯದ ಹೆಸರಿನ ಸಲುವಾಗಿ ಪ್ರಯತ್ನ ಮಾಡಿದಂಥ ಸಮಗ್ರಮಂತ್ರಿ ಮಂಡಲಕ್ಕೆ ಮತ್ತು ಎಲ್ಲಾ ಸದಸ್ಯರಿಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸನ್ಮಾನ್ಯ ಅಧ್ಯಕ್ಷರೇ, ಸಮಯೋಚಿತವಾದ ಗೊತ್ತುವಳಿಯನ್ನು ಈ ಸದನದಲ್ಲಿ ಮಂಡಿಸಿದ ಕೀರ್ತಿಗೆ ಬಾಧ್ಯರಾಗಿರತಕ್ಕ ನಾಯಕರಾದ ಮಾನ್ಯ ಶ್ರೀಮಾನ್ ದೇವರಾಜ್ ಅರಸ್‌ರವರನ್ನು ವಂದಿಸುತ್ತಾ ಈ ಗೊತ್ತುವಳಿಯನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಆಡಬಯಸುತ್ತೇನೆ. ಕಾಲಚಕ್ರ ಉರುಳಿದಂತೆ ಚರಾಚರ ವಸ್ತುಗಳಲ್ಲಿ ಭೌತಿಕವಾಗಿಯಾಗಲೀ, ಮಾನಸಿಕ

ವಾಗಿಯಾಗಲೀ ಬದಲಾವಣೆಗಳಾಗುವುದು ಸಹಜ. ಅಂತೆಯೇ ಇಲ್ಲಿಯವರೆಗೂ 'ಮೈಸೂರು' ಎಂದು ಕರೆಯಿಸಿಕೊಳ್ಳುತ್ತಿದ್ದ ನಮ್ಮ ಮೆಚ್ಚಿನ ಕನ್ನಡ ರಾಜ್ಯ ಇನ್ನು ಮುಂದೆ 'ಕರ್ನಾಟಕ' ಎಂಬ ನಾಮಧೇಯವನ್ನು ಹೊಂದುವುದು ಪ್ರಕೃತಿದತ್ತವಾದ ಬದಲಾವಣೆಯೇ ಹೊರತು ಹೆಚ್ಚೇನೂ ಆಗಲಾರದು ಎಂದು ನಾನು ತಿಳಿದಿದ್ದೇನೆ. ಇನ್ನು ಮುಂದೆ ಭಾರತದ ಭೂಪಟದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡು ಎಲ್ಲರ ಸತ್ಕೀರ್ತಿಗೂ ಪಾತ್ರವಾಗುವುದೆಂದು ನಾನು ಭಾವಿಸುತ್ತೇನೆ. ಆದರೂ ಈ ಮಾತುಗಳನ್ನು ಆಡುವಾಗ ಇಲ್ಲಿಯವರೆಗೂ ಕೂಡ ಮೈಸೂರು ರಾಜ್ಯದ ಮೈಸೂರು ಮಣ್ಣಿನ ಮಕ್ಕಳಾಗಿ ಬೆಳೆದು, ಮೈಸೂರಿನ ನೀರನ್ನು ಕುಡಿದು, ಮೈಸೂರಿನ ಅನ್ನವನ್ನು ತಿಂದು, ಮೈಸೂರಿನ ವೈಶಿಷ್ಟ್ಯತೆ, ನಾಗರಿಕತೆ, ಸಂಸ್ಕೃತಿ ಇವುಗಳನ್ನು ಮೈಗೂಡಿಸಿಕೊಂಡು ಬೆಳೆದು ಬಂದ ನಮ್ಮ ಮೈಸೂರಿನ ಮಕ್ಕಳ ಮೆದು ಭಾವನೆಯನ್ನು ಈ ಸಂದರ್ಭದಲ್ಲಿ ಹೇಳಿ, ಮೈಸೂರು ರಾಜ್ಯಕ್ಕೆ 'ಮೈಸೂರು' ಎನ್ನತಕ್ಕ ಹೆಸರಿಗೆ ಚರಮಗೀತೆಯನ್ನು ಹಾಡತಕ್ಕ ಸಂದರ್ಭ ಬಂದಿದೆ. ಇಂಥ ಕೊನೆ ಅವಕಾಶದಲ್ಲಿ ಕೆಲವು ಭಾವನೆಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ಮಾನ್ಯ ಅಧ್ಯಕ್ಷರಲ್ಲಿ ಅಪ್ಪಣೆ ಬಯಸುತ್ತೇನೆ.

ನಾಡು ಮತ್ತು ನುಡಿ ಇವು ಮಾನವನ ಭಾವನಾ ಪ್ರಪಂಚಕ್ಕೆ ಸೇರಿದಂಥ ವಸ್ತುಗಳು. ನಮಗೆ ಹೆಚ್ಚು ಪರಿಚಿತವಾದ ಯಾವುದೋ ವಸ್ತುವನ್ನು ದೂರ ಮಾಡುವಾಗ, ಹೊಸ ವಸ್ತುವನ್ನು ತೆಗೆದುಕೊಳ್ಳುವಾಗ, ಅದು ಎಷ್ಟೇ ಆಕರ್ಷಣೀಯವಾಗಿದ್ದರೂ ಕೂಡ ನಾವು ಅದರ ಕಡೆಗೆ ಅಷ್ಟು ಸುಲಭವಾಗಿ, ಜಾಗ್ರತೆಯಾಗಿ ಮಾರು ಹೋಗುವುದು ಕಷ್ಟಸಾಧ್ಯವಾದ ಕೆಲಸ. ಹಾಗೇಯೇ ತಲೆತಲಾಂತರದಿಂದ ಒಂದು ಕಡೆ ಒಗ್ಗೂಡಿ ಈ 'ಮೈಸೂರು' ಎನ್ನುವ ಹೆಸರನ್ನು ಇದ್ದಕ್ಕಿದ್ದಹಾಗೆ ಬಿಟ್ಟು ಕೊಡುವುದು ದುಃಖಕರವಾದ ಸಂಗತಿಯಾದರೂ ಕೂಡ ಕಾಲಕ್ಕೆ ತಕ್ಕಂತೆ ತಲೆ ಬಾಗಿ ಈ ರಾಜ್ಯದ ಹೆಸರನ್ನು ಬದಲಾವಣೆ ಮಾಡುವ ಕೆಲಸವನ್ನು ನಾವು ಮಾಡಲೇ ಬೇಕಾಗಿದೆ. ಅದನ್ನು ನಾನು ಸಂತೋಷದಿಂದ ಸ್ವಾಗತಿಸುತ್ತೇನೆ.

ಕರ್ನಾಟಕ ಎಂಬ ಹೆಸರು ಎಷ್ಟು ಪ್ರಾಚೀನವೋ ಮತ್ತು ಕರ್ನಾಟಕ ಎಂಬ ಹೆಸರನ್ನು ಈ ರಾಜ್ಯಕ್ಕೆ ಇಡಬೇಕೆಂದು ಉತ್ಸಾಹಶಾಲಿಗಳಾಗಿ ವಾದಿಸಿದಂಥ ನನ್ನ ಸ್ನೇಹಿತರುಗಳು, ಮಾನ್ಯ ಸದಸ್ಯರುಗಳು, ಪತ್ರಿಕೋದ್ಯಮಿಗಳು ಮತ್ತು ಶ್ರೀಸಾಮಾನ್ಯ ಜನರು, ಇವರಿಗೆಲ್ಲ ಆ ಬಯಕೆ ಹೇಗೆ ಉಂಟಾಯಿತೋ, ಹಾಗೆಯೇ ಮೈಸೂರು ಎನ್ನತಕ್ಕ ಹೆಸರಿಗೆ ಕೂಡ, ಮೈಸೂರು ನಾಡಿನಿಂದ, ಮೈಸೂರು ದೇಶದಿಂದ ಬಂದಿರತಕ್ಕ ಮೈಸೂರು ಮಕ್ಕಳಿಗೆ ಅಷ್ಟೇ ಭಾವನಾತ್ಮಕವಾದ ಅಂಶಗಳಿವೆ, ಅವರಿಗೂ ಕೂಡ ಮೈಸೂರು ಎಂಬ ಹೆಸರಿನ ಬಗ್ಗೆ ಅಪ್ಯಾಯಮಾನವೂ ಆಗಿದೆ ಎನ್ನುವ ಮಾತನ್ನು ಈ ಸಭೆಯಲ್ಲಿ ಹೇಳಬಯಸುತ್ತೇನೆ.

ಕರ್ನಾಟಕ ಬಹಳ ಪ್ರಾಚೀನವಾದುದು, ಎನ್ನುವುದರ ಬಗ್ಗೆ ಸಾಹಿತ್ಯ, ಸಂಸ್ಕೃತಿ, ಇವನ್ನೆಲ್ಲ ಉದ್ಧರಿಸಿ ನಮ್ಮ ಸ್ನೇಹಿತರು ನಿನ್ನೆ ಬಹಳ ಚನ್ನಾಗಿ ಹೇಳಿದ್ದಾರೆ ಹಾಗೆಯೇ 'ಮೈಸೂರು' ಎನ್ನುವುದಕ್ಕೆ ಕೂಡ ವಿಶಿಷ್ಟವಾದ ಸ್ಥಾನಮಾನ, ಪ್ರಾಚೀನತೆ ಉಂಟು. ಮೂರನೇ ಶತಮಾನಕ್ಕಿಂತಲೂ ಮೊದಲಿನವರಾದ ತಮಿಳು ಕವಿ 'ನಕ್ಕೀರನ್' ಎಂಬುವರು ಅಹನಾನೂರು ಎಂಬ ಗ್ರಂಥದಲ್ಲಿ 'ಎರುಮೈನನ್ನಾಡು' ಎಂದರೆ ಮಹಿಷ ನಾಡು ಅಥವಾ ಮಹಿಷಪುರಿ ಎನ್ನುವುದೇ ಮೈಸೂರು ಆಗಿದೆ ಎನ್ನುವುದು ನನ್ನ ಅಭಿಪ್ರಾಯ. ಕೆಲವು ಸಾಹಿತಿಗಳ ಅಭಿಪ್ರಾಯವೂ ಕೂಡ, ಭಾಷಾಂತರಿಗಳ ಅಭಿಪ್ರಾಯವೂ ಕೂಡ ಅದೇ ಆಗಿದೆ. ಮತ್ತೊಂದು ಪ್ರಾಚೀನ ತಮಿಳು ಕಾವ್ಯದಲ್ಲಿ ಕೂಡ 'ಎರುಮೈಯೂರಾನ್' ಎಂದರೆ ಮಹಿಷೂರಿನವನ್, ಎಂದರೆ ಮೈಸೂರು ದೇಶದವನು ಎಂಬರ್ಥ ಬರುವಂತೆ ಇದೆ.

ಒಂದನೇ ಶತಮಾನಕ್ಕೆ ಸಂಬಂಧಿಸಿದ ಗ್ರಂಥವಾಗಿರತಕ್ಕ ಮಹಾಭಾರತವನ್ನು ತೆಗೆದು ಕೊಂಡರೂ ಕೂಡ ಕರ್ನಾಟಕ ಮತ್ತು ಮಹಿಷನಾಡು ಎನ್ನುವ ಹೆಸರುಗಳು ಒಂದೇ ಶ್ಲೋಕದಲ್ಲಿ ಬಂದಿರುವ ಸಂದರ್ಭಗಳುಂಟು. ಭೀಷ್ಮಪರ್ವದಲ್ಲಿ ಒಂಭತ್ತನೇ ಅಧ್ಯಾಯ ೫೮ನೇ ಶ್ಲೋಕದಲ್ಲಿ ನೋಡಿದರೆ,

ದ್ರಾವಿಡಾ : ಕೇರಲಾ : ಪ್ರಾಚ್ಯಾ : ಮೂಷಿಕಾ : ವನವಾಸಿಕಾ :

ಕರ್ಣಾಟಕಾ : ಮಹೀಷಕಾ : ವಿಕಲ್ಪಾ ಮೂಷಕಸ್ತಥಾ

ಎಂದು ಹೇಳುತ್ತಾರೆ ಕರ್ಣಾಟಕ ಮತ್ತು ಮಹೀಷಕಾ : ಎನ್ನುವ ಹೆಸರುಗಳನ್ನು ಸೇರಿಸಿದ್ದಾರೆ. ಆದುದರಿಂದ ಮಹಿಷ ಮಂಡಲ ಎನ್ನುವ ಹೆಸರು ಹಿಂದಿನಿಂದಲೂ ಕೂಡ ಎಂದರೆ ಮಹಾಭಾರತದ ಕಾಲದಿಂದಲೂ ಕೂಡ ಬಂದಿದೆ ಎನ್ನುವ ಮಾತನ್ನು ಒಪ್ಪಬೇಕು ಎಂದೆನಿಸುತ್ತದೆ.

"ಕರುನಾಡು" ಎಂದರೆ ಎತ್ತರವಾದುದು, ಕಪ್ಪಾದುದು, ವಿಶಾಲವಾದುದು, ಹಿರಿದು, ದೊಡ್ಡದು ಎನ್ನುವ ಅರ್ಥದಲ್ಲಿ ಹೇಳಿದ್ದಾರೆ. ಕರ್ನಾಟಕ ಮತ್ತು ಮೈಸೂರು ಎನ್ನುವ ಹೆಸರುಗಳನ್ನು ಉಪಯೋಗಿಸುವಾಗ ಕಪ್ಪು ಭೂಮಿಯ ಪ್ರದೇಶ ಯಾವುದಿತ್ತೋ ಅದನ್ನೆಲ್ಲ ಕರ್ನಾಟಕವಾಗಿಯೂ, ಉಳಿದ ಹಳೇ

(ಶ್ರೀ ಡಿ. ಹಲಗೇಗೌಡ)

ಮೈಸೂರು ದೇಶಕ್ಕೆ ಸೇರಿದ ಭಾಗಗಳಿಗೆ ಮಹಿಷನಾಡು ಅಥವಾ ಮೈಸೂರು ಆಗಿದ್ದಿರಬಹುದು ಎನ್ನುವುದು ನನ್ನ ಅಭಿಪ್ರಾಯ. ಆದುದರಿಂದ ಕರ್ನಾಟಕ ಎನ್ನತಕ್ಕ ಪದದಲ್ಲಿ ಎಷ್ಟು ಪ್ರಾಚೀನತೆಯಿದೆಯೋ ಮಹಿಷ ನಾಡು ಅಥವಾ ಮೈಸೂರಿಗೂ ಅಷ್ಟೇ ಪ್ರಾಚೀನ, ಅರ್ವಾಚೀನವಿದೆ ಎಂದು ನನಗನ್ನಿಸುತ್ತದೆ.

ಕ್ರಿ ಪೂ. ಒಂದನೇ ಶತಮಾನದ ಶೂದ್ರಕ ಕವಿ 'ಮೃಚ್ಛಕಟಿಕ ದಲ್ಲಿ ಹೇಳುತ್ತಾನೆ. 'ಕರ್ನಾಟ ಕಲಹ' ಪ್ರಯೋಗಂ ಕರಿಷ್ಯಾಮಿ" ಎಂದು. ಕರ್ನಾಟ ಕಲಹ ಎಂದರೆ ಮುಗಿಯದ ಜಗಳವೆಂದು ಹೇಳುತ್ತಾರೆ. ಮುಗಿಯದ ಜಗಳ, ಮುಗಿಯದೆ ಇರುವುದು ಎಂದು ತುಂಟತನಕ್ಕೆ ಉಪಯೋಗಿಸುವ ಅರ್ಥದಲ್ಲಿ ಕೂಡ ಹೇಳಿದ್ದಾನೆ.

೯ನೇ ಶತಮಾನದಲ್ಲಿ ನೃಪತುಂಗ, ಮೊಟ್ಟಮೊದಲನೆಯ ಕವಿ ಮತ್ತು ಕನ್ನಡ ಗ್ರಂಥಕರ್ತ, ಕವಿ ಚಕ್ರವರ್ತಿ ಎಂದು ಏನು ಕರೆಯುತ್ತಾರೆ ಆತ ಕವಿರಾಜ ಮಾರ್ಗದಲ್ಲಿ ಕರ್ನಾಟಕ ಎನ್ನುವ ಪದವನ್ನು ಉಪಯೋಗಿಸಿಲ್ಲ, ಕನ್ನಡ ನಾಡು ಎಂದೇ ಹೇಳಿದ್ದಾನೆ.

'ಕಾವೇರಿಯಿಂದ ಮಾ ಗೋದಾವರಿ ವರ ಮಿರ್ಧ್ಯನಾಡದಾ
ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ
ವಿಲೀನ ವಿಶದ ವಿಷಯ ವಿಶೇಷಂ'

ಎನ್ನತಕ್ಕ ಭಾಗಗಳನ್ನು ಹೇಳಿದ್ದಾನೆ. ಅಲ್ಲಿ ಕನ್ನಡ ಜನಪದ, ಕನ್ನಡ ನಾಡು ಎನ್ನುವ ಮಾತನ್ನೆಲ್ಲ ಉಪಯೋಗಿಸುತ್ತಾನೆ. ಮೊಟ್ಟಮೊದಲಿನ ಗ್ರಂಥ ಕವಿರಾಜ ಮಾರ್ಗ ಎಂದು ಏನು ಹೇಳುತ್ತೇವೆ ಅವರಲ್ಲಿಯೂ ಕೂಡ ಕರ್ನಾಟಕ ಎನ್ನುವ ಪದ ಬಂದಿಲ್ಲ, ಕನ್ನಡನಾಡು ಎಂದೇ ಬಂದಿದೆ.

೧೩ನೇ ಶತಮಾನದಲ್ಲಿ ಆಂಡಯ್ಯ ಕವಿ
.... ಕನ್ನಡಮೆನಿಪ್ಪಾನಾಡು ಚೆಲ್ವಾಯ್ತು ॥ಮೆಲ್ಲಿಲರಿಂ
ಪೂತಕೊಳಂಗಳಿಂ ಕೆರೆಗಳಿಂ ಕಾಲೂರ್ಗಳಿಂ ಕಿಯ್ಗಳಿಂ ॥

ಎಂದು ಹೇಳುತ್ತಾನೆ. ಇಲ್ಲಿಯೂ ಕನ್ನಡನಾಡು ಎಂದೇ ಉಪಯೋಗಿಸುತ್ತಾನೆ.

ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಕೃಷ್ಣದೇವರಾಯನಿಗೆ 'ಕನ್ನಡರಾಜ್ಯ ರಮಾರಮಣ' ಎಂಬ ಬಿರುದಿತ್ತು. ಅಲ್ಲಿ ಕೂಡ ಕನ್ನಡ ರಾಜ್ಯ ಎನ್ನುವಂಥ ಮಾತು ಬರುತ್ತದೆ. ಹಾಗೆಯೇ ೧೭ನೇ ಶತಮಾನದ ಚಿಕ್ಕುಪಾಧ್ಯಾಯ ಎಂಬುವವರು ಕನ್ನಡ ನಾಡಿನ ವರ್ಣನೆ ಮಾಡಿದ್ದಾರೆ. ಮೈಸೂರಿನ ವರ್ಣನೆ ಮಾಡುತ್ತೇನೆಂದು ಹೇಳುತ್ತಾರೆ.

.... ಮುಂಕ್ಕಿಳಾಂತೆ ಕ್ಕೆ ॥
ಗೂಡುವಬೀಡು ಕನ್ನಡನಾಡು ವಿರಾಜಿಪುದೆಂತು ಬಣ್ಣಿಪೆಂ ॥

ಅವರು ಕನ್ನಡನಾಡು ಎಂದೇ ಸಮರ್ಥಿಸುತ್ತಾರೆ. ಹಾಗೆಯೇ ಕನ್ನಡನಾಡು, ಮೈಸೂರು ಎರಡೂ ಕೂಡ ಒಂದಾಗಿ ಬೆಳೆದುಬಂದಿತ್ತು. ಏನೋ ರಾಜಕೀಯ ಕಾರಣಗಳಿಂದ ಉಳಿದ ಭಾಗಗಳು ಕೈಬಿಟ್ಟು ಬೇರೆ ಬೇರೆ ಪ್ರದೇಶದಲ್ಲಿ ಹಂಚಿಹೋಗಿತ್ತು. ಆದುದರಿಂದ ಮೈಸೂರು ಎನ್ನುವ ಹೆಸರು ಅಥವಾ ಕರ್ನಾಟಕ ಎನ್ನತಕ್ಕ ಹೆಸರು ಸರಿಸಮಾನವಾಗಿ ಅಷ್ಟೇ ಪ್ರಾಚೀನತೆಯನ್ನು ಪಡೆದಿರತಕ್ಕ ಪದಗಳು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಇದನ್ನು ಹೇಳಿದ ಮಾತ್ರಕ್ಕೆ ಮೈಸೂರು ಎನ್ನುವ ಹೆಸರನ್ನು ಇಟ್ಟುಕೊಳ್ಳಬೇಕೆಂದು ಹೇಳುತ್ತಿಲ್ಲ. ಇಲ್ಲಿಯವರೆಗೆ ನಮಗೆ ಮೈಸೂರು ಮಾತೆ ಇದ್ದಂತೆ, ಆ ಹೆಸರಿಗೆ ಚರಮಗೀತೆ ಹಾಡುವ ಸಂದರ್ಭದಲ್ಲಿ ಗತಕಾಲದ ನೆನಪನ್ನು ಹೇಳತಕ್ಕದ್ದು ನಮ್ಮ ಕರ್ತವ್ಯ ಮೈಸೂರಿನ ಅನ್ನತಿಂದು, ಮೈಸೂರಿನ ಮಣ್ಣಿನಲ್ಲಿ ಬೆಳೆದು ಬಂದಿದ್ದೇವೆ, ಮೈಸೂರಿನ ಮಕ್ಕಳಾಗಿ ಆ ಕೆಲಸವನ್ನು ಮಾಡಬೇಕಾದ್ದು ನಮ್ಮ ಕರ್ತವ್ಯವೆಂದು ನಾನಾದರೂ ಭಾವಿಸಿದ್ದೇನೆ.

ಶ್ರೀ ಪಾಂಡುರಂಗ ದೇಸಾಯಿಯವರು ಬರೆದ "ಹಿಸ್ಟರಿ ಆಫ್ ಕರ್ನಾಟಕ" ಎಂಬ ಗ್ರಂಥದಲ್ಲಿ ಪ್ರಕಟಿಸಿರುವ ಕೆಲವು ಭೂಪಟಗಳನ್ನು ನೋಡಿದರೆ ಟಿಪ್ಪು ಸುಲ್ತಾನನ ಕಾಲದಲ್ಲಿ ಇದ್ದ ಕನ್ನಡ ರಾಜ್ಯ ಈಗಿನ ವಿಶಾಲ ಮೈಸೂರಿಗಿಂತ, ಕರ್ನಾಟಕ ಎಂದು ಏನು ಹೇಳುತ್ತೇವೆ ಅವಕ್ಕಿಂತ ವಿಶಾಲವಾದ ರಾಜ್ಯವಾಗಿತ್ತು. ಟಿಪ್ಪು ಕಾಲದಲ್ಲಿ ಮೈಸೂರು ರಾಜ್ಯ ಪೂನ ವರೆಗೂ, ಕಂಚಿ ವರೆಗೂ, ಕಲ್ಲಿಕೋಟೆ ವರೆಗೂ ವಿಸ್ತರಣೆ ಆಗಿತ್ತು ಎಂದು ಗೊತ್ತಾಗುತ್ತದೆ. ಅದು ಕರ್ನಾಟಕ ಒಂದೇ ಆಗಿರಲಿಲ್ಲ, ಮತ್ತು ಆತನ ಕಾಲದಲ್ಲಿ ಯಾವ ಯಾವ ಭಾಗಗಳು ಸೇರಿತ್ತು ಎನ್ನುವ ಮಾತೂ ಗೊತ್ತಾಗುತ್ತದೆ.

ಹಾಗೆಯೇ ನಮ್ಮ ಕವಿಗಳೂ ಕೂಡ ಮೈಸೂರನ್ನು ಹಾಡಿ ಹೊಗಳಿದ್ದಾರೆ. ಚಿಂತನಕವಿ ಪು.ತಿ.ನ., ವರಕವಿ ಬೇಂದ್ರೆ ಮತ್ತು ದಿವಂಗತ ಬಿ.ಎಂ.ಶ್ರೀ. ಇವರು ಮೈಸೂರನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತಾರೆ.

'ಮೈ ಚಿನ್ನ, ನಗೆ ಮಿಂಚು, ಬಾವನ್ನದುಸಿರು'

ಎಂದು ಹೇಳಿದ್ದಾರೆ, ಮೈಚಿನ್ನ ಎಂದರೆ ಕೋಲಾರದ ಚಿನ್ನದ ಗಣಿ, ನಗೆಮಿಂಚು ಎಂದರೆ ಮೈಸೂರು ದೇಶದಲ್ಲಿರತಕ್ಕ ವಿದ್ಯುಚ್ಛಕ್ತಿ, ಉತ್ಪಾದನೆ, ಮತ್ತು ಬಾವನ್ನದುಸಿರು ಎಂದರೆ ಶ್ರೀಗಂಧದ ವಾಸನೆ ಮೈಸೂರಿನ ಈ ವಸ್ತುಗಳು ನಮ್ಮ ನೆನಪಿಗೆ ಬರುತ್ತವೆ. ಹಾಗೆಯೇ ಬಿ. ಎಂ. ಶ್ರೀ. ಅವರು ಹೇಳಿದ್ದಾರೆ

"ಚಿನ್ನದ ನಾಡಿದು ಮೈಸೂರು,
ಗಂಧದ ಗುಡಿಯಿದು ಮೈಸೂರು,
ನಾಲ್ಮಡಿ ಕೃಷ್ಣನ ಮೈಸೂರು,
ಕನ್ನಡ ನಾಡಿದು ಮೈಸೂರು"

ಕನ್ನಡ ನಾಡು, ಮೈಸೂರು ಎಂದು ಕೂಡ ಬರೆದಿದ್ದಾರೆ.

೪-೦೦ P. M.

ಕರ್ನಾಟಕ ಎನ್ನತಕ್ಕ ಹೆಸರು ಎಷ್ಟು ಪ್ರಾಚೀನವೋ, ಮೈಸೂರು ಎನ್ನತಕ್ಕ ಹೆಸರು ಅಷ್ಟೇ ಪ್ರಾಚೀನದಿಂದ ಕೂಡಿದ್ದು ಆಗಿದೆ ಇದು ಎಲ್ಲರಿಗೂ ಕೂಡ ಆಹ್ಲಾದಕರವಾದ ಹೆಸರಾಗಿರುತ್ತದೆ. ನಮ್ಮ ಕವಿಗಳು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ನೀರು ಎರೆದುಕೊಂಡು ಮತ್ತು ಪೋಷಿಸಿಕೊಂಡು ಬಂದಿದ್ದಾರೆ. ಹಳೆಗನ್ನಡ, ಪೂರ್ವ ಕನ್ನಡ, ನಾಡು ಕನ್ನಡ, ಎನ್ನುವ ಕಾಲದಲ್ಲಿ ಹೊಸ ಪ್ರದೇಶಗಳು ಸಹ ಮೈಸೂರಿಗೆ ಸೇರಿರುತ್ತವೆ. ಹೈದರಾಬಾದ್, ಬಾಂಬೆ, ಮದ್ರಾಸ್ ನಲ್ಲಿಯೂ ಕರ್ನಾಟಕದ ಪ್ರದೇಶಗಳು ಇವೆ. ಪಂಪ ರನ್ನ ಇವರ ಕಾಲದಲ್ಲಿ ಸಾಹಿತ್ಯ ಪ್ರಸಾರ ನಡೆಯಿತು. ವಚನಕಾರರಿಂದ, ಇತಿಹಾಸಕಾರರಿಂದ, ಕೆಲವು ಸಾಹಿತ್ಯ ಚಟುವಟಿಕೆಗಳು ನಡೆದವು. ೧೬೦೦ ರಿಂದ ಈಚೆಗೆ ಮೈಸೂರು ಎನಿಸಿಕೊಂಡ ಪ್ರದೇಶದಲ್ಲಿ ಹೆಚ್ಚಾಗಿ ಕನ್ನಡ ಸಾಹಿತ್ಯದ ವ್ಯವಸಾಯ ನಡೆದಿದೆ. ಅಲ್ಲಿ ನಡೆದಿರತಕ್ಕ ಸಾಹಿತ್ಯದ ವ್ಯವಸಾಯ, ಬೇರೆ ಎಲ್ಲೂ ಕೂಡ ನಡೆದಿಲ್ಲ. ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಹೇಳಿದಂತೆ ಎಲ್ಲಾದರೂ ಇರು ಎಂತಾದರು ಇರು, ಎಂದೆಂದಿಗೂ ನೀ ಕನ್ನಡಿಗನಾಗಿರು, ಎನ್ನುವುದನ್ನು ಮೈಸೂರಿನಲ್ಲಿ ಮಾತ್ರ ನಡೆಸಿಕೊಂಡು ಬಂದಿದ್ದಾರೆ. ಕನ್ನಡ ಸಂಸ್ಕೃತಿ, ಕನ್ನಡ ಭಾಷೆಯನ್ನು ಬೆಳೆಸಿದ್ದಾರೆ. ಆದರೆ ಉಳಿದ ಪ್ರದೇಶಗಳಲ್ಲಿ ಈಗಲೂ ಪರಭಾಷೆಯ ಒಂದು ಧಾಳಿ ನಡೆದು, ಕನ್ನಡತನದ ಸೂಚನೆಗಳೇ ಕಂಡುಬರುತ್ತಿಲ್ಲ. ಅಲ್ಲಿ ಕನ್ನಡ ಹುಡುಕಬೇಕಾಗಿದೆ. ಮಹಾಕವಿ ಪಂಪನು ನೆಲಸಿರತಕ್ಕ ಬನವಾಸಿ ನಾಡು, ಶ್ರೀಗಂಧದ ಉಸಿರನ್ನು ಕೊಡತಕ್ಕ ಶಿವಮೊಗ್ಗ ಜಿಲ್ಲೆಯೂ ಹಳೆಯ ಮೈಸೂರಿಗೆ ಸೇರಿದಂಥ ಪ್ರದೇಶವಾಗಿದೆ. ಕನ್ನಡ ನಾಡಿನ ಸರ್ವ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಕೇಂದ್ರೀಕರಿಸಿಕೊಂಡು ಬಂದಿರತಕ್ಕ ಮೈಸೂರನ್ನು ಒಮ್ಮೆಗೆ ಮರೆಯುವುದು ಕಷ್ಟವಾಗುತ್ತದೆ. "ಮಾಗಿ ವಸಂತಕ್ಕೆ ಮೆಟ್ಟಿಲಾಗುವಂತೆ, ಬೀಜದ ಅಂತ್ಯ ಮೊಳಕೆಯ ಉದಯಕ್ಕೆ ಕಾರಣವಾಗುವಂತೆ, ತ್ಯಾಗ ಭೋಗಕ್ಕೆ ನಾಂದಿಯಾಗುವಂತೆ, ಮೈಸೂರು ಎನ್ನುವ ಹೆಸರು ಸಹ ಕರ್ನಾಟಕದ ಉದಯಕ್ಕಾಗಿ ಬಿಡಲು ಸಂತೋಷಿಸುತ್ತೇವೆ. ಈ ಸಂದರ್ಭದಲ್ಲಿ ಮೈಸೂರಿನ ವೈಶಿಷ್ಟತೆಯನ್ನು ನೆನೆದುಕೊಳ್ಳುವುದು ತಪ್ಪಾಗಲಾರದು ಎಂದು ಅನಿಸುತ್ತದೆ. ಇಷ್ಟಾದರೂ ನಾವು ಕಾಲಕ್ಕೆ ಶರಣಾಗಿ, ಚಕ್ರಕ್ಕೆ ತಲೆಯೊಡ್ಡಿ, ಹೊಸ ವರುಷಕ್ಕೆ ಹೊಸ ಹರುಷ ತರುವ ಬದಲಾವಣೆ ಸಂತೋಷದಿಂದ ಸ್ವಾಗತ ಮಾಡುತ್ತೇವೆ. ಕೇವಲ ಹೆಸರಿನ ಬದಲಾವಣೆಯಿಂದಲೇ ಕನ್ನಡ ಜನತೆಯಲ್ಲಿ ಭಾವೈಕ್ಯತೆ ತರುವುದಕ್ಕೆ ಸಾಧ್ಯವಿಲ್ಲ. ಇದಕ್ಕೆ ಹೃದಯಾಂತರಾಳದಿಂದ ಚಿಮ್ಮಿ ಬರುವ ಆತ್ಮೀಯತೆಯ ಬೆಸುಗೆಯಾಗಬೇಕು. ಇಂತಹ ಶುಭ ದಿವಸದಲ್ಲಿ ಕನ್ನಡಕ್ಕಾಗಿ ಮತ್ತು ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹಾನುಭಾವರುಗಳು ಮತ್ತು ಸಾಹಿತಿಗಳಲ್ಲಿ ಹಿರಿಯರಾದ ದಿವಂಗತ ಬಿ. ಎಂ. ಶ್ರೀ, ಮುದವೀಡು ಕೃಷ್ಣರಾಯರು ಗೋವಿಂದ ಪೈ ಅವರು, ವೆಂಕಣ್ಣಯ್ಯನವರು, ಎಂ. ಆರ್. ಶ್ರೀ ಅವರು, ಅ. ನ. ಕೃ. ಅವರು, ತೀ. ನಂ. ಶ್ರೀ. ಅವರು, ಡಿ. ಎಲ್. ಎನ್. ಅವರು, ಟಿ. ಪಿ. ಕೈಲಾಸಂ ಅವರು, ಹುಯಿಲಗೋಳ ನಾರಾಯಣರಾಯರು ಇತ್ಯಾದಿ ಹಿಂದಿನ ಮತ್ತು ಇಂದಿನ ಅನೇಕ ಮಹನೀಯರುಗಳನ್ನು ನೆನೆಯತಕ್ಕದ್ದು ನಮ್ಮ ಆದ್ಯ ಕರ್ತವ್ಯ.

ಈಗಿರುವ ವರ ಕವಿ ಕುವೆಂಪು, ಬೇಂದ್ರೆ ಶಿವರಾಮಕಾರಂತ, ಬಸವರಾಜ ಕಟ್ಟೀಮನಿ, ವಿ. ಸಿ. ಮತ್ತು ರಾಜರತ್ನಂ ಅವರನ್ನು, ಸಾರ್ವಜನಿಕ ರಂಗದಲ್ಲಿ ದುಡಿದ ದಿವಂಗತ ಅಂದಾನಪ್ಪ ದೊಡ್ಡಮೇಟಿ

(ಶ್ರೀ ಡಿ. ಹಲಗೇಗೌಡ)

ಯೆವರು, ಗುಂಡ್ಲಪ್ಪ ಹಳ್ಳಿಕೇರಿಯವರು, ಸಮಾಜವಾದಿ ಧುರೀಣರು ಆದ ಶಾಂತವೇರಿ ಗೋಪಾಲ ಗೌಡರು, ಸಾಹುಕಾರ್ ಚೆನ್ನಯ್ಯನವರು ಮತ್ತು ಬದುಕಿರುವ ಶ್ರೀಮಾನ್ ಕೆಂಗಲ್ ಹನುಮಂತಯ್ಯ ನವರು, ನಿಜಲಿಂಗಪ್ಪನವರು, ಕೆ. ಎಫ್. ಪಾಟೀಲರು ಇವರುಗಳಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದಂಥವರು. ಅನೇಕ ಮಂದಿ ಕರ್ನಾಟಕದ ಹೆಸರನ್ನು ಉಪಯೋಗಿಸಿಕೊಂಡು ಆಸ್ತಿಪಾಸ್ತಿಗಳನ್ನು ಮಾಡಿಕೊಂಡು ಶ್ರೀಮಂತರಾಗಿರುವ ಜನರೂ ಉಂಟು. ಆದರೆ ಕರ್ನಾಟಕಕ್ಕೋಸ್ಕರ ಪಣತೊಟ್ಟು ಅದಕ್ಕಾಗಿ ಪದವಿಯನ್ನು ಕಳೆದುಕೊಂಡರೂ ಸಹ ಯೋಚಿಸದೆ, ಇಂದೂ ಸಹ ದೇಶ ಸೇವೆಯನ್ನು ಮಾಡುತ್ತಿರುವ ಶ್ರೀ ಕೆಂಗಲ್ ಹನುಮಂತಯ್ಯನವರ ಸೇವೆಯನ್ನು ವಿಶೇಷವಾಗಿ ಸ್ಮರಿಸಬೇಕು. ಏಕೆಂದರೆ, ಕರ್ನಾಟಕದ ರಚನೆಗೆ ಮುಖ್ಯಮಂತ್ರಿ ಪದವಿಯನ್ನು ಕಳೆದುಕೊಂಡರು ಮತ್ತು 'ಕರ್ನಾಟಕ' ಎಂಬ ಹೆಸರಿಡುವಾಗ ಕೇಂದ್ರ ಮಂತ್ರಿತ್ವವನ್ನು ಕಳೆದುಕೊಂಡು ಅವರು ಯಜ್ಞಪಶುವಾಗಿದ್ದಾರೆ. ಕರ್ನಾಟಕಕ್ಕೆ ಇವರು ಎಸಗಿದ ಸೇವೆಗಾಗಿ ಇವರೇ ನಿರ್ಮಿಸಿರುವ ಈ ಕರ್ನಾಟಕ ವಿಧಾನಸೌಧದ ಮುಂದೆ ಅವರ ಪ್ರತಿಮೆಯನ್ನು ಸ್ಮಾರಕ ವಾಗಿ ಸ್ಥಾಪಿಸುವುದು ಸೂಕ್ತವೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ.

ನಮ್ಮ ಕನ್ನಡ ನಾಡಿನ ಹೊರಗೆ ಉಳಿದಿರತಕ್ಕ ಎಲ್ಲಾ ಪ್ರದೇಶಗಳೂ ಬೇಕು ಎಂದು ಕೇಳುತ್ತಿದ್ದೀರಿ. ಆದರೆ ನಮ್ಮ ಕನ್ನಡ ನಾಡಿಗೆ ಸೇರಿದಂಥ ಕನ್ನಡಿಗರು ವಾಸವಾಗಿರತಕ್ಕ ನೀಲಗಿರಿಯ ವಿಷಯವಾಗಿ ಯಾರೂ ಬಾಯಿ ಕೂಡ ಬಿಟ್ಟ ಹಾಗೆ ಕಾಣುವುದಿಲ್ಲ. ಕ್ರಿ. ಪೂ. ಎರಡನೆಯ ಶತಮಾನದಲ್ಲಿ ನೀಲಗಿರಿಯ ಚೋರ ದೊರೆ ಶೆಂಗುಟ್ಟವನ್ ಎಂಬುವನು ಗಂಗಾತಟದ ಕಡೆ ಹೋಗುವಾಗ ನೀಲಗಿರಿಯ ಮಾರ್ಗವಾಗಿ ಹೊರಟು ಅಲ್ಲಿ ವಿಶ್ರಾಂತಿ ತೆಗೆದುಕೊಳ್ಳುವಾಗ ಮನರಂಜನೆಗೋಸ್ಕರ ನೀಲಗಿರಿಯಲ್ಲಿ ಕರುನಾಡಿಗರ ನೃತ್ಯ ತಂಡದಿಂದ, ನೃತ್ಯ ನೋಡಿದನೆಂಬ ಉಲ್ಲೇಖವಿರುವುದರಿಂದ ಅದು ಕರ್ನಾಟಕ ರಾಜ್ಯಕ್ಕೆ ಸೇರಿದ್ದೆಂಬುದು ತೋರುತ್ತದೆ. ಅಲ್ಲದೆ ನೀಲಗಿರಿಯಲ್ಲಿರುವ ಜನಸಂಖ್ಯೆಯ ಶೇಕಡ ೬೦ ರಷ್ಟು ಜನ ಅಚ್ಚ ಕನ್ನಡಿಗರು. ಆದ್ದರಿಂದ ಈ ಕನ್ನಡಿಗರನ್ನು ನಮ್ಮ ಕರ್ನಾಟಕಕ್ಕೆ ಸೇರಿಸಬೇಕು ಎನ್ನುವ ಮಾತು ಯಾರ ಬಾಯಿಂದಲೂ ಬಾರದಿರು ವುದಕ್ಕೆ ವಿಷಾದಿಸುತ್ತೇನೆ ಅದೇ ಅಕ್ಕಲಕೋಟೆ ಭಾಗಗಳಿಗಾಗಿ ಕೇಂದ್ರಸರ್ಕಾರದ ಕಡೆ ಬಾಯಿ ಬಿಡುತ್ತಿದ್ದೇವೆ ಇದರ ಜೊತೆಗೆ ನೀಲಗಿರಿಯ ಪ್ರದೇಶಗಳನ್ನು ನಮ್ಮ ನಾಡಿಗೆ ಸೇರಿಸಿಕೊಳ್ಳುವಂತೆ ಸರ್ಕಾರದವರು ಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ನಂಬಿದ್ದೇನೆ. ಕನ್ನಡ ನಾಡು ಸರ್ವೋಚ್ಚ, ಸರ್ವ ಸುಂದರವಾಗಿ, ಭಾರತ ಭೂಪಟದಲ್ಲಿ ಧವಳಗಿರಿಯಾಗಿ ಬೆಳೆದು ಯಶಸ್ವಿಯಾಗಿ ರಾರಾಜಿಸುವಂತಹ ಕರ್ನಾಟಕ ರಾಜ್ಯವಾಗಲಿ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೂ, ಮಾನ್ಯ ಮುಖ್ಯಮಂತ್ರಿಗಳಿಗೂ, ಮಾನ್ಯ ಮಂತ್ರಿಗಳಿಗೂ ಹಾಗೂ, ಸದಸ್ಯರಿಗೆಲ್ಲರಿಗೂ ನನ್ನ ಶುಭಾಶಯಗಳನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

"ಜೈ ಕರ್ನಾಟಕ ಮಾತೆ"

†ಶ್ರೀ ವಿ. ಎನ್. ಪಾಟೀಲ್. (ಹುಮ್ನಾಬಾದ್) .— ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ಎನ್ನುವ ಹೆಸರನ್ನು ಇಟ್ಟಮೇಲಾದರೂ ಕನ್ನಡದಲ್ಲಿ ಮಾತನಾಡುವುದನ್ನು ಕಲಿಯೋಣ, ಪ್ರಯತ್ನ ಪಡೋಣ ಎನ್ನುವ ಉಮ್ಮಾಸ್ ಅಪೇಕ್ಷೆ ನನಗೆ ಬರುತ್ತಿದೆ. ೧೫ ವರ್ಷ ಹಿಂದಿನ ಹಳೆಯ ವಿಷಯಗಳನ್ನು ನೆನಸಿ ಕೊಂಡರೆ ಕರ್ನಾಟಕ ಬೇಡ ಎಂದು ಒಂದು ಗ್ರೂಪ್, ಕರ್ನಾಟಕ ಬೇಕು ಎಂದು ಇನ್ನೊಂದು ಗ್ರೂಪ್. ಈ ರೀತಿ ಚರ್ಚೆ ಮಾಡಿಕೊಂಡು ಬರುತ್ತಿದ್ದರು "ಕನ್ನಡನಾಡು" ಬೇಕು ಎಂದು ಹೇಳುವವರಲ್ಲಿ ಒಂದು ಗ್ರೂಪ್ ಇತ್ತು. ಕರ್ನಾಟಕದ ಬೇಡಿಕೆಗೆ ವಿರುದ್ಧವಾಗಿದ್ದ ಜನತೆಯನ್ನು ಕನ್‌ವಿನ್ಸ್ ಮಾಡಿ, ಕರ್ನಾಟಕ ವನ್ನು ಪಡೆಯೋಣ ಎಂದು ಎಲ್ಲರೂ ಪ್ರಯತ್ನ ಪಡುತ್ತಿದ್ದರು. ಅದರಂತೆ ಇವತ್ತಿನದಿವಸ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ್ ಅರಸ್ ಅವರು ಒಂದು ಐತಿಹಾಸಿಕವಾದಂಥ ನಿರ್ಣಯವನ್ನು ತಂದಿದ್ದಾರೆ.

ಒಂದು ಮಾತು ಹೇಳುತ್ತೇನೆ. ದೇವರಾಜ ಅರಸರಿಗೆ ಜನತೆಯ ಬೆಂಬಲ ಇದೆ. ಅವರಿಗೆ ಶಕ್ತಿ ಇದ್ದದ್ದರಿಂದ ಅವರು ಈವೊತ್ತು ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರು ಇಡಲು ಸಾಧ್ಯವಾಯಿತು. ಈಗಲೂ ಕರ್ನಾಟಕ ಎಂದು ಹೆಸರು ಇಡದಿದ್ದರೆ, ಜನತೆ ಕ್ಷಮೆ ಮಾಡುವುದಿಲ್ಲ ; ಹಿಂದೆ ಜಾತಿಯ ಹೆಸರಿನ ಮೇಲೆ ಜನತೆಯಲ್ಲಿ ಗೊಂದಲ ಹುಟ್ಟಿಸಿ ಆ ಒಂದು ವಾತಾವರಣ ಬೆಳೆಸಿಕೊಂಡು ಬಂದರು. ಅದು ಈಗ ಹೋಗಿದೆ. ಜನತೆಗೆ ಬೇಕಾಗಿರುವುದು ಆರ್ಥಿಕ ಪ್ರಗತಿ ಮತ್ತು ರಾಜಕೀಯ ಪ್ರಗತಿ. ಕರ್ನಾಟಕ ಎನ್ನು ವುದು ಈಗ ಹೆಸರಿಗೆ ಮಾತ್ರ ಸೆಕ್ಯುಲರ್ ಮತ್ತು ಸೋಷಿಯಲಿಸ್ಟ್ ಸ್ಟೇಟ್ ಆಗಿದೆ. ನಾವು ಎಲ್ಲರೂ ಶ್ರಮಿಸಿ ದುಡಿದು, ಅದನ್ನು ನಿಜವಾಗಿ ಸೆಕ್ಯುಲರ್ ಮತ್ತು ಸೋಷಿಯಲಿಸ್ಟ್ ರಾಜ್ಯ ಮಾಡಬೇಕಾಗಿದೆ. ಈಗ ಹೊಸ ಯುಗ ಮತ್ತು ಹೊಸ ಗಾಳಿ ಬಂದಿದೆ. ೧೫ ವರ್ಷಗಳ ಮೊದಲು ಕನ್ನಡಿಗರ ಮೇಲೆ ಉರ್ದು ಡಾಮಿನೇಷನ್ ಇತ್ತು, ತೆಲುಗು ಡಾಮಿನೇಷನ್ ಇತ್ತು, ಮರಾಠಿ ಡಾಮಿನೇಷನ್ ಇತ್ತು ; ಕನ್ನಡ ಭಾಗ

ಗಳು ಬೇರೆ ಬೇರೆ ರಾಜ್ಯಗಳಲ್ಲಿ ಹರಿದು ಹಂಚಿ ಹೋಗಿರುವುದು. ಈಗ ಒಂದು ಕಡೆ ಸೇರಿ ಕನ್ನಡಿಗರೆಲ್ಲಾ ಒಂದಾಗಿದ್ದೇವೆ. ಈ ಕರ್ನಾಟಕ ರಾಜ್ಯ ಆಗಲು ಎಷ್ಟೋ ಜನರು ಬಲಿದಾನ ಮಾಡಿದ್ದಾರೆ. ಹಳೇ ಮೈಸೂರಿನವರಲ್ಲೂ ಕರ್ನಾಟಕದ ಬಗ್ಗೆ ಅಭಿಮಾನವಿತ್ತು. ಹಿಂದೆ ೧೯೪೪ರಲ್ಲಿ ನಾನು 'ಲಾ' ವಿದ್ಯಾರ್ಥಿಯಾಗಿದ್ದಾಗ ಶ್ರೀಮಾನ್ ಕೆ. ಹನುಮಂತಯ್ಯನವರು ಹೈದರಾಬಾದಿಗೆ ಬಂದಿದ್ದರು. ನಾನು ಅವರಿಗೆ ಒಂದು ಮೆಮೊರಾಂಡಮ್ ಕೊಡಲು ಹೋಗಿದ್ದಾಗ, ಅವರು, ಕರ್ನಾಟಕ ಆಕಾಶದಿಂದ ಇಳಿದು ಬರುವುದಿಲ್ಲ. ಅದಕ್ಕೆ ಎಲ್ಲರೂ ದುಡಿಯಬೇಕಾಗಿದೆ ಎಂದು ಹೇಳಿದರು. ಇದನ್ನು ನಾನು ಏತಕ್ಕೆ ನೆನಸಿಕೊಳ್ಳುತ್ತೇನೆಂದರೆ, ಹಳೆ ಮೈಸೂರಿನಲ್ಲಿಯೂ ಕೂಡ ಕರ್ನಾಟಕದ ಬಗ್ಗೆ ಅಭಿಮಾನ ಇತ್ತು ಎಂದು ತೋರಿಸುವುದಕ್ಕಾಗಿ. ಹಾಗೆಯೇ ಶ್ರೀಮಾನ್ ಬಸವಲಿಂಗಪ್ಪನವರೂ ಕೂಡ ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ಮಾಡಿದ್ದಾರೆ. ಹಿಂದೆ ಒಂದು ಫ್ಯೂಡಲ್ ಅಪ್ರೋಚ್ ಅಥವಾ ಕ್ಯಾಪಿಟಲಿಸ್ಟಿಕ್ ಅಪ್ರೋಚ್ ಇದ್ದುದರಿಂದ ಒಂದು ವರ್ಗದ ಜನತೆಗೂ ಮತ್ತೊಂದು ವರ್ಗದ ಜನತೆಗೂ ಜಗಳ ಹುಟ್ಟಿಸುವ ಕುತಂತ್ರ ಮಾಡಿ, ಬೇರೆ ಬೇರೆ ಭಾಗಗಳಲ್ಲಿ ಇದ್ದಂಥ ಕನ್ನಡಿಗರ ಭಾವೈಕ್ಯತೆ ಉಂಟಾಗುವ ಪ್ರಯತ್ನ ಮಾಡಲಿಲ್ಲ. ಕೋಮುವಾರು ಅಭಿಮಾನಿಗಳು ಈ ತನಕ ಈ ಪ್ರಶ್ನೆಯನ್ನು ರಾಜತಾಂತ್ರಿಕ ಟೂಲನ್ನಾಗಿ ಮಾಡಿಕೊಂಡಿದ್ದರು. ಅದಕ್ಕಾಗಿ ಇದುವರೆಗೆ ಭಾವೈಕ್ಯತೆ ಆಗಲಿಲ್ಲ. ಅತ್ತಿನವರು ಇತ್ತ ಬಂದು ರಾಜ್ಯದ ಆಡಳಿತ ಅವರ ಕೈಗೆ ತೆಗೆದುಕೊಳ್ಳುತ್ತಾರೆ ಎನ್ನುವ ಸಂಶಯ ಹುಟ್ಟಿಸಿದರು. ಈಗ ೧೮ ವರ್ಷಗಳು ಆದಮೇಲೆ ಈ ರಾಜ್ಯವನ್ನು ಕರ್ನಾಟಕ ಎಂದು ಕರೆಯದೆ ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಕರ್ನಾಟಕವನ್ನು ಸರ್ವಾಂಗ ಸುಂದರವಾಗಿ ಮಾಡಬೇಕು. ಎಕನಾಮಿಕ್ ಮತ್ತು ಸೋಷಿಯಲ್ ಡೆವಲಪ್‌ಮೆಂಟ್ ಆಗಬೇಕಾಗಿದ್ದರೆ, ಎಮೋಷನಲ್ ಇಂಟಿಗ್ರೇಷನ್ ಆಗಬೇಕು. ಎಮೋಷನಲ್ ಇಂಟಿಗ್ರೇಷನ್ ಆಗುವ ಸ್ಟೇಜಿಗೆ ಬಂದಿದ್ದೇವೆ. ಸ್ವಾತಂತ್ರ್ಯ ಹೋರಾಟದಲ್ಲಿ ಬೆಳಗಾಂ ಜೈಲಿನಲ್ಲಿ ಒಬ್ಬರಿಗೆ ವಿಷ ಕೊಟ್ಟರು. ಆ ವಿಷ ಸೇವನೆಯಿಂದ ಅವರ ಕುಷ್ಟರೋಗ ವಾಸಿಯಾಯಿತು. ಕಾಂಗ್ರೆಸ್ ಆರ್ ಪಾರ್ಟಿಯವರು ಕಮ್ಯುನಿಸ್ಟ್ ಜೊತೆಗೆ ಸೇರಿಕೊಂಡು ಏನೇನೋ ಮಾಡುತ್ತಾರೆಂದು ಜನರನ್ನು ಹೆದರಿಸುತ್ತಿದ್ದರು. ನಾವು ಕರ್ನಾಟಕ ವಿರೋಧಿಗಳು, ಮಹಾರಾಷ್ಟ್ರದ ಜೊತೆಯಲ್ಲಿ ಒಳಸಂಚು ಮಾಡಿ, ಬೆಳಗಾಂನ್ನು ಕರ್ನಾಟಕದಿಂದ ಓಡಿಸಿಬಿಡುತ್ತೇವೆ, ನಮ್ಮ ಬಗ್ಗೆ ಜೋಪಾನ ಇರಬೇಕೆಂದು ಕೆಲವರು ಹೇಳಿದರು. ಅಂತಹವರು ಎಕನಾಮಿಕ್ ಪ್ರೋಗ್ರಾಮನ್ನು ಜಾರಿಗೆ ತಂದು, ಸಣ್ಣ ಸಣ್ಣ ಕೆಲಸಗಳನ್ನು ಮಾಡಲಿಕ್ಕೂ ತಯಾರು ಇಲ್ಲ. ಅವರಿಗೆ ಕರ್ನಾಟಕದ ಹೆಸರು ಕೂಡ ಸಹನೆ ಆಗಲಾರದ ವಿಷಯವಾಗಿದೆ. ಇವರು ಮಾಡಿದ ಸಣ್ಣ ಪ್ರಚಾರಕ್ಕೆ ಜನತೆ ಮರುಳಾಗದೆ, ಇಂದಿರಾ ಗಾಂಧಿಯವರ ಎಕನಾಮಿಕ್ ಪ್ರೋಗ್ರಾಂನಲ್ಲಿ ನಂಬಿಕೆ ಇದ್ದವರು ನಮಗೆ ಮತ ಕೊಟ್ಟು ಇಲ್ಲಿಗೆ ಕಳುಹಿಸಿದ್ದಾರೆ. ಆದುದರಿಂದ ಮೂರು ವರ್ಷಗಳ ಹಿಂದೆ ಇದ್ದಂಥ ವಾತಾವರಣ ಈಗ ಇಲ್ಲ. ರಾಜಕೀಯ ಬದಲಾವಣೆಯಾಗಿ ಜನರು ತಮ್ಮ ಪ್ರಭಾವವನ್ನು ಸರ್ಕಾರದ ಮೇಲೆ ಬೀರಿದ್ದರಿಂದ, ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರು ಬರಲು ಅವಕಾಶವಾಗಿದೆ. ನನ್ನ ಗೆಳೆಯರಾದ ಶ್ರೀ ನಂಜೇಗೌಡರು ಕರ್ನಾಟಕ ಎಂದು ಹೆಸರು-ಬದಲಾವಣೆ ಮಾಡುವ ನಿರ್ಣಯದ ಮೇಲೆ ಈ ಸಭೆಯಲ್ಲಿ ಹಿಂದೆ ಮೂರು ದಿವಸ ಮಾತನಾಡಿದ್ದಾರೆ. ಆ ತರಹ ಪರಿಸ್ಥಿತಿ ೨ ವರ್ಷಗಳ ಮೊದಲು ಇತ್ತು. ಕರ್ನಾಟಕ ಎಂದು ಹೆಸರು ಇಟ್ಟ ಕೂಡಲೆ ಹಳೇ ಮೈಸೂರಿನಲ್ಲಿ ಜ್ವಾಲಾಮುಖಿ ಏಳುತ್ತದೆ ಎಂದು ಸ್ವಾರ್ಥಿಗಳು ಸ್ವಾರ್ಥಕ್ಕಾಗಿ ಆಗಿನ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡರು. ಈಗಿನ ರಾಜಕಾರಣಿಗಳು ಜನರ ಮನಸ್ಸನ್ನು ತಿಳಿದುಕೊಂಡು ಈಗ ಕರ್ನಾಟಕ ಹೆಸರು ಇಡಬೇಕೆನ್ನುವ ನಿರ್ಣಯ ತಂದಿದ್ದಾರೆ. ಈ ಹೆಸರು ನಮ್ಮ ರಾಜ್ಯಕ್ಕೆ ಎಂದೋ ಬರಬೇಕಾಗಿತ್ತು. ಆಗಿದ್ದ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ, ಇದಕ್ಕೆ ಹೆಚ್ಚಿನ ಮಹತ್ವ ಕೊಡಲಿಲ್ಲ. ಇನ್ನೂ ಕೆಲವು ವಿಷಯಗಳನ್ನು ತಮ್ಮ ಮುಂದೆ ಇಡಬೇಕಾಗಿದೆ. ಮಾನ್ಯ ಸದಸ್ಯರೊಬ್ಬರು ನೀಲಗಿರಿ ಬಗ್ಗೆ ಪ್ರಸ್ತಾಪ ಮಾಡಿದರು. ನಮ್ಮ ಜಿಲ್ಲೆಯನ್ನು ಬಿಟ್ಟು ಹೋದ ಜಾಗಗಳನ್ನು ಪಡೆಯುವುದಕ್ಕೆ ಪ್ರಯತ್ನಮಾಡಬೇಕು. ದೇಗಲೂರು ತಾಲ್ಲೂಕಿನಲ್ಲಿ ನಮ್ಮ ಗಡಿಯ ಒಂದು ಫರ್ಲಾಂಗ್ ದೂರದಲ್ಲಿ ಪರಮೇಶ್ವರ ದೇವಸ್ಥಾನ ಇದೆ. ಅದು ಪೊಲಿಟಿಕಲ್ ಬಂಗ್ಲಿಂಗಿನಿಂದ ನಮ್ಮ ಕೈಬಿಟ್ಟು ಹೋಗಿದೆ, ಅಲ್ಲಿ ೨೧ ಅಡಿ ಸುತ್ತ ಹಳೆಗನ್ನಡ ಲಿಪಿಯಲ್ಲಿ ಬರೆದಿದೆ. ಅಂತಹ ಲಿಪಿ ಇಡೀ ಕರ್ನಾಟಕದಲ್ಲೇ ಇಲ್ಲ.

ಹಳೇಬೀಡು ಬೇಲೂರು ಇಂತಹ ಶಿಲ್ಪ ಸೌಂದರ್ಯವಿರುವ ಸ್ಥಳಗಳು ನಮ್ಮ ಕಣ್ಣಿಗೆ ಕಾಣುತ್ತಿವೆ ಆದರೆ ಇದರ ಬಗ್ಗೆ ಇರುವ ಹಳೆಗನ್ನಡದ ಶಿಲ್ಪಗಳು ಇಂದು ಮಹಾರಾಷ್ಟ್ರಕ್ಕೆ ಸೇರಿದ ನಾಂದೇಡ್ ಜಿಲ್ಲೆಯಲ್ಲಿವೆ. ಮಹಾರಾಷ್ಟ್ರದಲ್ಲಿ ಸೇರಿರುವ ಕನ್ನಡ ಮಾತನಾಡುವ ಹಳ್ಳಿಗಳು ನಮಗೆ ಬರಬೇಕು ಎಂದು ನಾವು ಕೇಳಬೇಕು ಮತ್ತು ನಮ್ಮ ರಾಜ್ಯದಲ್ಲಿ ಮರಾಠಿ ಮಾತನಾಡುವ ಜನ ಮಹಾರಾಷ್ಟ್ರಕ್ಕೆ ಹೋಗಬೇಕು ಎಂದು ಕೇಳುವ ಕಾಲವು ಬರಬಹುದು, ಆದರೆ ಇದರಲ್ಲಿ ವೆಸ್ಟೆಡ್ ಅಪ್ರೋಚ್ ಇದ್ದುದರಿಂದ ಇದುವರೆಗೆ ಆಗಲಿಲ್ಲ ಆದರೆ ಇದರಲ್ಲಿ ಸೋಷಿಯಲ್ ಅಪ್ರೋಚ್ ಈಗ ಬಂದುದರಿಂದ ಇಂತಹ ಒಂದು ಕರ್ನಾಟಕ ಹೆಸರು ಬರಲು ಅವಕಾಶವಾಯಿತು. ಇದಕ್ಕಾಗಿ ನಮ್ಮ ಕನ್ನಡ ನಾಡಿನ ಎಲ್ಲರೂ ಅಭಿಮಾನಪಡಬೇಕಾದುದೇ ಇದರ ಬಗ್ಗೆ ಹೆಚ್ಚು ಹೇಳಲು ಹೋಗುವುದಿಲ್ಲ. ಭಾಷೆ ಸಾಹಿತಿಗಳು ಎಲ್ಲ ಭಾಷೆಯವರೂ ಇದ್ದಾರೆ ಪ್ರತಿಯೊಂದು ಭಾಗ

(ಶ್ರೀ ವಿ. ಎನ್. ಪಾಟೀಲ್)

ದಲ್ಲೂ ಇರುವಂತೆ ಇಲ್ಲೂ ಸಾಹಿತಿಗಳಿದ್ದಾರೆ. ಆಂದ್ರದಲ್ಲಿದ್ದಾರೆ. ಮಹಾರಾಷ್ಟ್ರದಲ್ಲಿದ್ದಾರೆ. ಭಾಷೆ ಭಾಷೆಗಳ ಬಗ್ಗೆ ಹೋರಾಡುವುದು ಬೇಡ ನಮ್ಮ ರಾಜ್ಯದ ಸಾಹಿತಿಗಳು ಹಾಗೂ ಕವಿಗಳೂ ಹೇಳಿದಂತೆ ಇಂದು ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರು ಬಂದಿದೆ ಇದನ್ನು ಎಲ್ಲರೂ ಒಪ್ಪಬಹುದು. ಆದರೆ ಇದೇ ಸಂದರ್ಭದಲ್ಲಿ ನಾನು ಒಂದುರೀತಿಯ ಚಾಲೆಂಜ್ ಮಾಡುತ್ತೇನೆ. ಏನೆಂದರೆ, ಕಾವಿ ಬಟ್ಟೆ ಹಾಕಿದವರೆಲ್ಲಾ ಸನ್ಯಾಸಿಗಳಾ ಗುವುದಿಲ್ಲ ಅದರಂತೆ ಈರಾಜ್ಯದ ಹೆಸರನ್ನು ಕರ್ನಾಟಕ ಎಂದು ದೊಡ್ಡದಾಗಿ ಹೇಳಿದರೂ ಇಂದು ರಾಜ್ಯದಲ್ಲಿ ಉಪವಾಸದಿಂದ ನರಳುತ್ತಿರುವ ನಿರುದ್ಯೋಗಿಗಳ ಬಗ್ಗೆ ಅನುಕಂಪತೋರಿಸಿ, ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕು. ಈ ಬಗ್ಗೆ ಫುಡಲ್ ಅಪ್ರೋಚ್ ಬಿಟ್ಟು ನ್ಯಾಷಿನಲ್ ಅಪ್ರೋಚಿನಲ್ಲಿ ಹೋಗ ಬೇಕೆಂದು ಹೇಳುತ್ತೇನೆ. ಮತ್ತು ನಿಮ್ಮ ಗರೀಬಿ ಹಠಾವೋ ಯೋಜನೆಯಂತೆ ನಮ್ಮ ಕರ್ನಾಟಕದಲ್ಲಿರುವ ಪದವೀಧರ ನಿರುದ್ಯೋಗಿಗಳಿಗೆ ಸಬಸಿಸ್ಟೆನ್ಸ್ ಅಲೌಯನ್ಸ್ ಎಂದರೆ ಒಬ್ಬರಿಗೆ ಸುಮಾರು ೧೫೦ ರೂಪಾಯಿಗಳಂತೆ ಪ್ರತಿತಿಂಗಳೂ ಅವರಿಂದ ಕೆಲಸವನ್ನು ತೆಗೆದುಕೊಳ್ಳಬೇಕು. ಇಂತಹ ಒಂದು ಗ್ಯಾರಂಟಿ ಅವರಿಗೆ ಕೊಡಬೇಕು ಮತ್ತು ದೇಶದಲ್ಲಿರುವ ಕೋಮುವಾರು ವಿಷವನ್ನು ತೊಡೆದು ಹಾಕಬೇಕು. ಮತ್ತು ಇದಕ್ಕೆ ತಕ್ಕ ಪ್ರೋಗ್ರಾಂಗಳನ್ನು ಹಾಕಿಕೊಂಡು ಕೆಲಸ ಮಾಡಬೇಕು. ಬರೀ ಒಂದು ಹೆಸರನ್ನು ಬದಲಾವಣೆ ಮಾಡುವುದರಿಂದ ಇವೆಲ್ಲಾ ಆಗುವುದಿಲ್ಲವೆಂದು ನಾನು ತಿಳಿದಿದ್ದೇನೆ. ಮಾನ್ಯ ಸದಸ್ಯರೆಲ್ಲರೂ ಒಂದು ಒಮ್ಮತಪ ದ್ವನಿಯಿಂದ ಕರ್ನಾಟಕ ಎಂದು ಹೆಸರು ಇಡಲು ಒಪ್ಪಿರುವುದು ಸರಿಯೇ. ಆದರೆ ಇದರ ಬಗ್ಗೆ ಮಾಡುವ ಕೆಲಸಗಳೂ ಇನ್ನೂ ಇವೆ. ಮೊನ್ನೆ ಇಲ್ಲಿ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ್ ರವರು ಬಹಳ ಎಮೋಷನಲ್ ಆಗಿ ಕೆಲವು ವಿಚಾರಗಳನ್ನು ಹೇಳಿದರು. ಅದರ ಬಗೆ ಹೇಳಲು ನಾನು ಹೋಗುವುದಿಲ್ಲ. ಆದರೆ ಅವರು ಹೇಳಿದ ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತ ಎತ್ತೇನೆ. ಏನೆಂದರೆ ಅವರೇ ಹೇಳಿದಂತೆ ಒಂದು ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಸ್ಕಾಲರುಷಿಪ್ ಇಲ್ಲವೇ ಇತರ ಅರ್ಜಿ ಫಾರಂಗಳಲ್ಲಿ ಯಾವ ಕೋಮು ಎಂದು ಇರುವ ಕಲಂನ್ನು ತೆಗೆಯಲು ಇನ್ನಾದರೂ ನಮ್ಮ ಸರಕಾರ ಮನಸು ಮಾಡಬೇಕು. ಈ ಬಗೆ ಸರ್ಕಾರದವರು ಗ್ಯಾರಂಟಿ ಕೊಡುತ್ತಾರೆಯೇ ಇದನ್ನು ನಮ್ಮ ಮಂತ್ರಿ ಮಂಡಲದವರು ಈಗಲಾದರೂ ಇಂಪ್ಲಿಮೆಂಟ್ ಮಾಡುತ್ತಾರೆಯೇ ? ಇದೊಂದು ಮಾಡಿದರೆ ಆಗ ಕರ್ನಾಟಕ ಮಾಡಿದುದಕ್ಕೆ ಸಾರ್ಥಕವಾಗುತ್ತದೆ. ಮುಖ್ಯವಾಗಿ ಕೋಮುವಾರು ಹೆಸರಿನಲ್ಲಿ ಶೋಷಣೆಗಳ ನಡೆಯಬಾರದು. ಕರ್ನಾಟಕವೆಂದೇನೋ ಆಗುತ್ತಿದೆ, ಆದರೆ ಇದರಿಂದ ಜನತೆಗೆ ಅನುಕೂಲವಾಗುವಂತೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.

ಇಷ್ಟು ಮಾತಾಡಲು ಅವಕಾಶ ಕೊಟ್ಟ ಉಪಾಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ ನಾಯಕ್ (ಕುಮಟಾ).—ಮಾನ್ಯ ಅಧ್ಯಕ್ಷರೆ, ಈ ಘಟನೆ ನಮ್ಮ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯುವಂತಹ ಘಟನೆಯಾಗಿದೆ. ಮತ್ತು ಒಂದು ಆನಂದದಾಯಕವಾದ ಘಟನೆಯಾಗಿ ಎಲ್ಲರ ಪ್ರಶಂಸೆಗೂ ಪಾತ್ರವಾಗುವಂತೆ ಮಾಡಿದವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳೂ ಹಾಗೂ ನಮ್ಮ ಪಕ್ಷದ ನಾಯಕರಾಗಿರುವ ಶ್ರೀಮಾನ್ ದೇವರಾಜಅರಸ ರವರುಹೆಸರಿನ ವೈಶಿಷ್ಟ್ಯವನ್ನು ಕುರಿತುಹೇಳುವಾಗ ಕರ್ನಾಟಕ ಎಂದು ಹೇಳುವಹೆಸರು ನಿಜವಾಗಿಯೂ ವೈಶಿಷ್ಟ್ಯಪೂರ್ಣವಾಗಿಯೂ ವೈಚಿತ್ರ್ಯಪೂರ್ಣವಾಗಿಯೂ ಇರುವಂತಹದ್ದಾಗಿದೆ. ಇಂತಹ ಒಂದು ಸಂದರ್ಭದಲ್ಲಿ ಬೇರೆ ಯಾರಿಗೂ ಆಗದಂತಹ ಆನಂದ ನನಗೆ ಉಂಟಾಗಿದೆ ಮತ್ತು ಇದನ್ನು ಹೇಳಲಿಕ್ಕೆ ಶಬ್ದಗಳೇ ಸಾಲದಾಗಿದೆ, ಅಲೆ ಅಲೆಯಾಗಿ, ಮಲೆಮಲೆಗಳನ್ನು ಹಬ್ಬಿ ದಿಗಂತಗಳಲ್ಲಿಯೂ ಅವಿಶ್ರಾಂತವಾಗಿ ಶೋಭಿಸುವ ಮಹಾಶ್ರೇಣಿಯಿಂದ ಉದ್ದೀಪನಾಗುವ ಒಂದು ಭಾವದಂತೆ ಭಕ್ತಿ ಗೌರವಗಳಿಗೆ ಆಸ್ಪದ ವಾಗಿದೆ ಈ ಶುಭ ದಿನ ಬಾನಲ್ಲದೆ ಬೇರೆ ಅಂಚಿಲ್ಲದ ಹೆಗ್ಗಡಲಿನ ತೆರೆ ತೆರೆಯ ಸದೃಡ ಚಂಚಲ ಒಂದು ಕರ್ಮಮಯ ಜೀವನದಂತೆ ನಿರಂತರ ನವೀನವಾದ ಸಾಹಸೋಲ್ಲಾಸದಿಂದ ಆತ್ಮ ಶ್ರೀದ್ಯೋತಕವಾಗಿದೆ ನಮ್ಮ ರಾಜ್ಯದಲ್ಲಿ ಒಳ್ಳೆಯ ಕರಾವಳಿ ಪ್ರದೇಶ ಇದೆ ಇದೂ ಅಲ್ಲದೆ ನಮ್ಮ ರಾಜ್ಯಕ್ಕೆ ಸುಮಾರು ಎರಡೂವರೆ ಸಾವಿರ ವರ್ಷದ ಚಾರಿತ್ರಿಕ ಹಿನ್ನಲೆ ಇದೆ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ. ಅದರಲ್ಲೂ ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಕರಾವಳಿ ಪ್ರದೇಶ ಬಹು ಸುಂದರವಾಗಿದೆ. ಇಲ್ಲಿನ ಇತಿಹಾಸ ಇದಕ್ಕೆ ಗ್ರೀಕ್ ಹಾಗೂ ರೋಮ್ ರಾಜ್ಯಕ್ಕೆ ಸಂಬಧಪಟ್ಟಂತೆ ಇದೆ. ಗ್ರೀಕ್ ರೋಮ ಸಂಸ್ಕೃತಿ ಹಾಗೂ ನಮ್ಮದೇಶದ ಸಂಸ್ಕೃತಿ ಬೇರೆ ಬೇರೆ ಯಾಗಿರಬಹುದು. ಆದರೂ ಕರಾವಳಿ ಪ್ರದೇಶದಲ್ಲಿ ನಮ್ಮ ರಾಜ್ಯದ ಹಿನ್ನಲೆಯುಳ್ಳ ಇತಿಹಾಸವಿದೆ ಎಂದು ಹೇಳಬಯುಸುತ್ತೇನೆ . ಆಗಿನ ಕಾಲದಲ್ಲೇ ವಿಪುಲವಾದ ಉದ್ಯಮಗಳನ್ನು ಹೊನ್ನಾವರ ಹಾಗೂ ಬಟ್ಕಲ್ ಮೂಲಕ ಕೆಲವರು ನಡೆಸುತ್ತಿದ್ದರೆಂದು ಇಲ್ಲಿ ಒತ್ತಿ ಹೇಳಲು ಇಚ್ಛಿಸುತ್ತೇನೆ. ಕರ್ನಾಟಕದಲ್ಲಿ ಹೆಸರಾಂತರಾದವರು

ಎಂದರೆ ರಾಣಿ ಕಿತ್ತೂರುಚೆನ್ನಮ್ಮ ಹಾಗೂಗೇರುಸೊಪ್ಪೆಯ ಚೆನ್ನಭೈರಾದೇವಿ ಇವರು ಇದ್ದಿದ್ದರೆ ಚರಿತ್ರೆಯೇ
ಬೇರೆ ಆಗುತ್ತಿತ್ತು, ಖಂಡಿತ ಕರ್ನಾಟಕ ಎನ್ನುವ ಹೆಸರು ಆಗುತ್ತಿರಲಿಲ್ಲ ಎಂದು ಸ್ಪಷ್ಟವಾಗಿ ಆಗಿನ ಕಾಲದ
ಪಂಡಿತರು ಹೇಳುತ್ತಿದ್ದರು. ಹಿಂದೆ ಮುಂಬಯಿ ಎನ್ನುವ ಹೆಸರು ಒಂದು ಪಟ್ಟಣದ ದ್ಯೋತಕವಾಗಿತ್ತು

ಆದೇರೀತಿ ಮೈಸೂರು ಎನ್ನುವ ಹೆಸರು ಒಂದು ಪಟ್ಟಣದ ದ್ಯೋತಕವಾಗಿತ್ತು ಆದುದರಿಂದ ಇಂತಹ
ಮೈಸೂರು ಎಂಬ ಪಟ್ಟಣದ ಹೆಸರನ್ನು ರಾಜ್ಯಕ್ಕೆ ಇಡುವುದು ಅಷ್ಟು ಸಮಂಜಸವಲ್ಲ ಎಂದು ಈ ಸಂದರ್ಭ
ದಲ್ಲಿ ನೆನಪುಮಾಡಿಕೊಡಬೇಕಾಗಿದೆ. ಯಾವಾಗಲು ಒಂದು ಪಟ್ಟಣದ ಹೆಸರು ರಾಜ್ಯಕ್ಕೆ ಇಡುವುದು
ದ್ಯೋತಕವಲ್ಲ. ಇಂದು ಕರ್ನಾಟಕ ಎಂದು ಹೆಸರನ್ನಿಟ್ಟಿರುವುದು ಸ್ತುತ್ಯವಾಗಿದೆ. ನೈಜವಾಗಿದೆ ಎಂದು
ಮತ್ತೊಮ್ಮೆ ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ರಾಜ್ಯದ ಇತಿಹಾಸವೇನೇ ಇರಲಿ, ಸಂಸ್ಕೃತಿಯ
ಹಿನ್ನೆಲೆ ಏನೇ ಇರಲಿ, ಅದರ ಚರಿತ್ರೆಯನ್ನೆಲ್ಲಾ ಪುನ: ವಿವರಿಸುವುದಕ್ಕೆ ಹೋಗುವುದಿಲ್ಲ. ಆದರೂ
ಇಂತಹ ಒಂದು ವಿಶಾಲ ರಾಜ್ಯವಾದ ಕರ್ನಾಟಕವಾಗುವಾಗ ಇನ್ನೂ ಇದರಿಂದ ಒಡೆದು ಹೋಗಿ
ರುವ ಅನೇಕ ಭಾಗಗಳೂ ಇವೆ. ಅವನ್ನು ಕೂಡ ಸೇರಿಸಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು
ಇಲ್ಲಿ ನೆನಪು ಮಾಡಿಕೊಡಲು ಇಚ್ಛಿಸುತ್ತೇನೆ..

4-30 P M.

ವಿಜಯನಗರದ ರಾಜರು ರಾಜ್ಯ ಹಾಳುತ್ತಿದ್ದಾಗ ಈ ಕರ್ನಾಟಕದಲ್ಲಿ ಹಾಲ್ಜೇನು ಹರಿಯಿತು. ಆ
ಸಂದರ್ಭವನ್ನು ಪರಕೀಯರು ಸಹ ಹೊಗಳಿದ್ದಾರೆ. ಮತ್ತು ಆ ಒಂದು ಸಂದರ್ಭ ಆಚಂದ್ರಾರ್ಕವಾಗಿ
ಉಳಿದಿದೆ. ಅದರಂತೆ ಇನ್ನು ಮುಂದೆಯೂ ಸಹ ಪರಕೀಯರ ಮತ್ತು ವಿದೇಶಿ ಪ್ರವಾಸಿಗರ ಪ್ರಶಂಸೆಗೆ
ಪಾತ್ರವಾಗುವಂತೆ ನಮ್ಮ ಕರ್ನಾಟಕ ರಾಜ್ಯವನ್ನು ಬೆಳೆಸಬೇಕಾಗಿದೆ. ಈ ಒಂದು ದೃಷ್ಟಿಯಿಂದ ನಮ್ಮ
ಸರ್ಕಾರ ಸಮಾಜವಾದಿ ಸಮಾಜ ರಚನೆಯನ್ನು ಜಾರಿಗೆ ತರುವುದಕ್ಕೆ ಹೊರಟಿದೆ. ಈ ಸರ್ಕಾರ ಅಧಿಕಾರ
ವಹಿಸಿಕೊಳ್ಳುವುದಕ್ಕೆ ಮುಂಚೆ ಏನು ಜನತೆಯ ಮುಂದೆ ಹೇಳಿತ್ತೋ ಅದರಂತೆ ನಡೆದುಕೊಳ್ಳುತ್ತಿದೆ.

"ಇರುವೆಲ್ಲವನಾ ಎಲ್ಲ ಜನತೆ ತೆರವಾಗಿಸುವ, ಸಮಬಗೆಯ ಸಮ ಸುಖದ ಸಮ
ದುಃಖದ, ಸಾಮರಸ್ಯ ಸಮಗಾನ ಲಹರಿಯ ಮೇಲೆ ತೇಲಿಬರುವ" ಈ ಪ್ರಕಾರ ನಮ್ಮ
ಸರ್ಕಾರ ನಡೆದುಕೊಳ್ಳುತ್ತಿದೆ.

ಸಮಾಜವಾದೀ ನಾಡನ್ನು ಕಟ್ಟಲಿಕ್ಕೆ ನಮ್ಮ ಸರ್ಕಾರ ಸರ್ವ ಪ್ರಯತ್ನ ಮಾಡುತ್ತದೆ ಎಂದು ಹೇಳಿ
ಈ ಸಂದರ್ಭದಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತು
ಗಳನ್ನು ಮುಗಿಸುತ್ತೇನೆ.

‡ಶ್ರೀ ಶರಣಪ್ಪ. (ದೇವದುರ್ಗ).—ಮಾನ್ಯ ಅಧ್ಯಕ್ಷರೇ, ಈ ದಿನ ಮತ್ತು ನೆನ್ನೆದಿವಸ ಅನೇಕ
ಮಾನ್ಯ ಸದಸ್ಯರು ನಮ್ಮ ಮುಂದೆ ಇರುವಂಥ ಗೊತ್ತುವಳಿಯ ಮೇಲೆ ತಮ್ಮ ವಿಚಾರಗಳನ್ನು ತಿಳಿಸಿದ್ದಾರೆ.
ಮತ್ತು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡುವ ನಿರ್ಣಯದ ಬಗ್ಗೆ ತಮ್ಮ ಸಮರ್ಥ
ನೆಯನ್ನು ಸಹ ಮಾಡಿದ್ದಾರೆ. ಹಳ್ಳಿಯಿಂದ ಹಿಡಿದು ಪಟ್ಟಣದವರೆಗೆ ಇರುವ ಎಲ್ಲ ಜ್ಞಾನಿಗಳಿಗೂ ಸಹ
ತಿಳಿಯುವಂತಹ ಮತ್ತು ಅವರ ಆತ್ಮಕ್ಕೆ ಶಾಂತಿ ಸಿಗುವಂತಹ ಹೆಸರನ್ನು ನಮ್ಮ ರಾಜ್ಯಕ್ಕೆ ಇಡುವ ಬಗ್ಗೆ
ಒಂದು ಠರಾವನ್ನು ಈ ಸದನದ ಮುಂದೆ, ಈ ಸದನದ ಸಭಾನಾಯಕರಾದಂಥ ಶ್ರೀಮಾನ್ ಡಿ.
ದೇವರಾಜ ಅರಸ್ ಅವರು ಸೂಚನೆ ಮಾಡಿರುವುದು ಸೂಚ್ಯವಾಗಿದೆ. ಈ ಹೆಸರು ಸರ್ವರಿಗೂ ಒಪ್ಪಿಗೆಯಾಗು
ವಂಥಾದ್ದು ಆಗಿದೆ. ಈ ಒಂದು ಠರಾವನ್ನು ಈ ಸಭೆಯ ಮುಂದೆ ತಂದಿದ್ದು ನಮ್ಮೆಲ್ಲರ, ಕನ್ನಡಿಗರೆಲ್ಲರ
ಒಂದು ಸೌಭಾಗ್ಯವೆಂದು ಹೇಳಬಹುದು. ಈಕಾರಣದಿಂದ ಈ ದಿವಸ ಈ ಒಂದು ಠರಾವಿಗೆ ನನ್ನ ಬೆಂಬಲ
ಕೊಡುತ್ತಿರುವುದಲ್ಲದೆ, ಈ ಠರಾವನ್ನು ಮಂಡಿಸಿದಂಥ ಶ್ರೀ ಮಾನ್ ಡಿ. ದೇವರಾಜು ಅರಸ್ ಅವರಿಗೆ
ನನ್ನ ಅಭಿನಂದನೆಗಳನ್ನು ಅರ್ಪಿಸಬೇಕು ಎಂದು ನನ್ನ ಮತ ಇದೆ. ಇವತ್ತಿನ ದಿವಸ ಎಲ್ಲಾ ರೀತಿಯಿಂದ
ಅವರಿಗೆ ಅಭಾರಮನ್ನಣೆಯನ್ನು ಅರ್ಪಿಸಬೇಕಾಗಿದೆ. ಆಡಳಿತಪಕ್ಷದ ನಾಯಕರೇ ಸರ್ವರಿಗೂ ಸಮ್ಮತ
ವಾಗುವಂತಹ ಠರಾವನ್ನು ಈ ಸಭೆಯ ಮುಂದೆ ಇಟ್ಟಿದಕ್ಕೆ ಕೃತಜ್ಞತೆಗಳನ್ನು ಅರ್ಪಿಸುವುದು ನನ್ನ
ಮೊದಲ ಕರ್ತವ್ಯವಾಗಿದೆ. ಎರಡನೆಯದಾಗಿ, ಕಾಲಚಕ್ರ ಬದಲಾದಂತೆ ನಾವು ಬದಲಾಗಬೇಕಾಗಿದೆ ಎಂದು
ಏನು ಮುಖ್ಯಮಂತ್ರಿಗಳು ಹೇಳಿದರು, ಅದಕ್ಕೆ ಕೃತಜ್ಞತೆಯನ್ನು ಅರ್ಪಿಸಬೇಕಾಗಿದೆ. ಏಕೆಂದರೆ ಇದೇ
ರೀತಿಯ ನಿರ್ಣಯ ೧೯೬೩ ಮತ್ತು ೧೯೬೪ರಲ್ಲಿ ಈ ಸದನದ ಮುಂದೆ ಬಂದಿದ್ದಾಗ ಮಾನ್ಯ ಡಿ. ದೇವರಾಜ
ಅರಸ್ ಅವರೇ ಅದಕ್ಕೆ ಅನುಮತಿ ಕೊಡಲಿಲ್ಲ. ಆದರೆ ಇವತ್ತಿನದಿವಸ ಕಾಲಚಕ್ರ ಬದಲಾದಂತೆ ಅವರ
ಮನಸ್ಸು ಮತ್ತು ಅವರ ಹೃದಯ ಪರಿವರ್ತನೆಯಾಗಿದೆ. ಅದರಂತೆ ಅವರೆ ಈ ಒಂದು ಠರಾವನ್ನು

(ಶ್ರೀ ಶರಣಪ್ಪ)

ಸೂಚನೆ ಮಾಡಿದ್ದಾರೆ ನಾನು ಅವರನ್ನು ಆತ್ಮೀಯತೆಯಿಂದ ಅಭಿನಂದಿಸುತ್ತೇನೆ. ಕನ್ನಡ ಮಾತನಾಡತಕ್ಕಂಥ ಭಾಗಗಳು ಬೇರೆ ಬೇರೆ ರಾಜ್ಯಗಳಲ್ಲಿ ಸೇರಿಹೋಗಿದ್ದವು. ೧೯೫೬ನೇ ಇಸವಿಯಲ್ಲಿ ಅವೆಲ್ಲವನ್ನೂ ನಮ್ಮ ಮೈಸೂರು ರಾಜ್ಯದೊಂದಿಗೆ ವಿಲೀನಗೊಳಿಸಲಾಯಿತು. ಸುದೈವದಿಂದ ಆ ಎಲ್ಲ ಭಾಗಗಳು ಸಹ ನಮಗೆ ದೊರೆಯಿತು. ಆದರೆ, ೧೯೫೬ ರಿಂದ ೧೯೭೨ನೇ ಇಸವಿಯ ಮಧ್ಯದಲ್ಲಿ ಅಂದರೆ ೧೯೫೭–೫೮ರಲ್ಲಿ, ೧೯೬೩–೬೪ರಲ್ಲಿ ಪುನಃ ೧೯೬೮–೬೯ರಲ್ಲಿ ಅನೇಕ ಸಲ ಇದೇ ನಾಮಕರಣದ ವಿಷಯದಲ್ಲಿ ಈ ಮಾನ್ಯ ಸಭೆಯ ಮುಂದೆ ನಿರ್ಣಯಗಳು ಬಂದರೂ, ಮತ್ತು ಅನೇಕ ಸ್ವಯಂವರ ಸಮಾರಂಭಗಳು ಬಂದರೂ ಅದಕ್ಕೆ ಸುದೈವದಿಂದ ಕಾಲ ಬರಲಿಲ್ಲ. ಈಗ ಮತ್ತೆ ಅಂತಹ ಒಂದು ಸ್ವಯಂವರ ಸಮಾರಂಭ ಬಂದಿದೆ. ಈ ಸ್ವಯಂವರ ಸಮಾರಂಭದಲ್ಲಿ ಪುಷ್ಪಹಾರವನ್ನು ಅರ್ಪಿಸತಕ್ಕಂಥ ಒಂದು ಗೌರವ ಶ್ರೀಮಾನ್ ಡಿ. ದೇವರಾಜ ಅರಸ್ ಅವರ ಪಾಲಿಗೆ ಬಂದಿದೆ. ಅವರು ಇವೊತ್ತಿನದಿವಸ ಹಳೆಯ ಮೈಸೂರು, ಹೊಸ ಮೈಸೂರು ಎಂಬ ಭಾವನೆಯನ್ನು ಮರೆತು, ನಾವೆಲ್ಲರೂ ಭಾವೈಕ್ಯದಿಂದ ಬಾಳೋಣ, ಈ ದೇಶದ ನಾಗರೀಕರಾಗಿ, ಅಚ್ಚ ಕನ್ನಡಿಗರಾಗಿ ಬಾಳೋಣ. ಯಾವ ಭಾಗದಿಂದ ಬಂದರೂ ಕನ್ನಡಿಗರೇ ಎಂಬ ಧ್ಯೇಯ ಇಟ್ಟುಕೊಂಡು ಕರ್ನಾಟಕ ರಾಜ್ಯವನ್ನು ಕಟ್ಟೋಣ, ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡೋಣ ಎಂಬ ಅಭಿಮಾನದಿಂದ ಈ ಠರಾವನ್ನು ತಂದಿದ್ದಾರೆ. ಅದನ್ನು ನಾವೆಲ್ಲರೂ ಮೆಚ್ಚುವಂತಹದ್ದಾಗಿದೆ ಮತ್ತು ನಾವೆಲ್ಲರೂ ಸ್ವಾಗತ ಮಾಡುವಂತಹದ್ದಾಗಿದೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ, ೧೯೫೬ಕ್ಕೆ ಮುಂಚೆ ನಮ್ಮ ದಕ್ಷಿಣ ಭಾರತದಲ್ಲಿ ಮತ್ತು ಇನ್ನಿತರ ಉತ್ತರ ಭಾರತದಲ್ಲಿ ಮುಂಬೈ ಪ್ರಾಂತ್ಯ, ಹೈದರಾಬಾದ ಪ್ರಾಂತ್ಯ, ಮದ್ರಾಸ್ ಪ್ರಾಂತ್ಯ ಎಂಬುದಾಗಿ ಇದ್ದವು. ಮುಂದೆ ಭಾಷಾವಾರು ತಳಹದಿಯ ಮೇಲೆ ಈ ರಾಜ್ಯಗಳನ್ನು ಪುನರ್ವಿಂಗಡನೆ ಮಾಡಿದ ಮೇಲೆ, ಮುಂಬೈ ರಾಜ್ಯವನ್ನು ಮಹಾರಾಷ್ಟ್ರ ಎಂದು, ಹೈದರಾಬಾದ್ ರಾಜ್ಯವನ್ನು ಆಂಧ್ರ ಎಂದು, ಮದ್ರಾಸ್ ರಾಜ್ಯವನ್ನು ತಮಿಳುನಾಡು ಎಂದು ಆ ರಾಜ್ಯಗಳ ಹೆಸರುಗಳನ್ನು ಬದಲಾವಣೆ ಮಾಡಿಕೊಂಡರು. ಮತ್ತು ತಮ್ಮ ನೆಚ್ಚಿನ, ತಮ್ಮ ಮೆಚ್ಚಿನ ಹೆಸರುಗಳನ್ನು ತಮ್ಮ ತಮ್ಮ ರಾಜ್ಯಕ್ಕೆ ಇಟ್ಟುಕೊಂಡು ತಮ್ಮ ಪ್ರಾಂತ್ಯಗಳನ್ನು ಕಟ್ಟಿ ಬೆಳೆಸಿಕೊಂಡು ಬಂದರು. ಆದರೆ ಅದೇ ಕಾಲಕ್ಕೆ ನಮ್ಮ ರಾಜ್ಯದ ಹೆಸರನ್ನು ಬದಲಾವಣೆ ಮಾಡಲಿಲ್ಲ. ಕೆಲವೊಂದು ಜನ ತಮ್ಮ ಒಂದು ಸ್ವಾರ್ಥಕ್ಕಾಗಿ, ಹೆಸರಿನ ಬದಲಾವಣೆ ಬಗ್ಗೆ ಒಗ್ಗಟ್ಟು ಇಲ್ಲದೆ, ಮೈಸೂರು ಎಂಬ ಹೆಸರೇ ಇಲ್ಲಿಯವರೆಗೆ ಮುಂದುವರೆಯಿತು. ಆದರೆ ಇವೊತ್ತಿನ ದಿವಸ ನಮಗೆ ಒಂದು ಗೌರವದ ದಿನವಾಗಿದೆ. ನಾವು ಈ ಮನೆಯ ಸದಸ್ಯರಾಗಿರುವ ಸಮಯದಲ್ಲಿ ನಮ್ಮ ರಾಜ್ಯಕೆ ಕರ್ನಾಟಕ ಎಂದು ಹೆಸರು ಇಟ್ಟಿದ್ದು ನೋಡಿದರೆ, ಇದು ನಮ್ಮ ಜೀವಮಾನದಲ್ಲಿಯೇ ಒಂದು ಹೆಮ್ಮೆಯ ಮಾತು. ಇದು ಮುಂದೆ ಬರುವ ಪೀಳಿಗೆಗೆ ಮತ್ತು ಮುಂದೆ ಬರುವ ಜನಾಂಗಕ್ಕೆ ಒಂದು ಮಾರ್ಗದರ್ಶನ ಮಾಡಿ ತೋರಿಸಿದಂತಾಯಿತು. ಹೈದರಾಬಾದ್ ಕರ್ನಾಟಕ, ಮುಂಬೈ ಕರ್ನಾಟಕ, ಮದ್ರಾಸ್ ಕರ್ನಾಟಕ ಮತ್ತು ಹಳೆಯ ಮೈಸೂರು ಎಂಬ ಭಾವನೆಯನ್ನು ಈ ಹೆಸರಿಡುವುದರ ಮೂಲಕ ತೆಗೆದುಹಾಕಿದಂತಾಯಿತು. ಇನ್ನು ಮುಂದೆ ನಾವೆಲ್ಲರೂ ಕನ್ನಡಿಗರು, ನಾವೆಲ್ಲರೂ ಒಂದೇ ತಾಯಿಯ ಮಕ್ಕಳು. ನಾವೆಲ್ಲ ಕನ್ನಡ ದೇಶದಲ್ಲಿ ಹುಟ್ಟಿದವರು, ಎಂಬ ಭಾವನೆಯನ್ನು ನಮ್ಮ ಮಕ್ಕಳಿಗೆ ತೋರಿಸಿಕೊಡುವುದಕ್ಕೆ ಅವಕಾಶವಾಗುತ್ತದೆ. ಮತ್ತು ಆ ರೀತಿಯ ಮಾರ್ಗದರ್ಶನ ಬರುವ ರೀತಿಯಲ್ಲಿ, ಸರ್ವಸಾಮಾನ್ಯವಾಗಿ ಎಲ್ಲರೂ ಒಪ್ಪುವ ರೀತಿಯಲ್ಲಿ ಇಂದಿನ ಠರಾವು ಇದೆ. ಇಂದು ನಮ್ಮ ಸಹೋದ್ಯೋಗಿಗಳಾಗಿದ್ದ ದಿವಂಗತ ಶ್ರೀಮಾನ್ ದೊಡ್ಡಮೇಟಿಯವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. ಅಥವಾ ಅವರ ಜೀವಮಾನದಲ್ಲಿಯೇ ಈ ಒಂದು ಠರಾವು ಬಂದು ಪಾಸಾಗಿದ್ದರೆ ಅವರಿಗೆ ಹೃದಯಾಘಾತವಾಗುತ್ತಿರಲಿಲ್ಲ. ಏಕೆಂದರೆ ಅವರು ಮಲಗಿದ್ದಾಗ, ಎದ್ದಾಗ ಮತ್ತು ನಡೆದಾಡುವಾಗಲೆಲ್ಲಾ ಈ ರಾಜ್ಯದ ಹೆಸರು ಕರ್ನಾಟಕ ಆಗಬೇಕು ಎಂದು ಹೇಳುತ್ತಿದ್ದರು. ಆದರೆ ಈ ಒಂದು ಠರಾವು ಅವರ ಜೀವಮಾನ ಕಾಲದಲ್ಲಿ ಪಾಸಾಗಲಿಲ್ಲ. ಅವರ ಹಾಗೆಯೇ ಶ್ರೀಮಾನ್ ಗೋಪಾಲಗೌಡರು ಸಹ ಈ ಮಾನ್ಯ ಸಭೆಯ ಸದಸ್ಯರಾಗಿದ್ದರು. ಅವರಿಗೂ ಈ ರಾಜ್ಯದ ಹೆಸರು ಕರ್ನಾಟಕ ಆಗಬೇಕು ಎಂಬ ಬಗೆ ಅಭಿಮಾನವಿತ್ತು.

ಆ ಇಬ್ಬರು ಹಿರಿಯ ಮಾನ್ಯ ಸದಸ್ಯರು ಎಲ್ಲಿದ್ದರೂ ಕೂಡ ಅವರ ಆತ್ಮಕ್ಕೆ ಶಾಂತಿ ದೊರೆತೀತು ಎಂದು ನಾನು ಹೇಳಬೇಕಾಗುತ್ತದೆ. ಭಾಷಾವಾರು ಪ್ರಾಂತ ರಚನೆಯ ಕಾಲದಲ್ಲಿ, ಈ ವಿಶಾಲ ಮೈಸೂರು ರಚನೆಯಾಗುವಾಗ ಶ್ರೀಮಾನ್ ನಿಜಲಿಂಗಪ್ಪನವರು ಮತ್ತು ಶ್ರೀಮಾನ್ ಕೆ. ಹನುಮಂತಯ್ಯನವರೂ ಈಗ ಕರ್ನಾಟಕ ಎನ್ನುವ ಹೆಸರನ್ನು ಇಡದಿದ್ದರೂ ಸಹ ಚಿಂತೆಯಿಲ್ಲ, ಈ ರಾಜ್ಯಕ್ಕೆ ಮೈಸೂರು ಎಂದು ಕರೆದರೂ ಅಡ್ಡಿಯಿಲ್ಲ ಕನ್ನಡಿಗರೆಲ್ಲರೂ ಮೊದಲು ಒಂದಾಗಬೇಕು: . ಕನ್ನಡ ಪ್ರದೇಶ

ಗಳೆಲ್ಲಾ ಒಂದಾಗಬೇಕೆಂದು ಹೇಳಿದರು. ಮತ್ತು ಆಗ ಯಾವ ಭೇದಭಾವವನ್ನೂ ಉಂಟು ಮಾಡದೆ ಕರ್ನಾಟಕ ಪ್ರಾಂತ್ಯ ರಚನೆಯನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟರು. ಆದ ಕಾರಣ ಆ ಮಹಾಪುರುಷರಾದ ಶ್ರೀಮಾನ್ ನಿಜಲಿಂಗಪ್ಪನವರನ್ನೂ ಮತ್ತು ಶ್ರೀಮಾನ್ ಕೆ.ಹನುಮಂತಯ್ಯನವರನ್ನೂ ಮತ್ತು ಅವರು ಮಾಡಿದ ಸೇವೆಯನ್ನೂ ಈ ದಿವಸ ನೆನಪು ಮಾಡಿಕೊಳ್ಳುವುದು ನಮ್ಮ ಕರ್ತವ್ಯ. ಈ ದಿವಸ ಸರ್ಕಾರದವರು ಈ ಒಂದು ಠರಾವನ್ನು ಏನು ಈ ಸಭೆಯಲ್ಲಿ ತಂದಿದ್ದಾರೆ, ಇದರ ಬಗ್ಗೆ ಯಾರಿಗೂ ಭಿನ್ನಾಭಿಪ್ರಾಯ ಇಲ್ಲ. ಇದು ಸರ್ವಾನುಮತದಿಂದ ಪಾಸಾಗಬೇಕು. ಈ ಠರಾವಿಗೆ ನನ್ನ ಹೃತ್ಪೂರ್ವಕವಾದ ಬೆಂಬಲವನ್ನು ನಾನು ಕೊಡುತ್ತೇನೆ.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ನಾನು ಇಲ್ಲಿ ಹೇಳಬಯಸುತ್ತೇನೆ ಇವೊತ್ತಿನ ದಿವಸ ಐತಿಹಾಸಿಕ ದೃಷ್ಟಿಯಿಂದ ೩ ಕೋಟಿ ಜನತೆಗೆ ಅತ್ಯಂತ ಸಂತೋಷವಾಗಿದೆ. ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಟ್ಟಿದ್ದು ಎಲ್ಲರಿಗೂ ಅತ್ಯಂತ ಸಂತೋಷವನ್ನುಂಟುಮಾಡಿದೆ. ಇದೇ ರೀತಿ ನಮ್ಮ ರಾಜ್ಯದ ಮುಂದೆ ಅನೇಕ ಸಮಸ್ಯೆಗಳು ಇವೆ. ನೆಲ ಸಮಸ್ಯೆ ಮತ್ತು ಜಲ ಸಮಸ್ಯೆಗಳಿವೆ. ಆಸ್ತಿಮಿತಿ, ಭೂಮಿತಿ ಸಮಸ್ಯೆಗಳು ಇವೆ. ಈ ಎಲ್ಲಾ ಸಮಸ್ಯೆಗಳನ್ನೂ ಕರ್ನಾಟಕದ ಎಲ್ಲಾ ಜನತೆಗೂ ಸಮಾಧಾನ ವನ್ನುಂಟು ಮಾಡುವಂತಹ ರೀತಿಯಲ್ಲಿ ಬಹಳ ಉಪಯುಕ್ತವಾಗುವಂತಹ ರೀತಿಯಲ್ಲಿ ಶಾಂತಯುತವಾಗಿ ಬಗೆಹರಿಸಬೇಕು. ಭೂಮಿತಿಯಾಗಲೀ, ಆಸ್ತಿಮಿತಿಯಾಗಲೀ ಇವುಗಳ ವಿಚಾರದಲ್ಲಿ ಯಾರಿಗೂ ಅನ್ಯಾಯ ವಾಗದಂತಹ ರೀತಿಯಲ್ಲಿ ಯಾವುದೇ ಒಂದು ಉದ್ಯಮ ಮಾಡತಕ್ಕಂಥಾ ಜನಗಳಿಗೆ ದ್ರೋಹವಾಗದಂತಹ ರೀತಿಯಲ್ಲಿ ಬಗೆಹರಿಸಬೇಕು. ಕರ್ನಾಟಕ ರಾಜ್ಯ ಎಲ್ಲಾ ವಿಚಾರಗಳಲ್ಲೂ ಸರಿಯಾಗಿ ನಡೆದುಕೊಂಡು ಹೋಗತಕ್ಕಂಥಾ ಒಂದು ರಾಜ್ಯವಾಗಿ ಬಾಳಿ ಬೆಳಗಲಿ ಎಂದು ಹಾರೈಸಿ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ ನಮ್ಮ ನಾಯಕರಾದ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ರಾಜ್ಯದ ಹೆಸರನ್ನು ಬದಲಾಯಿಸಿ ಕರ್ನಾಟಕ ಎಂದು ಹೆಸರನ್ನು ಇಡಬೇಕೆಂದು ಹೇಳತಕ್ಕಂಥಾ ಈ ಒಂದು ನಿರ್ಣಯವನ್ನು ಏನು ಮಂಡಿಸಿದ್ದಾರೆ, ಇದು ಬಹಳ ಸಮಂಜಸವಾಗಿದೆ, ಮತ್ತು ಈ ನಿರ್ಣಯವನ್ನು ಮಂಡಿಸಿರತಕ್ಕ ಸನ್ನಿವೇಶ ಏನಿದೆ ಇದು ಬಹಳ ವೈಶಿಷ್ಟ್ಯ ಪೂರ್ಣವಾಗಿದೆ. ಈ ನಿರ್ಣಯದ ಮಹತ್ವವನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಿ ಅದಕ್ಕೆ ಸಾಕಷ್ಟು ಸಮರ್ಥನೆಯನ್ನು ಕೊಟ್ಟಿದ್ದಾರೆ. ಈ ಸಭೆಯ ಅನೇಕ ಮಾನ್ಯ ಸದಸ್ಯರು ಈ ನಿರ್ಣಯದ ಬಗ್ಗೆ ಮಾತನಾಡಿದ್ದಾರೆ. ನಾನೂ ಕೂಡ ಈ ಒಂದು ನಿರ್ಣಯವನ್ನು ಬಹಳ ಸಂತೋಷದಿಂದ ಸಮರ್ಥಿಸುತ್ತಾ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಆಯಾ ಭಾಷೆಯನ್ನು ಮಾತನಾಡತಕ್ಕ ಭಾಷಾವಾರು ಪ್ರಾಂತ್ಯಗಳನ್ನು ರಚನೆ ಮಾಡಬೇಕು ಎನ್ನುವ ಒಂದು ಅಭಿಪ್ರಾಯ / ರಾಷ್ಟ್ರದಲ್ಲಿ ಯಾವ ಕಾಲದಲ್ಲಿ ಮೂಡಿತೋ ಅಂದಿನಿಂದ ನಮ್ಮ ಕನ್ನಡ ಮಾತನಾಡತಕ್ಕ ಜನತೆಯಲ್ಲಿಯೂ ಕೂಡ ಕನ್ನಡ ನೆಲ ಒಂದಾಗಿ, ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕು ಎನ್ನುವ ಅಭಿಪ್ರಾಯ ಆಗಿನಿಂದ ಪ್ರಾರಂಭವಾಯಿತು. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಇದಕ್ಕೆ ನಮ್ಮ ಒಂದು ಸಂಸ್ಕೃತಿ ಸಾಹಿತ್ಯ ಮತ್ತು ರಾಜಕೀಯ ಹಿನ್ನಲೆ ಇವುಗಳೆಲ್ಲವುಗಳ ಸಮರ್ಥನೆ ದೊರೆತು ೧೯೫೬ನೇ ಇಸವಿಯಲ್ಲಿ ಇಡೀ ರಾಷ್ಟ್ರದಲ್ಲಿ ಆಯಾ ಭಾಷೆಗಳನ್ನು ಮಾತನಾಡತಕ್ಕ ಆಯಾ ಭಾಷೆಗಳ ಭಾಷಾವಾರು ಪ್ರಾಂತ ರಚನೆಯಾದಂತಹ ಕಾಲದಲ್ಲಿ ಕನ್ನಡ ಮಾತನಾಡತಕ್ಕ ಜನರೆಲ್ಲರೂ ಒಂದುಗೂಡಿ ಕನ್ನಡ ಪ್ರಾಂತಗಳೆಲ್ಲವೂ ಒಟ್ಟಾಗಿ ಸೇರಿ ವಿಶಾಲ ಮೈಸೂರು ರಾಜ್ಯ ರಚನೆಯಾಯಿತು. ಆ ಒಂದು ಸನ್ನಿವೇಶದಲ್ಲಿ ಅಂದರೆ ಕನ್ನಡವನ್ನು ಮಾತನಾಡತಕ್ಕವ ರೆಲ್ಲರೂ ಒಟ್ಟುಗೂಡಿದಾಗ ಈ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡತಕ್ಕದ್ದು ಅಷ್ಟು ಸುಲಭವಾಗಿರಲಿಲ್ಲ. ನಾವು ನೋಡಿದಂತೆ ಹಳೆಯ ಮೈಸೂರು ಮತ್ತು ಹೊಸ ಕನ್ನಡ ಪ್ರದೇಶಗಳಾದ ಹೈದರಾಬಾದ್ ಕರ್ನಾಟಕದ ಕೆಲವು ಜಿಲ್ಲೆಗಳು, ಬೊಂಬಾಯಿ ಕರ್ನಾಟಕದ ಕೆಲವು ಜಿಲ್ಲೆಗಳು, ಕೊಡಗು ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನೊಳಗೊಂಡತಹ ವಿಶಾಲ ಮೈಸೂರು ರಚನೆಯಾಗಬೇಕು ಎನ್ನುವ ಸಂದರ್ಭದಲ್ಲಿ ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರ ಸರ್ಕಾರ ಇತ್ತು. ಆ ಸನ್ನಿವೇಶದಲ್ಲಿ ಅಂದಿನ ಮೈಸೂರು ವಿಧಾನಸಭೆಯಲ್ಲಿ ನಡೆದಂತಹ ಚರ್ಚೆಯನ್ನು ನೋಡಿದರೆ, ಬಹುಶಃ ಶ್ರೀಮಾನ್ ಕೆ. ಹನುಮಂತಯ್ಯನವರು ಮತ್ತು ಶ್ರೀ ಎಸ್. ಚನ್ನಯ್ಯನವರು ಹಾಗೂ ಇತರ ಅನೇಕ ಜನ ಗಣ್ಯ ಮಹನೀಯರು ಒಂದು ದೊಡ್ಡ ಮನಸ್ಸು ಮಾಡಿ ತ್ಯಾಗ ಮಾಡದಿದ್ದರೆ ಕರ್ನಾಟಕಪ್ರಾಂತ್ಯ ರಚನೆಯಾಗುವುದು ಸ್ವಲ್ಪ ಕಷ್ಟವಾಗುತಿತ್ತು ಎಂದು ಕಾಣುತ್ತಗೆ. ಆದರೆ ಅವರೆಲ್ಲರೂ ದೊಡ್ಡ ಮನಸ್ಸು ಮಾಡಿ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರಿಂದ ಎಲ್ಲಾ ಕನ್ನಡ ಭಾಗಗಳೂ ಸೇರಿ ೧೯೫೬ ನೇ ಇಸವಿಯಲ್ಲಿ ವಿಶಾಲ ಮೈಸೂರು ರಾಜ್ಯ ಸ್ಥಾಪನೆಯಾಯಿತು. ಅ ಒಂದು ಸಂದರ್ಭದಲ್ಲಿಯೇ ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡಬೇಕೆಂದು ಆ ಬಗ್ಗೆ ಚರ್ಚೆ ನಡೆದು ಒಂದು ಇತ್ಯರ್ಥಕ್ಕೆ ಬಾರದೆ

(ಶ್ರೀ ಎಸ್. ಪುಟ್ಟಸ್ವಾಮಿ)

ಇದ್ದುದರಿಂದ ಈಗ ಸದ್ಯಕ್ಕೆ ಮೈಸೂರು ಎಂಬ ಹೆಸರೇ ಇರಲಿ ಎಂದು ಹೇಳಿದ್ದರಿಂದ ವಿಶಾಲ ಮೈಸೂರು ಎಂದು ಆಯಿತು. ಕನ್ನಡ ಭಾಗಗಳೆಲ್ಲವೂ ಒಟ್ಟಾಗಿ ಸೇರಿ ಕರ್ನಾಟಕ ಆಗಬೇಕು ಎಂದು ಅನೇಕ ಮಹನೀಯರು ಹೋರಾಟ ಮಾಡಿದ್ದಾರೆ. ಆದ್ದರಿಂದ ಅಂಥಾ ತ್ಯಾಗ ಮಾಡಿದ ಮಹನೀಯರನ್ನು ಈಗ ನಾವು ನೆನಸಿಕೊಂಡರೆ ತಪ್ಪಾಗಲಾರದು ಎಂದು ಭಾವಿಸುತ್ತೇನೆ. ಕನ್ನಡ ಮಾತನಾಡುವ ಜನರೆಲ್ಲರೂ ಒಂದುಗೂಡಿ ಕರ್ನಾಟಕ ಪ್ರಾಂತ್ಯ ಆಗ ಬೇಕು ಎಂದು ಸತತವಾಗಿ ಹೋರಾಟಮಾಡಿ ಅನೇಕ ವರ್ಷಗಳ ಕಾಲ ಮುಖ್ಯ ಮಂತ್ರಿಗಳಾಗಿ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸಿದ ಶ್ರೀಮಾನ್ ನಿಜಲಿಂಗಪ್ಪ ನವರನ್ನೂ ಮತ್ತು ಇದಕ್ಕಾಗಿ ತ್ಯಾಗವಾಡಿ ಸೇವೆ ಸಲ್ಲಿಸಿದ ಇನ್ನೂ ಅನೇಕ ಮಹನೀಯರನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಂಡರೆ ತಪ್ಪಾಗಲಾರದು. ೧೯೫೬ನೇ ಇಸವಿಯಲ್ಲಿಯೇ ಕನ್ನಡದ ಅನೇಕ ಭಾಗಗಳು ಸೇರಿದಂತಹ ಕರ್ನಾಟಕ ಪ್ರಾಂತ್ಯ ರಚನೆಯಾಗಿದ್ದರೂ ಸಹ ಆಂಧ್ರದಲ್ಲಿ ಅಚ್ಚ ಕನ್ನಡ ಮಾತನಾಡುವ ಭಾಗಗಳು ಹಾಗೆಯೇ ಉಳಿದಿವೆ. ತಮಿಳು ನಾಡಿನಲ್ಲಿ ಅಚ್ಚಕನ್ನಡ ಮಾತನಾಡುವ ಭಾಗಗಳು ಹಾಗೆಯೇ ಉಳಿದಿವೆ. ಮಹಾರಾಷ್ಟ್ರದಲ್ಲಿ ಅಚ್ಚಕನ್ನಡ ಮಾತಾನಾಡುವ ಭಾಗಗಳು ಹಾಗೆಯೇ ಉಳಿದಿವೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಆಯಾಯ ರಾಜ್ಯದ ಸಂಬಂಧಪಟ್ಟ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಕೇಂದ್ರ ಸರ್ಕಾರದ ಜೊತೆಯಲ್ಲಿ ಸಮಾಲೋಚನೆ ಮಾಡಿ ಕರ್ನಾಟಕ ರಾಜ್ಯಕ್ಕೆ ಸೇರಬೇಕಾದ ಅಚ್ಚ ಕನ್ನಡ ಭಾಗಗಳನ್ನು ಪಡೆಯುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳು ಈ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರನ್ನು ಇಡುವುದಕ್ಕೆ ಯಾವರೀತಿ ಕಾರಣಕರ್ತರಾಗಿದ್ದಾರೆಯೋ ಅದೇ ರೀತಿ ಇದನ್ನೂ ಕೂಡ ಅವರು ಮಾಡಬೇಕು ಎಂದೂ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಶ್ರೀಮಾನ್ ದೇವರಾಜಅರಸ್ ಅವರು ಮುಖ್ಯಮಂತ್ರಿ ಗಳಾಗಿಕರ್ನಾಟಕ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಮಾಡತಕ್ಕಂಥಾ ಸನ್ನಿವೇಶದಲ್ಲಿ ನಮ್ಮ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಟ್ಟು ಒಂದು ಕೀರ್ತಿಯನ್ನು ಪಡೆದಿದ್ದರಿಂದ ಅವರಿಗೆ ನಾನು ಅತ್ಯಂತ ಸಂತೋಷದಿಂದ ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕನ್ನಡ ಸಡೆನುಡಿ ಒಂದಾಗಿ ಕನ್ನಡ ನಾಡಿನ ಜನರೆಲ್ಲೂ ಒಂದಾಗಿ ಬಾಳಿ ಬದುಕಬೇಕು ಮತ್ತು ಅಭಿವೃದ್ಧಿಯನ್ನು ಹೊಂದಬೇಕು ಎಂದು ಯಾವ ಆಶೆಯನ್ನು ನಾವು ಇಟ್ಟುಕೊಂಡಿದ್ದೆವೋ ಅದಕ್ಕೆ ಇವೊತ್ತು ನಾಂದಿಯಾಗಿದೆ.

ಇಲ್ಲಿಯವರೆಗೆ ನಾವೆಲ್ಲರೂ ಹೆಚ್ಚಾಗಿ ಭಾವನಾತ್ಮಕ ಪ್ರಪಂಚದಲ್ಲಿ ಇದ್ದೆವು, ಇನ್ನು ಮುಂದೆ ಅದನ್ನು ಬಿಟ್ಟು ವಾಸ್ತವಿಕ ಪ್ರಪಂಚದಲ್ಲಿ ಕಾಲಿಟ್ಟು ನಮ್ಮ ಕನ್ನಡ ಜನತೆಯ ಸಮಸ್ಯೆ ಏನೆಂಬುದನ್ನು ಅರಿತು ಕೊಳ್ಳುವ ಸ್ಥಿತಿಯಲ್ಲಿ ನಾವಿದ್ದೇವೆ. ಆದ್ದರಿಂದ ಇಂದು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡತಕ್ಕ ದಿನ ಒಂದು ವಿಶಿಷ್ಟ ಪೂರ್ಣವಾದ ದಿನವೆಂದು ನಾವೆಲ್ಲರೂ ಭಾವಿಸಬೇಕಾಗಿದೆ. ನಾವು ಇನ್ನು ಹಳೆಯ ಮೈಸೂರು, ಹೊಸ ಮೈಸೂರು ಅಥವಾ ಹೈದರಾಬಾದ್ ಕರ್ನಾಟಕ, ಬಾಂಬೇ ಕರ್ನಾಟಕ ಅಥವಾ ಮದ್ರಾಸ್ ಕರ್ನಾಟಕ ಎಂದು ಹೇಳ ತಕ್ಕುದ್ದನ್ನು ಮರೆತು ನಾವೆಲ್ಲರೂ ಒಂದು ಕರ್ನಾಟಕ ರಾಜ್ಯದ ಮಕ್ಕಳು, ಒಂದೇ ಮನೆಯಲ್ಲಿ ವಾಸಮಾಡತಕ್ಕವರು ಮತ್ತು ರಾಜ್ಯಕ್ಕೆ ಬಂದ ಸಮಸ್ಯೆ ಎಲ್ಲರಿಗೂ ಬಂದ ಸಮಸ್ಯೆ ಎಂದು ತಿಳಿದುಕೊಳ್ಳ ಬೇಕಾದ ದ ಮುಖ್ಯವಾದ ವಿಷಯ. ಈ ರೀತಿ ನಾವೆಲ್ಲರೂ ಒಮ್ಮನಸ್ಸಿನಿಂದ, ಒಗ್ಗಟ್ಟಿನಲ್ಲಿದ್ದುಕೊಂಡು ರಾಜ್ಯಕ್ಕೆ ಬರತಕ್ಕಂತಹ ಸಮಸ್ಯೆಗಳನ್ನು ನಿವಾರಿಸುವಲ್ಲಿ ಎಲ್ಲರೂ ಒಂದೇ ಮನಸ್ಸಿನಿಂದ ಹೋರಾಡಿ ನಮ್ಮ ರಾಜ್ಯದ ಏಳಿಗೆಗಾಗಿ, ರಾಜ್ಯದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗಾಗಿ ಒಮ್ಮತದಿಂದ ದುಡಿದು ಕನ್ನಡ ನಾಡಿನ ಅಭಿವೃದ್ಧಿಯನ್ನು ಸಾಧಿಸೋಣ ಎಂದು ಹೇಳಿ ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎ. ದೊರೆಸ್ವಾಮಿ ನಾಯುಡು (ಬೇತಮಂಗಲ).—ಅಧ್ಯಕ್ಷರೆ, ಈ ನಿರ್ಣಯವನ್ನು ಪೂರ್ತಿಯಾಗಿ ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳುವುದು ಸೂಕ್ತವೆಂದು ತಿಳಿದಿದ್ದೇನೆ. ಮೊಟ್ಟ ಮೊದಲನೆಯದಾಗಿ ಹರಿದು ಹಂಚಿ ಹೋಗಿದ್ದ ನಮ್ಮ ಕನ್ನಡ ನಾಡನ್ನು ಒಂದಾಗಿ ಸೇರಿಸಿ ಕರ್ನಾಟಕವೆಂದು ಹೆಸರಿಡಲು ಮೊದಲು ಹೊರಟಿದ್ದ ಕೆಂಗಲ್ ಹನುಮಂತಯ್ಯನವರಿಗೆ ಹಾಗೂ ಈ ಸಭೆ ಯಲ್ಲಿ ಇದನ್ನು ಒಮ್ಮತದಿಂದ ಒಪ್ಪಿಕೊಂಡ ಸದಸ್ಯರಿಗೆ ಮತ್ತು ಅಧ್ಯಕ್ಷರಿಗೆ ವಂದಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ದೇಶವು ಮುಂದುವರಿಯಲು ನಾವು ಇಟ್ಟಂತಹ ಮೊದಲನೆಯ ಶುಭ ಸೂಚನೆಯ ಹೆಜ್ಜೆ ಎಂದು ಹೇಳುತ್ತೇನೆ. ಇದಕ್ಕೆ ಮೊದಲು ರಾಜ್ಯದ ಹೆಸರನ್ನು ಬದಲಾಯಿಸುವ ದಲ್ಲಿ ಅನೇಕ ಭಿನ್ನಾಭಿಪ್ರಾಯಗಳು ಬಂದಿದ್ದರೂ ಸಹ ಇಂದು, ಅದು ನೆರವೇರಿದೆ. ಮೊದಲು ನಾನು ಸಹ ಹೆಸರಿನ ಬದಲಾವಣೆಗೆ ವಿರೋಧಿಸುತ್ತಿದ್ದೆ. ಆದರೆ ನಮ್ಮ ಮುಖ್ಯ ಮಂತ್ರಿಯವರು ಕಾಲ ಚಕ್ರ ತಿರುಗಿ

ದಂತೆ ಜನತೆಯ ಅಭಿಪ್ರಾಯದ ಪ್ರಕಾರಣ ದನ್ನು ಮಂಡಿಸಬೇಕಾಯಿತು ಎಂದು ಏನು ತಿಳಿಸಿದರು, ಅದನ್ನು ವಿಚಾರ ಒಪ್ಪಬೇಕಾಗಿದೆ. ಹಾಗೆ ಜನತೆಯ ಅಭಿಪ್ರಾಯಕ್ಕೆ ಇವತ್ತು ನಾವು ಮನ್ನಣೆ ಕೊಡಬೇಕಾಗಿದೆ. ಅದೇ ರೀತಿಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ನಮ್ಮ ರಾಜ್ಯಕ್ಕೆ ಕರ್ನಾಟಕ ಎಂದು ಹೆಸರಿಡಲು ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿ ಇದರ ಮೇಲೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ವಿಜಯ ದೇಸಾಯಿ (ಚಿತಾಪುರ).—ಮಾನ್ಯ ಅಧ್ಯಕ್ಷರೆ, ನಮ್ಮ ಮುಂದಿರುವ ನಿರ್ಣಯಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕರ್ನಾಟಕದ ಇತಿಹಾಸದಲ್ಲಿ ನಿನ್ನೆಯ ದಿನ ಒಂದು ಮಹಾ ದಿನವೆಂದು ಹೇಳಬಹುದು. ೧೯೫೭ ರಿಂದ ೧೯೭೨ ವರೆಗೆ ಈ ಮಾನ್ಯ ಸಭೆಯ ಸದಸ್ಯರಾದಂತಹ ದೊಡ್ಡ ಮೇಟಿಯವರು ನಮ್ಮ ಕನ್ನಡ ನಾಡಿಗೆ ಕರ್ನಾಟಕ ವೆಂದು ಹೆಸರಿಡಬೇಕೆಂದು ಹೋರಾಟ ಮಾಡಿದ್ದು ಅಷ್ಟಿಷ್ಟಲ್ಲ. ಇವತ್ತು ಈ ನಾಮಕರಣದಿಂದ ನಮಗೆ ಎಷ್ಟು ಸಂತೋಷವಾಗಿದೆಯೋ ಅದರ ಇಮ್ಮಡಿಯಷ್ಟು ಸಂತೋಷ ದಿವಂಗತ ದೊಡ್ಡ ಮೇಟಿಯವರ ಆತ್ಮ ಎಲ್ಲೇ ಇದ್ದರೂ ಅವರಿಗೆ ಆಗುತ್ತದೆಂದು ನಾನು ಹೇಳಬಯಸುತ್ತೇನೆ. ಹಾಗೆಯೇ ಮಾನ್ಯ ಕೋಣಂದೂರು ಲಿಂಗಪ್ಪನವರು ತಮ್ಮ ಭಾಷಣದಲ್ಲಿ ಒಂದು ಮುಖ್ಯವಾದ ಮಾತನ್ನು ಹೇಳಿದರು. ಅದರ ಪ್ರಕಾರವಾಗಿ ನಮ್ಮ ಕನ್ನಡ ರಾಜ್ಯ ಅಭಿವೃದ್ಧಿಯಾಗಬೇಕಾದರೆ, ಮತ್ತು ನಮ್ಮ ಕರ್ನಾಟಕದ ಏಳಿಗೆಯಾಗ ಬೇಕಾದರೆ ಪ್ರತಿಯೊಬ್ಬ ಕನ್ನಡಿಗನು ಸಹ ಅಹೋರಾತ್ರಿ ದುಡಿಯಬೇಕಾಗಿದೆ. ಮಾನ್ಯ ಲಿಂಗಪ್ಪ ನವರು ಸಹ ಅದೇ ರೀತಿ ಮಾಡುತ್ತಾರೆಂದು ನಾನು ತಿಳಿಯುತ್ತೇನೆ. ಇನ್ನೊಬ್ಬ ಮಾನ್ಯ ಸದಸ್ಯರು ಮಾತನಾಡುತ್ತಾ ಬಿ. ಎಂ. ಶ್ರೀಕಂಠಯ್ಯನವರು ಮೈಸೂರಿಗೆ ಕನ್ನಡ ನಾಡು ಎಂದು ಹೆಸರಿಡ ಬೇಕೆಂದು ಹೇಳಿದ್ದರು ಎಂದು ಉಲ್ಲೇಖ ಮಾಡಿದ್ದಾರೆ. ನಾನಾದರೂ ಈ ಸಮಯದಲ್ಲಿ ಇನ್ನೊಂದು ಕವಿಯ ಮಾತನ್ನು ಹೇಳುತ್ತೇನೆ. ಕವಿ ಕುವೆಂಪುರವರು ಕರ್ನಾಟಕ ಎಂಬುದರ ಬಗ್ಗೆ ಉಲ್ಲೇಖ ಮಾಡಿ ದ್ದಾರೆ. ಕರ್ನಾಟಕ ರಾಜ್ಯ ಯಾವ ರೀತಿ ಇರಬೇಕು ಮತ್ತು ಕನ್ನಡಿಗರು ಯಾವ ರೀತಿ ಇರಬೇಕೆಂಬ ಬಗ್ಗೆ ಅವರು ಹೇಳಿದ ಮಾತು ಈ ರೀತಿ ಇದೆ : ನಾವು ಎಲ್ಲೇ ಓಡಾಡಲಿ, ನಾವು ಕರ್ನಾಟಕದವರು ಎಂದು ನೆನಪಿರಬೇಕು: ಏಂಡೀಸ್ ಪರ್ವತದಲ್ಲೇ ಇರಲಿ, ನಾನು ಸಹ್ಯಾದ್ರಿ ಪರ್ವತದಲ್ಲಿದ್ದೇನೆಂದು ನೆನಸ ಬೇಕು, ಮಿಸಿಸಿಪಿ ನದಿಯ ನೀರನ್ನೇ ಕುಡಿಯುತ್ತಿರಲಿ, ನಾನು ಕಾವೇರಿಯ ನೀರನ್ನು ಕುಡಿಯುತ್ತಿದ್ದೇನೆ ಎಂದು ನೆನಸಬೇಕೆಂದು ಅವರು ಹೇಳಿದ್ದಾರೆ. ನವೆಂಬರ್ ೧೯೫೬ರ ಹಿಂದೆ ಮೈಸೂರಿನಲ್ಲಿಯೂ ಎರಡು ಗುಂಪುಗಳು ಇದ್ದವು. ಅದೇ ಪ್ರಕಾರವಾಗಿ ಹೈದರಾಬಾದ್ ಏರಿಯಾದಲ್ಲಿಯೂ ಎರಡು ಗುಂಪುಗಳು ಇದ್ದವು. ಹೈದರಾಬಾದ್ ಒಂದೇ ಇರಬೇಕೇ ಅಥವಾ ಮೂರು ಭಾಗಗಳಾಗಿ ಮಾಡಿ ಒಂದು ಭಾಗ ಮೈಸೂರಿಗೆ ಒಂದು ಭಾಗ ಮಹಾರಾಷ್ಟ್ರಕ್ಕೆ, ಮತ್ತೊಂದು ಭಾಗ ಆಂಧ್ರ ಪ್ರದೇಶಕ್ಕೆ ಸೇರಬೇಕು ಎನ್ನುತಕ್ಕಂತಹ ಅಭಿಪ್ರಾಯಗಳು ಇದ್ದವು. ಆಗಿನ ಕಾಲದಲ್ಲಿ ಸರ್ವಶ್ರೀ ಬಿ. ರಾಮಕೃಷ್ಣರಾವ್, ಜನಾರ್ಧನ ದೇಸಾಯಿ, ರಮಾನಂದ ತೀರ್ಥ—ಮುಂತಾದ ಮಹನೀಯರ ಹೋರಾಟದಿಂದ ೧೯೫೬ನೇ ಇಸವಿಯಲ್ಲಿ ನಮ್ಮ ರಾಯಚೂರು, ಬಿದರ್, ಗುಲ್ಬರ್ಗ-ಇವೆಲ್ಲ ಮೈಸೂರಿಗೆ ಸೇರಿಕೊಂಡವು. ಈ ರೀತಿ ಹರಿದು ಹಂಚಿ ಹೋಗಿದ್ದ ಕನ್ನಡ ಭಾಗಗಳು ಮೈಸೂರಿಗೆ ಸೇರಿಕೊಂಡು ೧೬ ವರ್ಷಗಳಾದರೂ ಈ ರಾಜ್ಯವನ್ನು ಕರ್ನಾಟಕವೆಂದು ಕರೆಯುವ ಭಾಗ್ಯ ಇವತ್ತಿನವರೆಗೂ ನಮಗೆ ಸಿಗಲಿಲ್ಲ. ಈವತ್ತು ಹೈದರಾಬಾದ್ ಕರ್ನಾಟಕದವರಾಗಲಿ, ಮದ್ರಾಸ್ ಕರ್ನಾಟಕದವರಾಗಲಿ, ಬಾಂಬೆ ಕರ್ನಾಟಕದವರಾಗಲಿ ಅಥವಾ ಕೂರ್ಗ್ ಕರ್ನಾಟಕದವರಾಗಲಿ—ಎಲ್ಲರೂ ಸೇರಿ ಇಂದು ಒಂದೇ ಕರ್ನಾಟಕದವರೆಂದು ಕರೆಯು ವುದಕ್ಕೆ ಯಾವ ಅತಂಕವೂ ಇಲ್ಲ. ಹೀಗೆ ಕರೆಯುವುದಕ್ಕೆ ಈ ಒಂದು ನಿರ್ಣಯವನ್ನು ನಮ್ಮ ಮುಖ್ಯ ಮಂತ್ರಿಯವರು ತಂದಿರುವುದನ್ನು ನೋಡಿದರೆ. ಇದಕ್ಕೆ ನಮ್ಮ ಮೈಸೂರಿನವರ ವಿಶಾಲ ಮನೋಭಾವ ನೆಯೇ ಕಾರಣವೆಂದು ಹೇಳುತ್ತೇನೆ. ಹಿಂದೆ ಮಾನ್ಯ ಜತ್ತಿಯವರ ಕಾಲದಲ್ಲಾಗಲಿ, ಕಂಠಿಯವರ ಕಾಲ ದಲ್ಲಾಗಲಿ, ಅಥವಾ ವೀರೇಂದ್ರ ಪಾಟೀಲರ ಕಾಲದಲ್ಲಾಗಲಿ ಇಂತಹ ನಿರ್ಣಯ ನಮ್ಮ ಮುಂದೆ ಸರ್ಕಾರದ ಪತಿಯಿಂದ ಬಂದಿರಲಿಲ್ಲ. ಆದರೆ ಮಾನ್ಯ ದೇವರಾಜ ಅರಸರ ಕಾಲದಲ್ಲಿ ಇದು ಬಂದದನ್ನು ನೋಡಿದರೆ ಇದು ನಿಜವಾಗಿಯೂ ಅಭಿಮಾನ ಮತ್ತು ಹೆಮ್ಮೆ ಪಡತಕ್ಕ ಸಂಗತಿ ಎಂದು ಹೇಳುತ್ತೇನೆ. ಅದಕ್ಕಾಗಿ ಅವರಿಗೆ ಮತ್ತು ಅವರ ಮಂತ್ರಿಮಂಡಲಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ಇನ್ನೊಮ್ಮೆ ಇದಕ್ಕೆ ನನ್ನ ಬೆಂಬಲವನ್ನು ನೀಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಎಂ ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದ ಹೆಸರನ್ನು ಕರ್ನಾಟಕ ವೆಂದು ನಾಮಕರಣ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರು ನಿನ್ನೆಯ ದಿವಸ ಒಂದು ನಿರ್ಣಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಒಂದು ಹೆಸರು ಬದಲಾವಣೆಯ ನಿರ್ಣಯವನ್ನು ವಿಶಾ ಕರ್ನಾಟಕವನ್ನು ಮಾಡಿದಂತಹ ಮತ್ತು ಅದಕ್ಕೆ ಹೋರಾಟ ಮಾಡಿದಂತಹ ಪುಣ್ಯವಂತರ ಕಾಲದಲ್ಲಿ ಇಟ್ಟಿದ್ದರೆ ಚೆನ್ನಾಗಿತ್ತು. ಏಕೆಂದರೆ ಇದಕೋಸ್ಕರ ಹೋರಾಟ ಮಾಡಿದಂತಹ ಕೆ. ಹನುಮಂತಯ್ಯನವರನ್ನು ವಿಧಾನ ಸೌಧದ ಶಿಲ್ಪಿ ಅಂದರೂ ತಪ್ಪಾಗಲಾರದು. ಅಂತಹ ಮಹನೀಯರು ಇದರ ಬಗ್ಗೆ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿದ್ದರು. ಆ ಸಮಯದಲ್ಲಿ ಕೆಲವು ಸ್ವಾರ್ಥಿಗಳು ಮತ್ತು ಪಟ್ಟಭದ್ರ ಹಿತಾಶಕ್ತಿಗಳು ಇದಕ್ಕೆ ವಿರೋಧವಾಗಿದ್ದುದರಿಂದ ಅದನ್ನು ಕಾರ್ಯಗತ ಮಾಡಲಾಗಲಿಲ್ಲ. ಅದೇ ರೀತಿ ಮಾನ್ಯ ಶ್ರೀ ನಿಜಲಿಂಗಪ್ಪನವರು ಸಹಿತ ಈ ಒಂದು ವಿಶಾಲ ಕರ್ನಾಟಕ ಸ್ಥಾಪನೆಯಾಗಬೇಕು, ಮತ್ತು ಕನ್ನಡವನ್ನು ಆಡತಕ್ಕ ಜನರನ್ನು ಒಂದುಗೂಡಿಸಬೇಕೆಂದು ಸತತವಾಗಿ ಹೋರಾಡಿದವರ ಪೈಕಿ ಒಬ್ಬರು ಅದಕ್ಕೆ ಕಾರಣ ಏನೇ ಇರಲ್ಲಿ, ಇಂತಹ ಡೊಡ್ಡ ದೊಡ್ಡ ನಾಯಕರ ಕಾಲದಲ್ಲಿ ಇಂತಹ ಒಂದು ಪುಣ್ಯದ ಕೆಲಸ ಮಾಡತಕ್ಕಂತಹ ಅವಕಾಶ ಬಹುಶಃ ಒದಗದೆ, ಇಂದು ಈ ಸಭೆಯ ಪಾಲಿಗೆ ಬಿದ್ದದ್ದು ಹಿಂದಿನ ನಾಯಕರ ತಪ್ಪಿನಿಂದ ಅಲ್ಲ. ಆಗ ಎಲ್ಲರೂ ಮನಸ್ಸು ಮಾಡಿದ್ದರೆ ಇದನ್ನು ಮಾಡಬಹುದಾಗಿತ್ತು. ಆದರೆ ಒಂದು ಮಾತನ್ನು ನಾವು ಜ್ಞಾಪಕದಲ್ಲಿಡಬೇಕು, ಏನೆಂದರೆ, ಯಾವಾಗಲೂ ತಂದೆ ತಾಯಿಯಂತೆ ಮಕ್ಕಳು ಹೇಗೆ ಇರುತ್ತಾರೆಯೋ, ಹಾಗೇಯೇ ಹಿಂದಿನ ಪುಣ್ಯ ಪುರುಷರು ಮತ್ತು ಗಣ್ಯ ವ್ಯಕ್ತಿಗಳು ಮನ ಪೂರ್ವಕವಾಗಿ ಹೋರಾಟಮಾಡಿ ಪ್ರಯತ್ನಮಾಡಿದುದರಿಂದ ಇಂದು ಈ ನಿರ್ಣಯ ಬರುವುದಕ್ಕೆ ಅನುಕೂಲವಾಯಿತು. ಆದ್ದರಿಂದ ಈ ಒಂದು ಸಮಯದಲ್ಲಿ ಶ್ರೀಯುತರುಗಳಾದ ಕೆಂಗಲ್ ಹನುಮಂತಯ್ಯನವರನ್ನು, ನಿಜಲಿಂಗಪ್ಪನವರನ್ನು ದಿವಂಗತ ದೊಡ್ಡಮೇಟಿಯವರನ್ನು ಮತ್ತು ದಿವಂಗತ ಗೋಪಾಲ ಗೌಡರನ್ನು ನಾವು ಜ್ಞಾಪಿಸಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯವೆಂದು ಹೇಳುತ್ತೇನೆ. ೧೬ ವರ್ಷದ ಹಿಂದೆಯೇ 'ಕರ್ನಾಟಕ' ಎಂಬ ಹೆಸರಿಡತಕ್ಕಂತಹ ಶಕ್ತಿ ಈ ನಮ್ಮ ಸಭೆಯ ಸದಸ್ಯರಿಗೆ ಇರಲಿಲ್ಲವೇ ಎಂದು ಯಾರಾದರೂ ಹೇಳಿದರೆ ಅದರಿಂದ ಅವರಿಗೆ ಇರತಕ್ಕಂತಹ ಸಂಕುಚಿತ ಭಾವನೆಯು ವ್ಯಕ್ತವಾಗುತ್ತದೆಯೋ ವಿನಹ ಅದರಲ್ಲಿ ದೊಡ್ಡಸ್ತಿಕೆ ಏನೂ ಕಂಡು ಬರುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಯವರು ಶ್ರೀರಂಗಪಟ್ಟಣದಲ್ಲಿ ಹೇಗೆ ಮಾತನಾಡಿದ್ದಾರೆ ಎಂಬುದನ್ನು ಹೇಳಿದ್ದಾರೆ. ಕಾಲ ಚಕ್ರ ಉರುಳಿದಂತೆ ಮನಸ್ಸು ಬದಲಾವಣೆಯಾಗಿದೆ ಎಂದು ಸಹ ಅವರು ಹೇಳಿದರು. ಅವರ ಪಕ್ಷದಲ್ಲಿಯೂ ಇದರ ಬಗ್ಗೆ ಭಿನ್ನಾಭಿಪ್ರಾಯ ಇದ್ದುದನ್ನು ನಾನು ತಿಳಿದುಕೊಂಡಿದ್ದೇನೆ. ಏನೇ ಆಗಲಿ ಬಹುಜನರ ಮಾತಿಗೆ ಬೆಲೆ ಕೊಡಬೇಕಾದದು ಪ್ರಜಾಪ್ರಭುತ್ವದ ಆದ್ಯ ಕರ್ತವ್ಯ, ಕೇವಲ ಹೆಸರಿಟ್ಟ ಮಾತ್ರಕ್ಕೆ ನಾವು ಜನತೆಗೆ ಒಳ್ಳೆಯ ಆಡಳಿತವನ್ನು ಕೊಟ್ಟ ಹಾಗೆ ಆಗುವುದಿಲ್ಲ. ಮತ್ತು ಇದರಿಂದ ನಾವು ಮಾಡಬೇಕಾದಂತಹ ಕರ್ತವ್ಯವೆಲ್ಲಾ ಆಗಲಿಲ್ಲ.

5.00 P.M.

ಎಷ್ಟೇ ಕಷ್ಟ ಪರಿಸ್ಥಿತಿ ಇದ್ದರೂ ಬಹಳ ಜಾಣತನದಿಂದ ಕರ್ನಾಟಕವೆಂಬ ಹೆಸರನ್ನು ಇಟ್ಟಿದ್ದಾರೆಂದು ಹೇಳತಕ್ಕ ಸನ್ನಿವೇಶವಿಲ್ಲ. ಜನತೆ ಬಹಳವಾಗಿ ಮುಂದುವರಿದಿದ್ದಾರೆ. ಜನತೆಯ ಮನಸ್ಸನ್ನು, ಇಂಗಿತವನ್ನು ಅರಿತು ಈ ಸದನದಲ್ಲಿರತಕ್ಕ ಪ್ರತಿಯೊಂದು ರಾಜಕೀಯ ಪಕ್ಷಗಳು ಜನತೆಯ ಮಾತಿಗೆ ಮನ್ನಣೆ ಕೊಟ್ಟು ಕರ್ನಾಟಕವೆಂಬ ಹೆಸರನ್ನು ಇಡಬೇಕೆಂದು ಒತ್ತಾಯ ಮಾಡಿದ್ದಾರೆ. ಇದರಲ್ಲಿ ಯಾರದೂ ದೊಡ್ಡಸ್ತಿಕೆ ಇಲ್ಲ. ಜನತೆಯ ಮಾತನ್ನು ನಡೆಸುವುದು ನಮ್ಮ ಕರ್ತವ್ಯ. ಈ ಒಂದು ಕರ್ನಾಟಕದ ಸ್ಥಾಪನೆ ಮತ್ತು ಒಂದು ಕರ್ನಾಟಕದ ಹೆಸರನ್ನು ಇಡಬೇಕಾದರೆ, ಬಹುಮುಖ್ಯವಾಗಿ ಯಾವುದೇ ದೇಶದ ಹೆಸರನ್ನು ಇಡಬೇಕಾದರೆ, ಅಲ್ಲಿರತಕ್ಕ ಸಾಹಿತಿಗಳ, ಕವಿಗಳ ವರ್ಣನೆ ಬಹು ಮುಖ್ಯವಾದುದು ಯಾವುದೇ ದೇಶದ ಹೆಸರನ್ನು ಇಡುವಾಗ ಆ ದೇಶದ ಕವಿಗಳು ಹಾಗೂ ಸಾಹಿತಿಗಳು ಬಹಳ ಮಹತ್ತರವಾದ ಪಾತ್ರವನ್ನು ವಹಿಸಿರುತ್ತಾರೆ ಅಂತಹ ಅನೇಕ ಜನ ಕವಿಗಳು, ಸಾಹಿತಿಗಳು ವರ್ಣನೆ ಮಾಡಿರುವಂತಹ ಈ 'ಕರ್ನಾಟಕದ' ಹೆಸರನ್ನು ನಮ್ಮ ರಾಜ್ಯಕ್ಕೆ ಈಗ ಹೊಂದುವಂತಾದುದು ನಮ್ಮೆಲ್ಲರ ಭಾಗ್ಯ. ಈ ಕರ್ನಾಟಕ ರಾಜ್ಯ ಎಷ್ಟರಮಟ್ಟಿಗೆ ಸುಂದರವಾಗಿ, ಸಾಮರಸ್ಯದಿಂದ ಕೂಡಿಕೊಂಡು ಸಮಾಜವಾದದ ದಾರಿಯಲ್ಲಿ ಹೋಗಬೇಕೆಂಬುದನ್ನು ಆಡಳಿತ ಪಕ್ಷ ಚೆನ್ನಾಗಿ ತಿಳಿದಿರಬೇಕು. ೮೦೦ ವರ್ಷಗಳ ಹಿಂದೆ ಬಸವಣ್ಣನವರು ಹಾಕಿಕೊಟ್ಟಂಥ ಸಮಾಜವಾದದ ಆಧಾರದ ಮೇಲೆ ಜಾತ್ಯಾತೀತ ರಾಷ್ಟ್ರವನ್ನು ಕಟ್ಟಬೇಕು, ಜನತೆಯನ್ನು ಸರ್ವತೋಮುಖವಾದ ಏಳಿಗೆಗೆ ಅನುಗುಣವಾದ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಹಾಕಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಈಗ ಆಡಳಿತ ಸೂತ್ರವನ್ನು ವಹಿಸಿಕೊಂಡಿರುವವರ ಒಂದು ತರಹ ಅಸಮಾಧಾನ ವ್ಯಕ್ತಪಡುತ್ತಾ ಇದೆ. ಕಾರಣವೇನೆಂದರೆ ಯಾರು ಜಾತ್ಯಾತೀತ ರಾಷ್ಟ್ರವನ್ನು ನಿರ್ಮಾಣಮಾಡುತ್ತೇವೆಂದು ಹೇಳಿ ಹೊರಟರೋ ಆ ಜನ ಇವತ್ತು ಅಧಿಕಾರ ಸ್ಥಾನದಲ್ಲಿದ್ದುಕೊಂಡು

ಅವರೇ ಜಾತಿಯ ಹೆಸರಿನಲ್ಲಿ ಪ್ರತಿನಿತ್ಯ ಏನೇನೋ ಕೆಲಸಕಾರ್ಯಗಳನ್ನು ಮಾಡುತ್ತಿದ್ದಾರೆ. ಅವರು ಜಾಗ್ರತೆಯಾಗಿ ಎಚ್ಚೆತ್ತುಬೇಕು. ಅಧಿಕಾರ ಸ್ಥಾನಗಳಲ್ಲಿ ಇದ್ದುಕೊಂಡು ಆ ರೀತಿ ಮಾಡುವುದು ಸರಿಯಲ್ಲ. ಯಾರು ದೇವರ ಹೆಸರಿನ ಮೇಲೆ ಇಲ್ಲಿ ಪ್ರತಿಜ್ಞೆ ಮಾಡಿದ್ದಾರೊ, ಈ ದೇಶದ ಅಭ್ಯುದಯಕ್ಕೋಸ್ಕರ ನಾವು ಇಲ್ಲಿಗೆ ಬಂದಿದ್ದೇವೆಂದು ಹೇಳುವಂತಹ ಜನ ತಾವು ನ್ಯಾಯವಾಗಿ ಸುಯಮದಿಂದ ವರ್ತನೆ ಮಾಡಬೇಕು. ಇದು ತಮ್ಮ ಆದ್ಯ ಕರ್ತವ್ಯ. ಇದರಲ್ಲಿ ತಮ್ಮ ಹೆಚ್ಚಿನ ಜವಾಬ್ದಾರಿ ಇದೆ. ಇಡೀ ಭಾರತದೇಶವಲ್ಲಿ 'ಕರ್ನಾಟಕ' ಎಂದು ಈ ದೇಶದ ಹೆಸರು ಬದಲಾವಣೆಯಾಗುವಾಗ ಸುಮ್ಮನೆ ಬೂಟಾಟಿಕೆ ಮೇಲೆ ಹೆಸರಿನ ಬದಲಾವಣೆ ಮಾಡಿದರೆ ಇದು ಒಳ್ಳೆಯ ಕರ್ನಾಟಕವಾಗುತ್ತದೆಯೇ ? ಕರ್ನಾಟಕದಲ್ಲಿ ಇರತಕ್ಕ ಜನಗಳು ಸುವ್ಯವಸ್ಥಿತ ರೀತಿಯಲ್ಲಿ ನ್ಯಾಯವಾಗಿ, ಧರ್ಮವಾದ ರೀತಿಯಲ್ಲಿ ನಡೆಯಬೇಕು. ರಾಜ್ಯಾಡಳಿತ ಮಾಡುವ ಜನರೂ ಸಹ ನ್ಯಾಯವಾದ ರೀತಿಯಲ್ಲಿ ನಡೆಯಬೇಕು. ಇವತ್ತಿನ ದಿವಸ ಆಡಳಿತ ಸೂತ್ರವನ್ನು ವಹಿಸಿರುವವರ ಮೇಲೆ ಆ ಜವಾಬ್ದಾರಿ ಇದೆಯೆಂದು ನಾನು ಭಾವನೆ ಮಾಡಿದ್ದೇನೆ. ಈಗ ಮಂಡಿಸಿರುವ 'ಕರ್ನಾಟಕ' ಎಂಬ ಹೆಸರನ್ನು ಇಡುವಂತಹ ನಿರ್ಣಯವನ್ನು ನಾವೆಲ್ಲರೂ ಸಂತೃಪ್ತಿಯಿಂದ ನಮ್ಮ ನಾಯಕರ ಜೊತೆಯಲ್ಲಿ ಒಪ್ಪುತ್ತಿದ್ದರೂ ಹಿಂದೆ ನಿರ್ಣಯ ಬಂದಾಗ ಆಗಲೇ ಒಪ್ಪಿದ್ದರೆ, ಇದು ಆಗಲೇ ಆಗುತ್ತಿತ್ತು. ಹಿಂದೆ ಆಗಲಿಲ್ಲ. ಕಾಲಚಕ್ರ ತಿರುಗುತ್ತಿದೆ. ಈಗ ನಮ್ಮ ದೇಶಕ್ಕೆ ಕರ್ನಾಟಕವೆಂದು ಹೆಸರನ್ನು ಇಡುವಂತಹ ಕಾರ್ಯ ಆಗುತ್ತದೆ. ಇದರಿಂದಾಗಿ ಇಡೀ ಕರ್ನಾಟಕ ದೇಶದ ಜನ ಒಂದು ಶಾಂತಿ, ಸಮಾಧಾನದಿಂದ ನಲಿದಾಡುವಂತಹ ಒಂದು ಅವಕಾಶವನ್ನು ನಮ್ಮ ಸರ್ಕಾರದವರು ಮಾಡಿ ಕೊಟ್ಟಿದ್ದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕೊನೆಯದಾಗಿ ಕರ್ನಾಟಕ ದೇಶವಾದ ಇಡೀ ಈ ನಮ್ಮ ಸಂಸ್ಥಾನದಲ್ಲಿ ಸರ್ಕಾರದವರು ಯೋಗ್ಯವಾದ ಆಡಳಿತವನ್ನು ನಿರ್ವಹಣೆ ಮಾಡಲಿ ಎಂಬುದಾಗಿ ಪ್ರಾರ್ಥಿಸುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ಈ ಒಂದು ಕರ್ನಾಟಕದ ಹೆಸರನ್ನು ಇಡುವ ನಿರ್ಣಯವನ್ನು ಸಮರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪ್ರಭಾಕರ್ (ವರ್ತೂರು) —ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದಲೂ ಕೂಡ ಈ ಸಭೆಯಲ್ಲಿ ವಿಪುಲವಾಗಿ, ದೀರ್ಘವಾಗಿ ಚರ್ಚೆ ನಡೆಯುತ್ತಿದೆ. ನಮ್ಮ ದೇಶದ ಹೆಸರನ್ನು ಕರ್ನಾಟಕವೆಂದು ಕರೆದುದರ ಹಿರಿಮೆಯನ್ನು ಕುರಿತು ಇಲ್ಲಿ ಅನೇಕ ಶ್ರವಣಗಳು ಆಗುತ್ತಿವೆ. ಹೆಸರಿನಲ್ಲಿ ಏನಿದೆಯೆನ್ನುವ ಜನ ಸುಲಭವಾಗಿ ಮಾತನಾಡತಕ್ಕ ಪ್ರವೃತ್ತಿಯುಳ್ಳವರೆಂದು ನಾನು ಭಾವಿಸುತ್ತೇನೆ. ಈ ದೇಶದ ಹಿರಿಮೆ, ಸಂಸ್ಕೃತಿ, ಜನಗಳ ಒಂದು ಛಲ, ಧರ್ಮಭಾವನೆಗಳು, ಸಹೋದರಭಾವ, ಸಂಸ್ಕೃತಿ ಇವುಗಳ ಆಧಾರದ ಮೇಲೆ ದೇಶಕ್ಕೆ ಇಟ್ಟುಕೊಂಡಿರತಕ್ಕ ಒಂದು ಹೆಸರು ಅರ್ಥಗರ್ಭಿತವಾಗಿದೆಯೆಂದು ಹೇಳಿದರೆ ಅದು ಸಾಮಾನ್ಯವಾದ ಮಾತಲ್ಲ. ನಮ್ಮ ದೇಶ ಸ್ವಾತಂತ್ರವಾದ ಮೇಲೆ ಭಾಷಾವಾರು ಪ್ರಾಂತಗಳಾಗಿ ದೇಶದ ವಿಂಗಡಣೆ ಆಯಿತು. ಆ ಸಂದರ್ಭದಲ್ಲಿ ವಿಪುಲವಾದ ಚರ್ಚೆ, ಹೋರಾಟ ನಡೆದದ್ದು ನೋಡಿದರೆ ಇದರಲ್ಲಿ ಏನೋ ಒಂದು ಹಿರಿಮೆ ಇದೆಯೆಂದು ಭಾಸವಾಗುತ್ತದೆ. ಆ ಒಂದು ಕಾಲ ಕಳೆದ ಮೇಲೆ ಮೈಸೂರಿನ ಇತಿಹಾಸದಲ್ಲಿ ಎಷ್ಟೋ ಬದಲಾವಣೆಗಳು ಆದವು. ೧೯೫೬ರ ನಂತರ ಮೈಸೂರು ದೇಶ, ವಿಶಾಲ ಮೈಸೂರಾಗಿದೆಯೋ ಅಥವಾ ವಿಶಾಲ ಕರ್ನಾಟಕವಾಗಿದೆಯೋ ಎಂಬ ವಿಷಯ ಚರ್ಚೆಯಾಗುತ್ತ ಬಂದಿದೆ. ಅಂದಿನಿಂದಲೇ ಕರ್ನಾಟಕವಾಗಬೇಕಾಗಿತ್ತೆಂದು ಹೇಳುವ ವಾದದಲ್ಲಿ ಹುರುಳಿದೆಯೋ ಎಂದು ನಾನು ಕೇಳುತ್ತೇನೆ. ನಮ್ಮ ದೇಶದಲ್ಲಿ ಈ ಒಂದು ಹೆಸರಿನ ಬಗ್ಗೆ ಹೋರಾಡುವುದಕ್ಕಿಂತಲೂ ಬಡತನ, ನಿರುದ್ಯೋಗ, ನಿರಕ್ಷರತೆ, ಮೇಲು ಕೀಳು ಎಂಬ ಜಾತೀಯತೆಯ ಶೋಷಣೆ, ದಬ್ಬಾಳಿಕೆ ಅತ್ಯಾಚಾರ, ದೌರ್ಜನ್ಯ, ಇವುಗಳು ಹೋಗಿ ನಾವುಗಳು ಸಮಾನತೆ, ಆತ್ಮಗೌರವ ಸ್ವಾವಲಂಬನೆ, ಸಹನೆ, ಸಹಕಾರ, ಸರ್ವಧರ್ಮ ಸಮನ್ವಯ, ಪ್ರಾಮಾಣಿಕತೆ, ಇಂಗಿತ ಭಾವ, ಸಹಬಾಳ್ವೆ, ಸರ್ವೋದಯ ಸಮಾಜ, ಸುಭದ್ರ ಸರ್ಕಾರ ಹಾಗೂ ವಜ್ರಮುಷ್ಟಿಯ ರಾಷ್ಟ್ರವನ್ನು ನಿರ್ಮಾಣ ಮಾಡಬೇಕಾದಂತಹ ಸಂದರ್ಭ ಈಗ ಬಂದಿದೆ. ಅಂತಹ ಒಂದು ಜವಾಬ್ದಾರಿಯನ್ನು ನಮ್ಮ ಸರ್ಕಾರದವರು ಹೊರಬೇಕಾಗಿದೆ. ಅವರು ಈ ಗುರಿಯನ್ನು ಮುಟ್ಟಬೇಕಾಗಿದೆ. ಅದಕ್ಕೆ ಎಂತಹ ಎದೆಗಾರಿಕೆ ಇರತಕ್ಕ ಜನ ಈ ರಾಜ್ಯದ ಆಡಳಿತ ಸೂತ್ರವನ್ನು ಹಿಡಿಯಬೇಕು, ಎಂತಹ ಮಂತ್ರಿಮಂಡಲ ಈ ದೇಶದಲ್ಲಿ ಇರಬೇಕು ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ. ಆ ಒಂದು ಸುಂದರವಾದ ಸೌಧವನ್ನು ನಿರ್ಮಾಣಮಾಡುವ ಶಿಲ್ಪಿ ಯಾರು ಇದ್ದಾನೋ ಅವನು ಅದಕ್ಕೆ ಬಳಸುವಂಥಾದ್ದನ್ನೆಲ್ಲಾ ತನ್ನ ಜಾಣ್ಮೆಯಿಂದ ಶೋಧಿಸಿ ತೆಗೆದು ತನ್ನ ಸೌಧವನ್ನು ಸುಂದರವಾಗಿ ನಿರ್ಮಾಣ ಮಾಡಿಯಾನೆಂದು ನಾನು ಹೇಳುತ್ತೇನೆ.

ಹಸಿ ಇಟ್ಟಿಗೆಯನ್ನು ಉಪಯೋಗಿಸಿ ಕಟ್ಟಿದ ಕಟ್ಟಡ ಎಷ್ಟುಮಾತ್ರಕ್ಕೂ ನಿಲ್ಲದು ಮೇಲಾಗಿ ಅದು ಅಭದ್ರವಾದ ಕಟ್ಟಡ. ರಾಜ್ಯಕ್ಕೆ 'ಕರ್ನಾಟಕ' ಎಂದು ಒಂದು ಹೆಸರಿಟ್ಟ ಮಾತ್ರಕ್ಕೆ ಎಲ್ಲವೂ ಸರಿ ಹೋಗಲಿಲ್ಲ. ರಾಜ್ಯದಲ್ಲಿ ಎಲ್ಲರಿಗೂ ಒಂದು ಸರಿಸಮಾನತೆ, ಆತ್ಮಗೌರವ, ಸ್ವಾವಲಂಬನೆ, ದೊರೆಯ

(ಶ್ರೀ ಕೆ. ಪ್ರಭಾಕರ್)

ಬೇಕು. ಸಮಾಜದಲ್ಲಿ ಸಪ್ತನೆ ಸಹಕಾರಭಾವನೆಗಳು ಬೆಳೆಯಬೇಕು. ಜನರಲ್ಲಿ ಪ್ರಾಮಾಣಿಕತೆ ಬೆಳೆದು ಸರ್ವಧರ್ಮಗಳ ಒಂದು ಸಮನ್ವಯವಾಗಬೇಕು. ಇಲ್ಲಿ ಸರ್ವೋದಯ ಸಮಾಜ ಉದಯಿಸಬೇಕು. ಸುಭದ್ರವಾದ ಸರ್ಕಾರ ಬರಬೇಕು. ಹಾಗೇ ನಮ್ಮ ರಾಷ್ಟ್ರವೂ ಒಂದು ವಜ್ರಮುಷ್ಟಿಯ ರಾಷ್ಟ್ರವಾಗಬೇಕು ನಿಸ್ವಾರ್ಥವುಳ್ಳ ಜನರೂ ಪ್ರಾಮಾಣಿಕರಾದ ಜನರು ಮಂತ್ರಿಮಂಡಲದಲ್ಲಿರಬೇಕು. ಆಗ ರಾಜ್ಯಕ್ಕೆ ಈ ಹೆಸರು ಸಾರ್ಥಕವಾಗುತ್ತದೆ. ಆಡಳಿತದಲ್ಲಿ ಬೇಜವಾಬ್ದಾರಿಯ ಜನರು ಇರತಕ್ಕ ಕಾಲ ಈಗ ಮಾಯವಾಗುತ್ತಿದೆ ಇನ್ನು ಈ ಕರ್ನಾಟಕ ಆದ ಮೇಲೆ ದೇಶಕ್ಕೆ ಬಂದ ಹಿರಿಮೆಯೇನೆಂಬ ಪ್ರಶ್ನೆ ಏಳಬಹುದು. ಅದಕ್ಕೆ ನಾನು ಹೇಳುತ್ತೇನೆ, ಇನ್ನು ಮುಂದೆ ದೇಶದಲ್ಲಿ ಜಾತೀಯ ಹೆಸರಿನ ಬೋರ್ಡುಗಳು ಇರಬಾರದು. ಕೋಮುವಾರು ವಿದ್ಯಾರ್ಥಿ ನಿಲಯಗಳಿರಬಾರದು. ಕೋಮುಗಳ ಹೆಸರಿನಲ್ಲಿ ಬಾವಿಗಳೂ ಮತ್ತು ಬೀದಿಗಳೂ ಇರಬಾರದು. ಕೋಮುವಾರು ಪೂಜಾರಿಗಳಿರಬಾರದು. ರಾಜ್ಯಾಡಳಿತದಲ್ಲಿ ದುರಾಡಳಿತಕ್ಕೆ ಅವಕಾಶ ಇರಬಾರದು. ಜಾತೀ ಹೆಸರಿನಲ್ಲಿ ಖಾನಾವಳಿಗಳಿರಬಾರದು. ಸಮತಾವಾದ ಸಮಾಜದಲ್ಲಿ ಎಲ್ಲರಿಗೂ ಒಂದು ದವಾಖಾನೆ, ಎಲ್ಲರಿಗೂ ಒಂದು ವಿದ್ಯಾಮಂದಿರ, ಎಲ್ಲರಿಗೂ ಒಂದು ಪೂಜಾಮಂದಿರ ಮತ್ತು ಎಲ್ಲರಿಗೂ ಒಂದು ರುದ್ರ ಭೂಮಿ ಇರಬೇಕು. ಕನ್ನಡವೇ ರಾಜ್ಯದ ಆಡಳಿತ ಭಾಷೆಯಾಗಬೇಕು, ಕನ್ನಡದಲ್ಲಿ ಮಹಾ ಗ್ರಂಥಗಳು ಉದಯವಾಗಬೇಕು. ಜನರಲ್ಲಿ ನಾವೆಲ್ಲರೂ ಒಂದೇ ಕನ್ನಡ ಮಾತೆಯ ಮಕ್ಕಳು ಎಂಬ ಭಾವನೆ ಉದಯವಾಗಬೇಕು. ನಾಡಿನ ಹಬ್ಬಗಳಲ್ಲಿ ನವರಾತ್ರಿಯೇ ಮುಖ್ಯವಾದ ಹಬ್ಬವಾಗಬೇಕು. ರಾಜ್ಯದಲ್ಲಿ ಕೂಡಲೆ ಸರ್ವೋದಯ ಸಮಾಜ ನಿರ್ಮಾಣವಾಗಬೇಕು. ನಮಗೆ 'ಕರ್ನಾಟಕ' ಎಂಬ ಹೆಸರೇ ಒಂದು ಮಹಾ ಮಂತ್ರವಾಗಿ ನಮಗೆ ಹೆಚ್ಚಿನ ಶಕ್ತಿಯನ್ನು ಕೊಡಲಿ ಮಾನವ ಮಾನವರನ್ನು ಮೇಲು ಕೀಳಾಗಿ ಕಾಣುವ ಜಟ, ಜಾಳಿ, ಸಂಪ್ರದಾಯಗಳಿಗೆ ಶರಣು ಹೋಗತಕ್ಕ ದುರ್ಬಲ ಮನಸ್ಸು ದೂರವಾಗಬೇಕು. ಹೆಸರಿನಲ್ಲಿ ಏನಿದೆ ? ಕರ್ನಾಟಕ ಎಂಬ ಹೆಸರಿನಲ್ಲಿ ಏನಿದೆ ಎಂದು ವಾದಿಸುವುದನ್ನು ನಾನು ಒಪ್ಪತಕ್ಕವನಲ್ಲ. ಎಲ್ಲ ಜನರಲ್ಲಿಯೂ ಸಹೋದರ ಭಾವನೆ ಬೆಳೆಯಬೇಕು. ಸಮಾಜದಲ್ಲಿ ಎದ್ದುಕಾಣುತ್ತಿರುವ ಉಚ್ಚ ನೀಚತ್ವಗಳು ಅಳಿಯಬೇಕು. ಕಾಲಚಕ್ರ ತಿರುಗುತ್ತಿರುವಾಗ ಅದನ್ನು ಅನುಸರಿಸಿ ನಡೆಯಬೇಕು. ಜನರು ಅಧಿಕಾರ ಸಿಕ್ಕಿದ ಮೇಲೆ ಅಹಂಕಾರ ಹಾಗೂ ಸೊಕ್ಕಿನಿಂದ ಮೈಮರೆತು ನಡೆದರೆ ಮುಗ್ಗರಿಸಬೇಕಾದೀತು. ಹೀಗೆ ನಮ್ಮಲ್ಲಿ ಈ ಮೇಲು ಕೀಳುಭಾವನೆಗಳು ಹೆಚ್ಚಿ ಅನೇಕರು ಈಗಾಗಲೇ ಉರುಳಿಹೋಗಿದ್ದಾರೆ. ಈ ಮೇಲು ಕೀಳುಗಳನ್ನು ಅಳಿಸುವುದಕ್ಕಾಗಿಯೇ ಬಸವಣ್ಣನವರು- ಶಿವನೊಲಿದವಗೆ ಕುಲವಾವುದಯ್ಯ ಕೂಡಲ ಸಂಗಮದೇವಾ' ಎಂದು ಕೇಳಿದ್ದಾರೆ. ನಮ್ಮ ಸಮಾಜ ಒಂದು ಶುದ್ಧವಾದ ಸಮಾಜವಾಗಿ ಬೆಳಗಲೆಂದು 'ಹೊಲಗೇರಿಯಲ್ಲವೋ, ಶಿವಾಲಯವೆನ್ನಿರೋ' ಎಂದು ಜನರಿಗೆ ಉಪದೇಶ ಮಾಡಿದ್ದಾರೆ. ಅಂದು ಕರ್ನಾಟಕದಲ್ಲಿ ಈ ಜಾತೀಯತೆಯನ್ನು ನಿರ್ಮೂಲ ಮಾಡಬೇಕೆಂಬ ಒಂದು ಧೈರ್ಯ ಸಾಹಸ ಜನರಲ್ಲಿ ಮೂಡಿದ್ದರೆ ಅದಕ್ಕೆ ಮಹಾನುಭಾವ ಬಸವಣ್ಣನವರೇ ಕಾರಣ. ಆದರೆ ಈ ದಿವಸ ಆ ಬಸವಣ್ಣನವರ ಹೆಸರನ್ನು ಹೇಳಿ ಒಂದು ಬಸವಸಮಿತಿಯನ್ನು ರಚಿಸಿದರೆ ಅದು ಬಸವಣ್ಣನವರ ಅನುಭವಮಂಟಪವಾದೀತೇ ? ಅಥವಾ ಕುಟಿಲ ಕುತಂತ್ರಗಳ ಜನತೆಯನ್ನು ಸೇರಿಸಿಕೊಂಡು ಒಂದು ಮಂತ್ರಿಮಂಡಲವನ್ನು ರಚಿಸಿದರೆ ಅದು ಅನುಭವ ಮಂಟಪವಾದೀತೆ ? ಇಂಥ ಅನುಭವ ಮಂಟಪಕ್ಕೆ ಬರತಕ್ಕವರಲ್ಲಿ ಯಾವ ಒಂದು ಜಾತೀಯತೆಯ ಸೋಂಕೂ ಇರಬಾರದು. ದೇಶದಲ್ಲಿರತಕ್ಕ ಬಡತನ, ನಿರುದ್ಯೋಗ, ನಿರಕ್ಷರತೆ, ಹಾಗೂ ಜಾತೀಯತೆಗಳನ್ನು ತೊಲಗಿಸತಕ್ಕ ಸಮಾಜ ನಿರ್ಮಾಣವಾಗಬೇಕು. ಸಮಾಜದಲ್ಲಿರತಕ್ಕ ಶೋಷಣೆ, ದಬ್ಬಾಳಿಕೆ ಅತ್ಯಾಚಾರಗಳು ದೌರ್ಜನ್ಯಗಳು ದೂರವಾಗಬೇಕು. ಇಂಥ ಒಂದು ಬುನಾದಿಯಮೇಲೆ ಬಸವಣ್ಣನವರು ಕರ್ನಾಟಕ ರಾಜ್ಯವನ್ನು ಕಟ್ಟಲು ಹೊರಟಿದ್ದರು ಕುತಂತ್ರ ಜನರ ನೆರೆಯಲ್ಲಿ ನೂತನ ಸಮಾಜವನ್ನು ಕಟ್ಟಲು ಸಾಧ್ಯವಿಲ್ಲ. ನೂತನ ಸಮಾಜಕ್ಕೆ ಮೂಲ ಬುನಾದಿ ಜನರಲ್ಲಿ ಮೊದಲು ಸಹೋದರ ಭಾವನೆ ಅಂಕುರಿಸಬೇಕು. ಈ ದಿವಸ ಕರ್ನಾಟಕ ರಾಜ್ಯ ಉದಯವಾದ ಮೇಲೂ ಇಲ್ಲಿ ಕುತಂತ್ರ ಜನರು ಇದ್ದರೆ, ಅವರನ್ನು ಮುಂದೆ ನಾವೇನು ಕೋಳಕ್ಕೇರಿಸಬೇಕೋ, ಶೂಲಕ್ಕಾಕಬೇಕೋ ಅಥವಾ ಅವರನ್ನು ಕತ್ತಿಯ ಪ್ರಹಾರಕ್ಕೆ ಆಹುತಿ ಕೊಡಬೇಕೋ ಅಥವಾ ಅವರನ್ನು ದೇಶಭ್ರಷ್ಟರನ್ನಾಗಿ ಸಾರಿ ಅವರನ್ನು ದೇಶದಿಂದ ಹೊರಗೆ ಹಾಕಬೇಕೋ ಏನು ಮಾಡಬೇಕು. ಸಮಾಜದಲ್ಲಿರತಕ್ಕ ಮೇಲು ಕೀಳು ಭಾವನೆಗಳನ್ನು ದೂರಮಾಡಬೇಕೆಂಬ ಕೂಗೆದ್ದು ಇಲ್ಲಿಗೆ ಸಾವಿರಾರು ವರ್ಷಗಳಾಯಿತು. ಆದರೂ ಅವುಗಳಿನ್ನೂ ಅಳಿದಿಲ್ಲ. ಇದಕ್ಕೆ ಚರಿತ್ರೆಯಲ್ಲಿ ಸಾಕಷ್ಟು ಆಧಾರಗಳಿವೆ. ಆದರೆ ಈ ಹಿಂದೆ ರಾಜ್ಯಗಳ ಪುನರ್ವಿಂಗಡಣೆಯ ಕಾಲಕ್ಕೆ ಮೈಸೂರು ಮೈಸೂರಾಗೆ ಉಳಿಯಲಿ _ ಮೈಸೂರು ಮಲ್ಲಿಗೆಯೇ ನಮಗೆ ಇರಲಿ ಎಂದು ಒಂದು ಗುಂಪಿನವರೂ ವಾದಮಾಡುತ್ತಿದ್ದರು. ಅದೇ ಕಾಲಕ್ಕೆ ಇನ್ನೊಂದು ಗುಂಪಿನವರು ನಮಗೆ ಕರ್ನಾಟಕ ಬೇಕು ಎಂದು ಹೇಳುತ್ತಿದ್ದರು. ಆ ದಿವಸ ಅವರ ವಾದದಲ್ಲಿ ಆ ಎರಡೂ ಗುಂಪಿನಲ್ಲಿದ್ದ ಒಂದು ಅಸಮಾಧಾನ ಅತೃಪ್ತಿ ಹಾಗೂ ಕೀಳುಭಾವನೆಗಳೂ ಎದ್ದು ಕಾಣುತ್ತಿದ್ದವು. ಆ ಎರಡೂ ಗುಂಪಿನವರ ಕಿತ್ತಾಟದಲ್ಲಿ ಇಬ್ಬರಲ್ಲೂ

ಹಿಡಿದಿದ್ದ ಒಡಕಿನ ನಿಜರೂಪವೇನು ಎಂಬುದು ಗೊತ್ತಾಗದೆ ಒಬ್ಬೊಬ್ಬರೂ ಒಂದೊಂದು ದಿಕ್ಕಾಗಿ, ಕೆಲವರು ಮಠಮಂದಿರಗಳ ಮೂಲಕವೋ ಮತ್ತೆ ಕೆಲವರು ಮಂಡೀ ವರ್ತಕರ ಮೂಲಕವೋ ತಮ್ಮ ತಮ್ಮ ಕುಲಗೋತ್ರಗಳ ಕೋಟೆಗಳನ್ನು ಒಡ್ಡಿ ಅದಕ್ಕೆ ಅನೇಕ ಜಾಲಗಳನ್ನು ಹೂಡಿ ಅನೇಕ ಕಥೆಗಳನ್ನು ಗಂಟುಹಾಕಿ, ರಾಜ್ಯಭಾರ ಮಾಡಬೇಕೆಂದರೆ ಅಂಥ ಯಾವ ಪ್ರಯತ್ನಗಳಿದ್ದರೂ ಅವು ಆರು ತಿಂಗಳ ಕಾಲ ಕೂಡ ನಿಲ್ಲಲಾರದೆಂದು ನಾನು ಒತ್ತಿ ಹೇಳುತ್ತೇನೆ. ನಮಗಿರತಕ್ಕ ರಾಜ್ಯಾಂಗದ್ವಾರ ವಾಸ್ತವವಾಗಿ ಜಾತ್ಯಾತೀತ ಸಮಾಜವನ್ನು ನಾವಿಲ್ಲಿ ನಿರ್ಮಾಣ ಮಾಡಬೇಕಾಗಿದೆ. ಅದಕ್ಕೆ ಜನರಲ್ಲಿ ನಡೆಯೊಂದು ನುಡಿಯೊಂದಾದರೆ ಅದು ಸಾಧ್ಯವಾಗುವುದಿಲ್ಲ ಜನರೆಲ್ಲರಲ್ಲಿಯೂ ಮಾನವೀಯತೆ ಭಾವನೆ ಬೆಳೆಯಬೇಕು. ಎಲ್ಲರೂ ಕೂಡಿ ಒಂದಾಗಿ ಬಾಳಬೇಕು ಎಂಬ ಭಾವನೆ ನಮ್ಮಲ್ಲಿ ಬೆಳೆಯಬೇಕು. ಈ ನಮ್ಮ ಕರ್ನಾಟಕದಲ್ಲಿ ವೇದಾಂತಿಗಳೂ ಸಾಹಿತಿಗಳೂ ಕವಿಗಳೂ ಗ್ರಂಥಕರ್ತರೂ ಪತ್ರಿಕೋದ್ಯಮಿಗಳೂ ಬುದ್ಧಿಜೀವಿಗಳೂ ಮತ್ತು ದಾರ್ಶನಿಕರೂ ಹಾಗೂ ತತ್ತ್ವಜ್ಞಾನಿಗಳು ಏನೂ ಕಮ್ಮಿಯಿಲ್ಲ. ಇವರೆಲ್ಲರೂ ಇದಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸಬೇಕು, ಇವರು ತಮ್ಮ ಶಕ್ತಿಮೀರಿ ದುಡಿದರೆ ಒಳ್ಳೆಯದಾದೀತು. ಆದರೆ ಇದೇ ಕಾಲಕ್ಕೆ ಇಲ್ಲಿ ಒಂದು ವಿಷಯ ಹೇಳಬೇಕಾಗಿದೆ. ಏನೆಂದರೆ ನಮ್ಮಲ್ಲಿ ಸ್ವಲ್ಪ ಚಿಕ್ಕತನವೂ ಇದೆ. ಅದೂ ಕೂಡ ಹೋಗಬೇಕು. ಬೆಳಗಾಂ ಇಲ್ಲಿದ್ದರೇನು, ಅಲ್ಲಿದ್ದರೇನು? ಆ ನೆಲ ಎಲ್ಲಿದ್ದರೂ ಬೆಳಗಾಮಿಯ ನೆಲವೇ ತಾನೆ? ಹಾಗೇ ನಾಳೆ ಆ ಕಾವೇರಿಯ ಜಲ ಬೆಂಗಳೂರಿಗೆ ಬಂದರೆ ಆಗ ಅದು ಬೆಂಗಳೂರು ಜಲವಾಗುತ್ತದೆಯೇ ? ಕಾವೇರಿಯ ಜಲ ಎಲ್ಲಿದ್ದರೂ ಅದು ಕಾವೇರಿಯ ಜಲವೇ. ಅದು ಬಳ್ಳಾರಿಗೆ ಹೋದರೂ ಅಲ್ಲಿಯೂ ಅದು ಕಾವೇರಿಯ ಜಲವೇ. ದೇಶದಲ್ಲಿ ಕೈಗಾರಿಕೆಗಳು ಅಭಿವೃದ್ಧಿಯಾಗಿ ಸಂಮೃದ್ಧಿಯಾಗಿ ಬೆಳೆಗಳಾಗಿ ಜನರು ಸುಖವಾಗಿರಬೇಕಾದುದು ಮುಖ್ಯ ಆದರೆ ಈ ದಿನ ಮೈಸೂರಿಗೆ ಕರ್ನಾಟಕ ಎಂಬ ಹೆಸರಿನ ನಾಂದಿಯಾಯಿತು. ಇನ್ನೇನು ಎಲ್ಲವೂ ಸರಿಹೋಯಿತು ಎಂದು ಕೇಂದ್ರ ಸರ್ಕಾರವೇನಾದರೂ ಭಾವಿಸುವುದಾದರೆ ಅದು ತಪ್ಪಾದೀತು. ಆ ಎಸ್. ಆರ್. ಸಿ ವರದಿ ಫಲವಾಗಿ ನಮಗೆ ದೊರೆತ ಭಾಗದಲ್ಲಿ ಎಲ್ಲರೂ ಸಹೋದರರಂತೆ ಒಂದಾಗಿ ಬಾಳಬೇಕೆಂಬ ಆಸೆ ಕನ್ನಡಿಗರ ಕೆಚ್ಚೆದೆಯ ಫಲವಾಗಲಿ ಎಂದು ಆಶಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ''ಜೈ ಹಿಂದ್''

ಶ್ರೀ ಎಚ್. ಜಿ. ಚೆನ್ನಪ್ಪ ಮಾಗಡಿ.—ಮಾನ್ಯ ಸಭಾಪತಿಯವರೇ, ಈ ಸಭೆಯ ಮುಂದೆ ಮಂಡಿಸಿರತಕ್ಕ ನಿರ್ಣಯದಲ್ಲಿ 'ಕರ್ನಾಟಕ' ಎಂಬ ಹೆಸರನ್ನು ಮೈಸೂರು ರಾಜ್ಯಕ್ಕೆ ಇಡಬೇಕೆಂದು ಇದೆ.- ಆದರ ಬಗ್ಗೆ ಇಲ್ಲಿ ಈಗ ಚರ್ಚೆ ನಡೆಯುತ್ತಿದೆ ಈ ವಿಚಾರದಲ್ಲಿ ಈಗಾಗಲೇ ಅನೇಕರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಇದನ್ನು ವಿರೋಧಿಸುವುದಿಲ್ಲ. ನಾನೂ ಕೂಡ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂಬ ಹೆಸರನ್ನು ಇಡಬೇಕೆಂದು ಸಂಪೂರ್ಣವಾಗಿ ಒಪ್ಪಿ ನನಗೆ ತಿಳಿದ ಒಂದೆರಡು ವಿಷಯಗಳನ್ನು ಸಭೆಯ ಮುಂದೆ ಇಡಬಯಸುತ್ತೇನೆ.

ಈ ರಾಜ್ಯಕ್ಕೆ ಬಹಳ ದಿನಗಳ ಹಿಂದೆಯೇ ಈ ಕರ್ನಾಟಕ ಎಂಬ ಹೆಸರನ್ನು ಇಡಬೇಕಾಗಿತ್ತು. ಆದರೆ ಇದನ್ನು ಇಷ್ಟು ನಿಧಾನ ಮಾಡುವುದಕ್ಕೆ ಕಾರಣಗಳೇನು ಎಂಬುದನ್ನು ಆಲೋಚಿಸಿದಾಗ ಅದಕ್ಕೆ ಈಗ ಕಾಲಸನ್ನಿಹಿತವಾಗಿದೆ ಎನ್ನುತ್ತಿದ್ದಾರೆ ಹಿಂದೆ ಆ ಫಜಲಾಲಿ ಸಮಿತಿಯ ವರದಿ ಮೇಲೆ ರಾಜ್ಯಗಳ ಪುನರ್ವಿಂಗಡಣೆ ಆಗತಕ್ಕ ಕಾಲಕ್ಕೆ ಇದೇ ಸಭೆಯಲ್ಲಿ ಏನೇನು ಚರ್ಚೆಗಳು ನಡೆದವು ಎಂಬುದನ್ನು ನಾನು ಆಗ ಒಬ್ಬ ವಿದ್ಯಾರ್ಥಿಯಾಗಿ ಕುಳಿತು ಕೇಳಿದ್ದೇನೆ. ಆ ದಿವಸ ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದ ಹನುಮಂತಯ್ಯನವರ ಚಾಕಚಕ್ಯತೆಯಿಂದ ಏನು ಒಂದು ಸಾಧನೆಯನ್ನು ಇಲ್ಲಿ ಸಾಧಿಸಲಾಯಿತೋ ಅದು ಈ ದಿವಸ ಕರ್ನಾಟಕ ಆಗುವುದಕ್ಕೆ ಒಂದು ಅವಕಾಶವನ್ನು ಮಾಡಿಕೊಟ್ಟಿದೆ ಎಂದು ಹೇಳಿದರೆ ತಪ್ಪಾಗಲಾರದು.

ಅದನ್ನು ಬಿಟ್ಟು ಹೊರಗಡೆ ಅಭಿಪ್ರಾಯವೇನಿತ್ತು, ಶಾಸನಸಭೆ ಸದಸ್ಯರ ಅಭಿಪ್ರಾಯವೇನಿತ್ತು ಎಂಬುದನ್ನು ನೋಡಿ ಇದರ ಪ್ರಕಾರ ಎಸ್. ಆರ್. ಸಿ ಕಮೀಷನ್ ವರದಿ ಸಲ್ಲಿಸಿದ್ದರೆ ನಿಜವಾಗಿಯೂ ಕರ್ನಾಟಕ ಏಕೀಕರಣವಾಗುತ್ತಿರಲಿಲ್ಲ. ಆದುದರಿಂದ ಕರ್ನಾಟಕಕ್ಕಾಗಿ ಶ್ರಮಿಸಿದ ಒಬ್ಬರು ವ್ಯಕ್ತಿಗಳು ಎಂದರೆ ಹನುಮಂತಯ್ಯನವರು ಎಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ನಿಜಲಿಂಗಪ್ಪನವರೂ ಕೂಡ ಪ್ರಯತ್ನ ಮಾಡಿ ಯಾರ ಮುಖಾಂತರ ಆಗಬೇಕು ಎಂಬುದನ್ನು ಯೋಚಿಸಿ ಜಾಣತನದಿಂದ ಹನುಮಂತಯ್ಯನವರನ್ನು ಎತ್ತಿಕಟ್ಟಿ ಕರ್ನಾಟಕಕ್ಕಾಗಿ ಶ್ರಮಿಸಿದರು. ಕರ್ನಾಟಕವೆಂದು ನಮ್ಮ ರಾಜ್ಯಕ್ಕೆ ಹೆಸರಿಡಬೇಕೇ ಅಥವಾ ಮೈಸೂರು ಎಂಬುದೇ ಇರಬೇಕೇ ಎಂಬುದರ ಬಗ್ಗೆ ವಿವಾದವಿತ್ತು. ಹಿಂದೆ ಒಕ್ಕೂಟವಾಗಲು ಒಮ್ಮತವಿರಲಿಲ್ಲ. ಆದರೆ ನಮ್ಮ ರಾಜ್ಯದ ಹೆಸರನ್ನು ಕರ್ನಾಟಕವೆಂದು ಘೋಷಿಸಲು ಪ್ರಯತ್ನ ಮಾಡಬೇಕೆಂಬುದು ಕೆಲವರ ಅಭಿಪ್ರಾಯವಾಗಿತ್ತು. ಕೋಮುವಾರು ಭಾವನೆ ಮತ್ತು ರಾಜಕೀಯ ಹಿಂದಿನ ನಾಯಕರಲ್ಲಿತ್ತು. ಆ ಹೆಸರಿಡಲು ನಿಧಾನವಾಗಿರುವುದಕ್ಕೆ ಇದೇ ಮುಖ್ಯ ಕಾರಣ. ಅದು ಹೋಗಿ ಇಂದು ಎಲ್ಲರೂ ಹರ್ಷದಿಂದ

(ಶ್ರೀ ಎಚ್. ಜಿ. ಚೆನ್ನಪ್ಪ)

ಕರ್ನಾಟಕ ಎಂದು ಹೆಸರಿಡಲು ಮುಂದೆ ಬಂದಿದ್ದಾರೆ. ಆದುದರಿಂದ ಈಗ ನಮ್ಮ ರಾಜ್ಯದ ಹೆಸರನ್ನು ಕರ್ನಾಟಕವೆಂದು ಕರೆಯಲು ಯಾವ ಜಿಜ್ಞಾಸೆಯೂ ಇಲ್ಲ. ಹೀಗೆ ಕರೆಯುವುದು ಸೂಕ್ತವಾಗಿದೆ. ಈಗ ಕರ್ನಾಟಕ ಅಪೂರ್ಣವಾಗಿದೆ. ಪೂರ್ಣ ಕರ್ನಾಟಕವೆಂದು ಹೇಳಲು ಸಾಧ್ಯವಿಲ್ಲ. ನೆರೆ ರಾಜ್ಯಗಳಲ್ಲಿರುವ ಕೊಯಮತ್ತೂರು ಜಿಲ್ಲೆ ನೀಲಗಿರಿ, ಹೊಸೂರ್ ಸುತ್ತಲಿರುವ ತಾಳವಾಡಿ, ಫಿರ್ಕ ಕಾಸರಗೋಡು ಕನ್ನಡ ಮಾತನಾಡುವವರಿರುವ ಭಾಗಗಳನ್ನು ಕರ್ನಾಟಕಕ್ಕೆ ಸೇರಿಸಿಕೊಳ್ಳಲು ಪ್ರಯತ್ನ ಮಾಡಬೇಕು, ಅಲ್ಲಿರುವವರು ತಮ್ಮ ಕಷ್ಟ ಸುಖಗಳನ್ನು ನಮಗೆ ಹೇಳುವರು, ಅವರು ಕನ್ನಡ ಮಾತನಾಡುವ ಜನ ಎಂಬ ಭಾವನೆಯಿಂದ ಅಲ್ಲಿನ ರಾಜ್ಯ ಸರ್ಕಾರ ಅವರಿಗೆ ಯಾವ ವಿಧವಾದ ಅನುಕೂಲವನ್ನೂ ಮಾಡಿಕೊಡುತ್ತಿಲ್ಲ, ಎಂದಿಗೆ ತಾವು ಕರ್ನಾಟಕಕ್ಕೆ ಸೇರುವೆವೋ ಎಂದು ಹಂಬಲಿಸುತ್ತಿದ್ದಾರೆ. ಕಳೆದ ಮದುವೆ ಲಗ್ನದ ಕಾಲದಲ್ಲಿ ನಾನು ಹೊಸೂರು ತಾಲ್ಲೂಕಿಗೆ ಹೋಗಿಬಂದೆ. ಅಲ್ಲಿನವರು ನಮಗಿಂತ ಅಚ್ಚ ಕನ್ನಡ ಮಾತನಾಡುವರು. ಅಲ್ಲಿ ತಮ್ಮ ಶಾಲೆಗೆ ಸರಿಯಾದ ಉಪಾಧ್ಯಾಯರನ್ನು ನೇಮಿಸುತ್ತಿಲ್ಲ, ಕನ್ನಡಿಗರಿಗೆ ಬಹಳ ಕಷ್ಟವಿದೆ ಎಂದು ಮುಂತಾಗಿ ಅಲ್ಲಿನವರು ಹೇಳಿದರು. ಆದುದರಿಂದ ಅವರನ್ನು ನಮ್ಮ ಜೊತೆಗೆ ಸೇರಿಸಿಕೊಳ್ಳಬೇಕು, ಮೈಸೂರಿನವರು ಅದಕ್ಕೆ ತಕ್ಕ ಪ್ರಯತ್ನ ಮಾಡಿಲ್ಲ ಎಂದು ಸರ್ವಾನುಮತದ ಅಭಿಪ್ರಾಯವನ್ನು ಅಲ್ಲಿನವರು ಕೊಟ್ಟರು. ಅವರಿಗೆ ಯಾವ ವಿಧವಾದ ಸೌಲಭ್ಯವನ್ನೂ ಕೂಡ ಅಲ್ಲಿ ರಾಜ್ಯ ಸರ್ಕಾರ ಕೊಡುತ್ತಿಲ್ಲ. ಹೇಗಿದ್ದರೂ ಒಂದು ದಿನ ಅವರು ಕರ್ನಾಟಕಕ್ಕೆ ಸೇರುವರು, ಆದುದರಿಂದ ತಮ್ಮ ದೇಶದ ಹಣ ಅವರಿಗೇಕೆ ಖರ್ಚುಮಾಡಬೇಕು ಎಂಬ ಅಭಿಪ್ರಾಯ ಇತರ ದೇಶಗಳಲ್ಲಿ ಕನ್ನಡಿಗರ ಬಗ್ಗೆ ಇದೆ. ಈ ಪರಿಸ್ಥಿತಿ ಇರುವಾಗ ನಮ್ಮವರು ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲ. ಕೇಂದ್ರ ಸರ್ಕಾರದ ಅನುಮತಿಯನ್ನು ಕರ್ನಾಟಕವೆಂದು ನಮ್ಮ ದೇಶಕ್ಕೆ ಹೆಸರಿಡುವುದಕ್ಕೆ ಪಡೆಯುವಾಗ ಕರ್ನಾಟಕಕ್ಕೆ ಬರಬೇಕಾದ ಬೇರೆ ಪ್ರಾಂತ್ಯಗಳಲ್ಲಿರುವ ಕನ್ನಡ ಭಾಗಗಳನ್ನು ಸೇರಿಸಿಕೊಳ್ಳಲು ಪ್ರಯತ್ನ ಮಾಡಬೇಕು, ಹಾಗೆ ಮಾಡಿ ಅಖಂಡ ಕರ್ನಾಟಕ ರಚಿಸಲು ಶ್ರಮಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಇದಾಗಲೇಬೇಕು. ಇಲ್ಲದಿದ್ದರೆ ಪೂರ್ಣ ಕರ್ನಾಟಕವಾಗುವುದಿಲ್ಲ. ಅಪೂರ್ಣ ಕರ್ನಾಟಕವಾಗುವುದು. ಇಂದು ಕೋರ್ಟಿನಲ್ಲಿ ವ್ಯವಹಾರ ಮಾಡುವಾಗ ಆಧಾರ ಕೇಳುವರು. ಹಾಗೆ ಕರ್ನಾಟಕಕ್ಕೆ ಇತರ ಪ್ರಾಂತಗಳಲ್ಲಿರುವ ಭಾಗಗಳನ್ನು ಸೇರಿಸಿಕೊಳ್ಳಲು ಆಧಾರಗಳಿವೆ, ಕೆಲವು ಭಾಗಗಳಲ್ಲಿ ಹಿಂದೆ ಟಿಪ್ಪು ಮತ್ತು ಹೈದರಾಲಿ ಕಟ್ಟಿಸಿರುವ ಅಣೆಕಟ್ಟುಗಳು, ಕಟ್ಟಡಗಳು ನಮಗೆ ಆ ಭಾಗಗಳು ಸೇರಬೇಕೆಂಬುದಕ್ಕೆ ಸಾಕ್ಷಿಯಾಗಿದೆ. ಈ ಭಾಗಗಳನ್ನು ನಮ್ಮ ದೇಶಕ್ಕೆ ಸೇರಿಸಿಕೊಳ್ಳುವ ವಿಚಾರದಲ್ಲಿ ಆಸೆಯಿದ್ದರೂ ಅದು ಇಲ್ಲಿಯವರೆಗೆ ತಳ್ಳಿಕೊಂಡು ಬಂದಿದೆ. ಹೆಸರಿನ ವಿಷಯದಲ್ಲಿ ಭಿನ್ನಾಭಿಪ್ರಾಯವಿರಲಿಲ್ಲ. ಬ್ರಿಟೀಷರ ಕಾಲದಲ್ಲಿ 'ಕರ್ನಾಟಕ' ಎಂಬ ಹೆಸರನ್ನು ಬಿಟ್ಟು 'ಮೈಸೂರು' ಎಂಬ ಹೆಸರನ್ನಿಟ್ಟಿದ್ದಾರೆ. ಕರ್ನಾಟಕವೆಂಬುದು ಪೂರ್ವದ ಹೆಸರು. ಆದನ್ನು ಮರೆಯಬಾರದು, ಕರ್ನಾಟಕವೆಂದಿಡಲು ಅಡ್ಡಿಯಿಲ್ಲ. ಕರ್ನಾಟಕ ಎಂಬ ಹೆಸರಿಡುವ ಕೆಲಸವನ್ನು ನಾವು ಅವಿರೋಧವಾಗಿ ಸಾಧಿಸಿದ್ದೇವೆಂದು ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳಬಾರದು. ನಮ್ಮ ಸಹೋದರರು ಹೊರಗಿನ ಪ್ರದೇಶಗಳಲ್ಲಿ ನರಳುತ್ತಿದ್ದಾರೆ..

ಹೊರಗಿರುವ ಕನ್ನಡ ಪ್ರದೇಶಗಳವರು ಎಂದಾದರೂ ಕರ್ನಾಟಕಕ್ಕೆ ಸೇರಬಹುದೆಂದು ಆಸೆಯಿಂದ ದಿನ ಕಳೆಯುತ್ತಿದ್ದಾರೆ. ನಾವು ಇಂದು ಸಂತೋಷ ಪಡುವಂತೆ ಅವರೂ ಸಂತೋಷ ಪಡಲು ಅವಕಾಶವಾಗುವಂತೆ ಬೇಗ ಸೂಕ್ತ ಕ್ರಮ ಕೈಕೊಳ್ಳಬೇಕು. ಅಲ್ಲಿಯವರೆಗೆ ಕರ್ನಾಟಕವೆಂದು ಹೆಸರಿಡುವುದು ಸೂಕ್ತವಲ್ಲ. ಅದನ್ನು ಸಾಧಿಸಬೇಕು. ಇತರ ರಾಜ್ಯಗಳಲ್ಲಿರುವ ಕನ್ನಡ ಭಾಗಗಳು ನಮ್ಮ ರಾಜ್ಯಕ್ಕೆ ಸೇರಲೇಬೇಕು ಮತ್ತು ನಮ್ಮ ಸೌಲಭ್ಯಗಳನ್ನು ಅಲ್ಲಿನವರು ಪಡೆಯಲೇಬೇಕು ಎಂದು ಪಣ ತೊಡಬೇಕಾಗಿದೆ. ಇದಕ್ಕೆ ತಕ್ಕಂಥ ಹೋರಾಟವಾಗಬೇಕಾಗಿದೆ. ಹಿಂದೆ ಗೋಪಾಲಗೌಡರು ಪ್ರತಿಯೊಂದು ಕನ್ನಡ ಪ್ರದೇಶವೂ ಕೂಡ ಕರ್ನಾಟಕಕ್ಕೆ ಸೇರಬೇಕೆಂದು ಹೋರಾಟ ನಡೆಸುತ್ತಿದ್ದರು. ಅವರನ್ನು ನಾವು ಈ ಸಂದರ್ಭದಲ್ಲಿ ಮರೆತರೆ ತಪ್ಪಾಗುವುದು. ಅವರ ಆದರ್ಶವನ್ನನುಸರಿಸಿ ಸಂಕುಚಿತ ಭಾವನೆ ಬಿಟ್ಟು ನೆರೆ ರಾಷ್ಟ್ರದಲ್ಲಿರುವ ಕನ್ನಡ ಭಾಗಗಳನ್ನು ಸೇರಿಸಿಕೊಳ್ಳಲು ಪ್ರಯತ್ನ ಮಾಡಬೇಕೆಂದು ಮನವಿ ಮಾಡುತ್ತೇನೆ. ಕರ್ನಾಟಕಕ್ಕಾಗಿ ಶ್ರಮಿಸಿದ ಕವಿಗಳು ಮುಂತಾದವರ ವಿಚಾರವನ್ನು ಈಗಾಗಲೆ ಶ್ರೀ ಕೋಣಂದೂರು ಲಿಂಗಪ್ಪನವರು ಮುಂತಾದವರು ಹೇಳಿರುವುದರಿಂದ ಅದನ್ನು ಮತ್ತೆ ನಾನು ಹೇಳದೆ ನಮ್ಮ ಮುಂದಿರುವ ನಿರ್ಣಯವನ್ನು ಅನುಮೋದಿಸಿ ಪುಷ್ಟೀಕರಿಸುತ್ತಾ ಈ ಸಂದರ್ಭದಲ್ಲಿ ನೆರೆ ರಾಷ್ಟ್ರಗಳಲ್ಲಿರುವ ಕರ್ನಾಟಕದ ಭಾಗಗಳನ್ನು ಆದಷ್ಟು ಜಾಗ್ರತೆ ನಮ್ಮ ರಾಜ್ಯಕ್ಕೆ ಸೇರಿಸಿಕೊಳ್ಳಬೇಕು ಎಂದು ಮತ್ತೊಮ್ಮೆ ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ''ಜೈ ಕರ್ನಾಟಕ''.

† ಶ್ರೀ ಕೆ. ಶ್ರೀರಾಮುಲು(ಗಾಂಧಿನಗರ).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿದ ನಿರ್ಣಯವನ್ನು ಪರಿಪೂರ್ಣವಾಗಿ ಸಮರ್ಥನೆ ಮಾಡುತ್ತಾ, ನಮ್ಮ ರಾಜ್ಯದ ಹೆಸರು ಕರ್ನಾಟಕ ಎಂದು ಬದಲಾವಣೆಯಾಯಿತೆಂದು ಎಲ್ಲರೂ ಸಂತೋಷದಲ್ಲಿರುವಾಗ ಸಂಕಟದಲ್ಲಿರುವವರೂ ಇದ್ದಾರೆ

ಯಾರು ಸಂಕಟದಲ್ಲಿದ್ದಾರೆ ಅವರನ್ನು ಮರೆಯಬಾರದು ಎಂದು ಹೇಳುತ್ತೇನೆ. ಇಡೀ ಮೂರು ಕೋಟಿ ಜನತೆಯಲ್ಲಿರುವ ಬಡವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹಾಗೆ ಹೇಳುವಾಗ ನಾನು ಯಾರನ್ನೂ ಉದ್ದೇಶಿಸಿ ಹೇಳುತ್ತಿಲ್ಲ. ಎಂದೋ ಕರ್ನಾಟಕ ಎಂದು ಹೆಸರಿಡಬೇಕಾದ ಕೆಲಸ ಆಗಬೇಕಾಗಿತ್ತು. ಅದು ಇಂದು ಆಗಿದೆ. ಸಂತೋಷ. ೧೯೫೧-೫೨ ರಲ್ಲೇ ನಾವು ಕಾರ್ಮಿಕ ರಂಗದಲ್ಲಿ ಕೆಲಸಮಾಡುವಾಗ ಕರ್ನಾಟಕ ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂಬ ಸಂಘವನ್ನು ರಚಿಸಿದ್ದೆವು.

5-30 P. M.

ಈ ಸಂದರ್ಭದಲ್ಲಿ ಕೆಲವು ಮಿತ್ರರ ಹೆಸರುಗಳನ್ನು ನೆನಪು ಮಾಡಿಕೊಳ್ಳಬಹುದು ಕುಮಾರ ವೆಂಕಣ್ಣ, ಕೆ. ಎಸ್. ಕುಮಾರ ಇಂತಹವರು ಆಗ ಕಾರ್ಮಿಕ ರಂಗದಲ್ಲಿ ಇದ್ದು ದುಡಿದಿದ್ದಾರೆ. ರಾಜ್ಯದ ಹೆಸರು ಕರ್ನಾಟಕ ಎಂದು ಹೇಳಿದರೆ ಜನರು ಹೆಚ್ಚಿನ ಸಂತೋಷಪಡುವುದಿಲ್ಲ. ಬಡತನದ ಕೊರತೆ ಏನು ಇದೆ ಅದನ್ನು ನಿವಾರಣೆ ಮಾಡತಕ್ಕ ವಿಷಯಗಳು ಬಂದಾಗ ಜನರು ಸಂತೋಷ ಪಡುತ್ತಾರೆ ಹೆಸರು ಬದಲಾವಣೆ ಆಗತಕ್ಕದ್ದಕ್ಕೆ ದ್ವೇಷ ಪಡುವುದಿಲ್ಲ. ಅದರಲ್ಲೂ ಕಾರ್ಮಿಕ ರಂಗದಲ್ಲಿರುವವರು ದ್ವೇಷ ಪಡುವುದಿಲ್ಲ. ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಕಾರ್ಮಿಕ ರಂಗದ ದೃಷ್ಟಿಯಿಂದ ಹೇಳುವುದಾದರೆ ಯಾವುದೇ ವ್ಯತ್ಯಾಸ ಇಲ್ಲದೆ ೧೯ ಜಿಲ್ಲೆಯಲ್ಲಿರತಕ್ಕ ಬಡ ಜನರ ಬಗ್ಗೆ ಅವರ ಕಷ್ಟವನ್ನು ಏಕರೂಪವಾಗಿ ನಿವಾರಣೆ ಮಾಡತಕ್ಕ ಯೋಜನೆಗಳು ಇರಬೇಕು ಅಂತಹ ಯೋಜನೆಗಳು ಇವೆಯೋ ಎಂದು ನಾನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ೨೫ ವರ್ಷಗಳಿಂದ ಅಂತಹ ಯೋಜನೆಗಳನ್ನು ನಾವು ಎದುರು ನೋಡಲು ಸಾಧ್ಯವಾಗಿಲ್ಲ. ಈಗ ಕರ್ನಾಟಕ ಹೆಸರು ಇಡುವ ಸಂದರ್ಭದಲ್ಲಿಯಾದರೂ ಕರ್ನಾಟಕ ೩ ಕೋಟಿ ಜನರ ಕಷ್ಟಗಳನ್ನು ಸಾಧ್ಯವಾದಷ್ಟು ನಿವಾರಣೆಯಾಗುವ ದೃಷ್ಟಿಯಿಂದ ಕೆಲಸ ಮಾಡಬೇಕು. ಆಡಂಬರದಿಂದ ಅಧಿಕಾರವನ್ನು ನಡೆಸಬಾರದೆಂದು ನಾನು ಸಲಹೆ ಮಾಡುತ್ತೇನೆ. ಸಾರ್ವಜನಿಕ ಹಾಗೂ ಮುನಿಸಿಪಾಲಿಟಿಗಳು ತಮ್ಮ ಫಂಕ್ಷನ್ ನಡೆಸುವಾಗ ೧೫—೨೦ ಸಾವಿರ ರೂಪಾಯಿ ಖರ್ಚು ಮಾಡಿ ಫಂಕ್ಷನ್ ನಡೆಸುತ್ತಾರೆ. ಅಷ್ಟು ಖರ್ಚು ಮಾಡುವದು ಅಗತ್ಯ ಇಲ್ಲ. ಕರ್ನಾಟಕದ ಬಡ ಜನತೆಗೋಸ್ಕರ ತ್ಯಾಗ ಮಾಡಬೇಕು ಅನವಶ್ಯಕವಾದ ಖರ್ಚುಗಳನ್ನು ಮಾಡದೇ ಹಣ ಉಳಿಸಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ಒಂದು ವಿಷಯ ನೆನಪು ಬರುತ್ತದೆ. ನಮಗೆ ಕಳುಹಿಸಿದ ಕವರುಗಳನ್ನು ವಾಪಸು ಕಳುಹಿಸಬೇಕೆಂದು ಸರ್ಕ್ಯುಲರ್ ಬಂದಿದೆ. ಅದನ್ನು ಕಳುಹಿಸುತ್ತೇನೆ. ನಮಗೆ ಆರೀತಿ ಉಪದೇಶ ಮಾಡುವುದಲ್ಲವೆ ಮಂತ್ರಿಮಂಡಲದವರೂ ಕೂಡ ಮಿತವ್ಯಯ ದೃಷ್ಟಿಯಿಂದ ನಡೆಸಿಕೊಂಡು ಹೋದರೆ ಬಹುಶಃ ನಾವು ಇದುವರೆಗೂ ಕಾಣದೇ ಇರುವಂಥ ಅಭಿವೃದ್ಧಿಯನ್ನು ಮುಂದೆ ಜನ ಕಾಣುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಬಯಸುತ್ತೇನೆ. ಶ್ರೀಮಾನ್ ಹುಚ್ಚಮಾಸ್ತಿಗೌಡರು ಮದ್ರಾಸ್ ಪ್ರಾಂತ್ಯಕ್ಕೆ ಹೋಗಿ ಭಾಷಣ ಮಾಡಿ ಬಂದಿದ್ದಾರೆ. ಅದನ್ನು ನೆನೆಸಿಕೊಳ್ಳುವುದು ಒಳ್ಳೆಯದು. ಕನ್ನಡಿಗರಿಗೆ ಪಾಠಶಾಲೆಗಳಲ್ಲಿ ಸ್ಥಳವಿಲ್ಲ. ಕಟ್ಟಿಸಿಕೊಡಬೇಕೆಂದು ಅವರು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ಹಾಗೆಯೇ ಮೈಸೂರು ದೇಶದಲ್ಲಿ ಕರ್ನಾಟಕದಲ್ಲಿ ಹುಟ್ಟಿ ಬೆಳೆದಂಥ ಜನ ಎಲ್ಲೆಲ್ಲಿ ಜೀವನ ಮಾಡುತ್ತಾರೋ ಅವರ ಬಗ್ಗೆ ಚಿಂತನೆ ಇರಬೇಕು. ಡಾಕ್ಟರ್ಸ್ ಮತ್ತು ಇಂಜಿನೀಯರ್ಸ್ ಇತರೇ ಪ್ರಾಂತ್ಯಗಳಲ್ಲಿ ಜೀವನ ಮಾಡುತ್ತಿದ್ದಾರೆ. ಅಂತಹವರು ಇಲ್ಲಿಗೆ ಬಂದು ನೆಲಸಿ ಅವರನ್ನು ಗೌರವ ರೀತಿಯಲ್ಲಿ ಕಾಣತಕ್ಕ ಹೃದಯ ಪರಿವರ್ತನೆ ಸರ್ಕಾರದಲ್ಲಿ ಆಗಬೇಕು ಎನ್ನುವ ಅಭಿಲಾಷೆ ನಮಗಿದೆ. ಈ ಹೆಸರು ಬದಲಾವಣೆ ಮಾಡುವುದರ ಜೊತೆಗೆ ನಮ್ಮ ರಾಜ್ಯದಲ್ಲಿರುವ ಬಡತನವನ್ನು ಹೋಗಲಾಡಿಸಲು ನಿಶ್ಚಲ ಮನಸಿನಿಂದ ಪ್ರಯತ್ನ ಮಾಡದೇ ಇದ್ದರೆ ಕಳೆದ ೨೫ ವರ್ಷಗಳಲ್ಲಿ ಏನು ನಡೆಯಿತೋ ಅದು ಮುಂದೆಯೂ ನಡೆಯುತ್ತದೆ ಎಂದು ಹೇಳಬಯಸುತ್ತೇನೆ. ಈ ರೀತಿ ಬಡತನ ಹೋಗಲಾಡಿಸುವುದಕ್ಕೆ ಸರ್ವ ಪ್ರಯತ್ನವನ್ನೂ ಮಾಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ ಬೈರೇಗೌಡ; (ವೇಮಗಲ್).—ಸನ್ಮಾನ್ಯ ಅಧ್ಯಕ್ಷರೆ, ಈವೊತ್ತು ಈ ಸಭೆಯ ಮುಂದೆ ಮಾನ್ಯಮಂತ್ರಿಗಳು ಮಂಡಿಸಿರತಕ್ಕ ನಿರ್ಣಯವನ್ನು ನಾನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ. ಹಿಂದೆ ಮಾತನಾಡಿರತಕ್ಕ ಅನೇಕ ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ನನ್ನ ಅಭಿಪ್ರಾಯ ಹೇಳಬೇಕಾದರೆ ಈವೊತ್ತು ಹೆಸರು ಬದಲಾಯಿಸುವುದು ಅಂಥ ದೊಡ್ಡ ವಿಷಯವಲ್ಲ. ಇದು ಕ್ರಾಂತಿಕಾರಕವಾದಹೆಜ್ಜೆ ಎಂದು ನಾನು ಹೇಳುವುದಿಲ್ಲ. ಇದು ಯಾವತ್ತೋ ಆಗಬೇಕಾಗಿತ್ತು. ೧೯೫೬ನೇ ಇಸವಿಯಲ್ಲಿ ಮೈಸೂರು ರಾಜ್ಯ ಯಾವಾಗ ದೊಡ್ಡದಾಯಿತ್ತೋ ಆವೊತ್ತೇ ಆಗಬೇಕಾಗಿತ್ತು. ಅಲ್ಲಿಂದ ಇಲ್ಲಿಯವರೆಗೆ ತಮ್ಮ ಸ್ವಾರ್ಥವನ್ನು ಮತ್ತು ಸ್ವಾರ್ಥ ರಾಜಕೀಯವನ್ನು

(ಶ್ರೀ ಸಿ. ಬೈರೇಗೌಡ)

ಬೆಳೆಸುವುದಕ್ಕೆ ಇದನ್ನು ನೆಪವಾಗಿ ಉಪಯೋಗಿಸಿಕೊಂಡು ಬಂದಿರುವುದು ಕರ್ನಾಟಕ ದೌರ್ಭಾಗ್ಯ. ಫ್ಯೂಡಲ್ ಪಾಳೆಗಾರ ಪದ್ಧತಿ ಈಗ ಮಾಯವಾಗಿದೆ. ಅದಕ್ಕೆ ಅಂಟಿಕೊಂಡಿರತಕ್ಕ ವೆಸ್ಟೆಡ್ ಇಂಟರೆಸ್ಟ್ ನಾಶವಾಗಬೇಕು ಎನ್ನುವುದು ಸಹಜವಾಗಿ ಇದೆ. ವೆಸ್ಟೆಡ್ ಇಂಟರೆಸ್ಟ್ ಏನು ಇತ್ತು ಅದು ಈಪೊತ್ತಿನ ದಿವಸ ಹೋಗುತ್ತಿದೆ. ಇದು ಸಂತೋಷಕರವಾದ ವಿಷಯ. ಈ ಸಂದರ್ಭದಲ್ಲಿ ಕನ್ನಡ ನಾಡು, ಕರ್ನಾಟಕ ಯಾವ ರೀತಿ ಇರಬೇಕು ಎನ್ನುವುದನ್ನು ವಿಸ್ತಾರವಾಗಿ ಬಹಳ ಜನ ಹೇಳಿದ್ದಾರೆ. ಕನ್ನಡನಾಡಿನಲ್ಲಿ ನಿರುದ್ಯೋಗ ಸಮಸ್ಯೆ, ಬಡತನ ಸಮಸ್ಯೆ ಸಮಾಜದಲ್ಲಿರತಕ್ಕ ಏರುಪೇರುಗಳು ಏನು ಇವೆ ಆ ಸಮಸ್ಯೆಗಳನ್ನು ಕೂಡ ಬಗೆಹರಿಸುವ ಒಂದು ಜವಾಬ್ದಾರಿ ನಮ್ಮ ಮೇಲೆ ಇದೆ. ಆ ಜವಾಬ್ದಾರಿಯನ್ನು ವಹಿಸತಕ್ಕ ಕಾಲದಲ್ಲಿ ೨೫ ವರ್ಷಗಳಿಂದ ರಾಜ್ಯದಲ್ಲಿ ಇರುವಂತಹ ಜಾತಿವಾದ ಮತ್ತು ಫ್ಯೂಡಲ್ ಟೈಪ್ ಆಫ್ ಎಕ್ಸ್‌ಪ್ಲಾಯಿಟೇಷನ್ ಏನುಂಟೋ ಇವಕ್ಕೆ ಮಂಗಳ ಗೋಲು ಹಾಕಿ ವೈಜ್ಞಾನಿಕ ರೀತಿಯಲ್ಲಿ ಸಮಾಜವಾದದ ಆಧಾರದ ಮೇಲೆ ಸಮಾಜ ರಚನೆ ಮಾಡಲು ತಮ್ಮ ಅಧಿಕಾರವನ್ನು ಉಪಯೋಗಿಸಬೇಕು ಎಂದು ಈ ಸಂದರ್ಭದಲ್ಲಿ ಮಂತ್ರಿಮಂಡಲಕ್ಕೆ ಸೂಚನೆ ಕೊಡಬಯಸುತ್ತೇನೆ. ಕನ್ನಡ ರಾಜ್ಯದ ಮಂತ್ರಿಮಂಡಲ ಚನ್ನಾಗಿ ಕೆಲಸ ಮಾಡಬೇಕು. ಕೆಲವು ದಿವಸಗಳ ಹಿಂದೆ ಪ್ರಜಾವಾಣಿ ಪತ್ರಿಕೆಯಲ್ಲಿ ಮಾನ್ಯ ಮಂತ್ರಿಗಳು ಗುಲ್ಬರ್ಗಾಕ್ಕೆ ಹೋದಾಗ ರಾತ್ರಿ ಸಂಚಾರ ನಡೆಸಿದ ವಿಚಾರ ಭೂಷಣದಲ್ಲಿ ಬಂದಿತ್ತು. ಆ ರೀತಿಯ ಸುದ್ದಿಗಳಿಗೆ ಮಂತ್ರಿಮಂಡಲದಲ್ಲಿ ಇರತಕ್ಕ ಸದಸ್ಯರುಗಳು ಅವಕಾಶ ಕೊಡದ ಹಾಗೆ ಎಚ್ಚರಿಕೆ ವಹಿಸಬೇಕು ಎಂದು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಈ ರಾಜ್ಯದ ೩ ಕೋಟಿ ಜನರು ಮಾತನಾಡತಕ್ಕ ಭಾಷೆಯು ಸಾಹಿತ್ಯಕ್ಕೆ ಪ್ರಧಾನ ಸ್ಥಾನ ಇದೆ. ಆ ಪ್ರಧಾನ ಸ್ಥಾನವನ್ನು ಪಡೆದಿದ್ದ ಕನ್ನಡ ಸಾಹಿತ್ಯ ಪರಿಷತ್ತು ೩ ಕೋಟಿ ಜನರ ಉಸಿರು ಆಗಿದೆ. ಈ ಕನ್ನಡ ಸಾಹಿತ್ಯ ಪರಿಷತ್ತು ಒಂದು ಸಣ್ಣ ಕಟ್ಟಡದಲ್ಲಿ ಇದೆ. ಅದಕ್ಕೆ ವಿಧಾನಸೌಧದಂಥ ದೊಡ್ಡ ಕಟ್ಟಡ ಕಟ್ಟಿ ಕನ್ನಡ ಸಾಹಿತ್ಯವನ್ನು ಎಲ್ಲಾ ವಿಧದಲ್ಲಿಯೂ ಕೂಡ ಸರ್ವಾಂಗಸುಂದರವಾಗಿ ಬೆಳೆಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಕನ್ನಡ ಸಾಹಿತ್ಯ ಪರಿಷತ್ತಿಗೆ ಹೆಚ್ಚಿನ ಪ್ರಾಧಾನ್ಯತೆ ಮತ್ತು ಹಣದ ಸೌಲಭ್ಯವನ್ನು ಒದಗಿಸಿಕೊಡಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ ಅಷ್ಟೇ ಅಲ್ಲದೆ ಈಪೊತ್ತಿನ ದಿವಸ ನಮ್ಮ ರಾಜ್ಯ ಅಲ್ಲದೆ ಇತರೇ ರಾಜ್ಯಗಳಲ್ಲೂ ಕೂಡ ಕನ್ನಡಿಗರು ನೆಲೆಸಿದ್ದಾರೆ. ಮದ್ರಾಸಿನಲ್ಲಿ ಇದ್ದಾರೆ, ಡೆಲ್ಲಿಯಲ್ಲಿ ಇದ್ದಾರೆ. ಬೊಂಬಾಯಿಯಲ್ಲಿ ಇದ್ದಾರೆ ಎಲ್ಲಾ ಕಡೆಯೂ ಕನ್ನಡಿಗರು ನೆಲೆಸಿದ್ದಾರೆ. ಅವರ ಮಾತೃ ಭಾಷೆಯಲ್ಲಿಯೇ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಬೇಕು ಎಂದರೆ ಅದು ಸಾಧ್ಯವಾಗುತ್ತಾ ಇಲ್ಲ. ಆದರೆ ಈ ಹೊತ್ತು ನಮ್ಮ ರಾಜ್ಯದಲ್ಲಿ ನಾವು ಪ್ರಾಥಮಿಕ ಪಾಠಶಾಲೆಗಳನ್ನು ಯಾವ ರೀತಿ ತೆರೆಯುತ್ತಿದ್ದೇವೆ, ಇನ್ನೂ ಉತ್ತಮವಾದ ಸವಲತ್ತನ್ನು ಕಲ್ಪಿಸುತ್ತಿದ್ದೇವೆ, ಅದೇ ರೀತಿಯಲ್ಲಿ ಹೊರನಾಡಿನಲ್ಲಿರುವ ಕನ್ನಡಿಗರಿಗೂ ವಿದ್ಯಾಭ್ಯಾಸದ ಸೌಲಭ್ಯವನ್ನು ಒದಗಿಸುವಂಥ ಜವಾಬ್ದಾರಿ ಆಯಾ ರಾಜ್ಯ ಸರ್ಕಾರಗಳಲ್ಲಿ ಕೂಡ ಇರಬೇಕು. ಅವರು ಅಂಥ ಒಂದು ಸೌಲಭ್ಯವನ್ನು ಒದಗಿಸದೆ ಇದ್ದರೆ ಖಂಡಿತವಾಗಿಯೂ ಕೂಡ ನಮ್ಮ ಕರ್ನಾಟಕ ಮಂತ್ರಿಮಂಡಲ ಅಥವಾ ಕರ್ನಾಟಕ ಸರ್ಕಾರ ಅಂಥ ಜವಾಬ್ದಾರಿಯನ್ನು ಹೊರಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಹಳೇ ಮೈಸೂರಾಗಿ ಇದ್ದದ್ದು ಈ ಹೊತ್ತು ವಿಶಾಲ ಮೈಸೂರಾಗಿ ವಿಶಾಲ ಕರ್ನಾಟಕವಾಗಿರುವುದನ್ನು ನೋಡುತ್ತಿದ್ದೇವೆ. ೧೯೫೬ನೇ ಇಸವಿಯಲ್ಲಿ ಬಹಳ ತೀವ್ರವಾಗಿ ಹಳೇ ಮೈಸೂರು ಹಾಗೆಯೇ ಉಳಿಯಬೇಕು, ಕರ್ನಾಟಕ ಎಂದು ದೊಡ್ಡದಾಗಿ ಆಗಬಾರದು ಎಂದು ದೊಡ್ಡ ಗುಂಪುಗಳು, ಘರ್ಷಣೆಗಳಿಗಾಗಿ, ಬೆಂಗಳೂರಿನಲ್ಲಿ ಲಾಠಿಚಾರ್ಜ್ ಆಗಿ, ಟಿಯರ್‌ಗ್ಯಾಸ್ ಷೆಲ್ಸ್ ಕೂಡ ಉಪಯೋಗಿಸಿದರು. ಬಹಳ ದೊಡ್ಡದಾಗಿ ಗಲಭೆ ನಡೆಯಿತು. ಆಗ ನಾನು ವಿದ್ಯಾರ್ಥಿಯಾಗಿದ್ದೆ. ಆಗ ನಮ್ಮ ನಾಯಕರು ಕೆಲವರು ಮಾಡುತ್ತಿದ್ದುದ್ದನ್ನು ನೋಡಿ ನನಗೆ ನಗು ಕೂಡ ಬರುತ್ತಿತ್ತು. ಎಂಥ ವಿಷಯಕ್ಕೆ ಏನು ಕೆಲಸ ಮಾಡುವುದಕ್ಕೆ ಹೊರಟಿದ್ದಾರೆ ಎಂದು ಆಶ್ಚರ್ಯವಾಗುತ್ತಿತ್ತು. ವೈಜ್ಞಾನಿಕವಾಗಿ ನಡೆಯಬೇಕಾದುದಕ್ಕೆ ಯಾರೇ ಆಗಲಿ ಅಡ್ಡಿ ಇರಬಾರದು. ಆಗಿನ ಸಂದರ್ಭದಲ್ಲಿ ಶ್ರೀ ಕೆ. ಹನುಮಂತಯ್ಯನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು. ಅವರು ದಿಟ್ಟ ನಿಲುವೆಯನ್ನು ತೆಗೆದುಕೊಂಡು, ದಿಟ್ಟ ಹೆಜ್ಜೆಯನ್ನು ಇಟ್ಟು ಕರ್ನಾಟಕವಾಗುವುದನ್ನು ನೋಡಬೇಕೆಂದಿದ್ದ ಕಾಲದಲ್ಲಿ ಅವರು ಮುಖ್ಯಮಂತ್ರಿ ಪದವಿಯನ್ನು ಬಿಡಬೇಕಾಯಿತು. ಮೈಸೂರು ದೊಡ್ಡದಾಗಿ ಕರ್ನಾಟಕವಾಯಿತು. ಈಗ ಮೈಸೂರು ಎನ್ನುವ ಹೆಸರನ್ನು ಬದಲಾಯಿಸಿ ಕರ್ನಾಟಕ ಎನ್ನುವ ಹೆಸರನ್ನು ಇಡಲಾಗುತ್ತಿರುವ ಈ ಸಮಯದಲ್ಲಿ ಅವರು ರೈಲ್ವೆ ಮಂತ್ರಿ ಪದವಿಯನ್ನು ಬಿಟ್ಟು ಬಂದರು. ಈ ರೀತಿ ಆಗಬಾರದಾಗಿತ್ತು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಸುತ್ತೇನೆ. ೨೫ ವರ್ಷಗಳಲ್ಲಿ ಯಾವ ರೀತಿ ಜಾತೀಯವಾದ, ಯಾವ ರೀತಿ ಒಂದು ಕೋಮು ಇನ್ನೊಂದು ಕೋಮನ್ನು ತುಳಿಯುವಂಥ ಮನೋಭಾವ ಬೆಳೆದು ಬಂದಿದೆ ಅದು ಇನ್ನು ಮೇಲಾದರೂ ಆಗದೆ ಇರಲಿ ಒಂದು ಕೋಮು ಇನ್ನೊಂದು ಕೋಮಿನವರನ್ನು ಅಥವಾ ಒಂದು ಭಾಗದ ಜನರು ಇನ್ನೊಂದು ಭಾಗದ ಜನರನ್ನು ತುಳಿಯುವ ಇರತಕ್ಕ ವ್ಯವಸ್ಥೆ ಇಲ್ಲ ಆಗಲಿ ಎಂದು ಹೇಳುತ್ತೇನೆ.

ಸಣ್ಣದಾಗಿದ್ದ ಮೈಸೂರು ದೊಡ್ಡದಾಗಿ ಕರ್ನಾಟಕವಾಗಬೇಕಾಗಿದ್ದರೆ, ದಿವಂಗತ ಎಸ್. ಗೋಪಾಲ ಗೌಡರು ಬಹಳ ಮಟ್ಟಿಗೆ ಶ್ರಮಿಸಿದ್ದಾರೆ. ೧೯೫೬ನೇ ಇಸವಿಯಲ್ಲಿ ಚಳುವಳಿ ನಡೆದಾಗ ಅವರ ಜೀವಕ್ಕೇ ಹಾನಿ ಇದ್ದ ಪರಿಸ್ಥಿತಿ ಇತ್ತು. ಅಂಥ ಕಹಿ ಘಟನೆಯನ್ನು ನಾನು ಕೂಡ ನೋಡಿದ್ದೇನೆ. ಕೈಕಾಲು ಮುರಿಯುವಂಥ ಉದ್ರೇಕ ಪರಿಸ್ಥಿತಿ ಇತ್ತು; ದೊಡ್ಡ ಚಳುವಳಿ ಕೂಡ ಇತ್ತು. ಶ್ರೀ ಗೋಪಾಲ ಗೌಡರು ದಿಟ್ಟ ನಿಲುಮೆಯನ್ನು ತಾಳಿ, ದಿಟ್ಟ ಹೆಜ್ಜೆಯನ್ನು ಇಟ್ಟು ಕರ್ನಾಟಕವಾಗುವುದಕ್ಕೆ ಬಹಳವಾಗಿ ಶ್ರಮಿಸಿದರು. ಮೈಸೂರು ವಿಶಾಲ ಮೈಸೂರಾದ ಮೇಲೆಯೂ ಈ ರಾಜ್ಯಕ್ಕೆ ಕರ್ನಾಟಕ ಎನ್ನುವ ಹೆಸರನ್ನು ಇಡಬೇಕು ಎಂದು ಎಲ್ಲ ಸಂದರ್ಭಗಳಲ್ಲಿಯೂ ಕೂಡ, ರಾಜ್ಯದ ಹೆಸರನ್ನು ಬದಲಾವಣೆ ಮಾಡುವುದಕ್ಕೆ ತಮ್ಮ ಶಕ್ತಿ ಮೀರಿ ದುಡಿದಿದ್ದಾರೆ. ಈ ಸಭಾಂಗಣದಲ್ಲಿ ಮಹಾತ್ಮ ಗಾಂಧಿ, ಜವಹರಲಾಲ ನೆಹರೂ, ರಾಜೇಂದ್ರ ಪರಸಾದ್, ಡಾಕ್ಟರ್ ರಾಧಾಕೃಷ್ಣನ್ ಮತ್ತು ವಲ್ಲಭಾಯಿ ಪಟೇಲ್ ಅವರ ಭಾವಚಿತ್ರಗಳಿವೆ. ಮೈಸೂರಿನವರದು ಯಾವ ಭಾವಚಿತ್ರಗಳೂ ಇಲ್ಲ. ಮೈಸೂರಿಗಾಗಿ ದುಡಿದವರು ಯಾರು ಕೂಡ ಇಲ್ಲವೇ ಎನ್ನುವ ಅನುಮಾನ ಉಂಟಾಗುತ್ತಿದೆ. ಶ್ರೀ ಗೋಪಾಲ ಗೌಡರ ನಮ್ಮ ರಾಜ್ಯಕ್ಕಾಗಿ ಹೆಚ್ಚಾಗಿ ದುಡಿದವರು ಮತ್ತು ಕರ್ನಾಟಕವಾಗಬೇಕು ಎನ್ನುವ ವಿಚಾರದಲ್ಲಿ ಹೋರಾಟ ಮಾಡಿದವರು. ಅವರು ಸಮಾಜವಾದಿ ಧುರೀಣರಾಗಿದ್ದವರು. ಅಂಥವರ ಭಾವಚಿತ್ರವನ್ನು ಈ ಸಭಾಂಗಣದಲ್ಲಿ ಇಡುವುದಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಒತ್ತಾಯ ಮಾಡಿ ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

MR. DEPUTY SPEAKER —The discussion on this Resolution will continue tomorrow. Now we shall take up the next item. The Hon. Minister for Agriculture may move the official resolution.

OFFICIAL RESOLUTION.

Re —the Cotton Transport (Mysore) (Amendment) Rules 1972

SRI K H. PATIL (Minister for Agriculture and Forests) I move.—"That the draft of the Rules called the Cotton Transport (Mysore) (Amendment) Rules, 1972 which it is proposed to make in exercise of the powers conferred by Section 7 of the Cotton Transport Act, 1923 (Central Act 3 of 1923), be approved."

MR. DEPUTY SPEAKER. Resolution moved.—"That the draft of the Rules called the Cotton Transport (Mysore) (Amendment) Rules, 1972 which it is proposed to make in exercise of the powers conferred by Section 7 of the Cotton Transport Act, 1923 (Central Act 3 of 1923) be approved."

†ಶ್ರೀ ಕೆ. ಎಚ್. ಪಾಟೀಲ್.— ಇದರಲ್ಲಿ ಹೆಚ್ಚಿಗೆ ಮಾತನಾಡತಕ್ಕದ್ದು ಏನೂ ಇಲ್ಲ. ಹತ್ತಿಯೊಳಗೆ ಯಾವುದೇ ರೀತಿಯಿಂದ ಮಿಕ್ಸ್‌ಚರ್ ಆಗಬಾರದು, ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ತರುವಾಗ ನಿಯಂತ್ರಣಗೊಳಿಸುವುದಕ್ಕೆ ಕೆಲವು ನಿರ್ಬಂಧಗಳನ್ನು ಮಾಡುವ ಸಲುವಾಗಿ ಈಗಾಗಲೇ ಸದನದ ಮುಂದೆ ಮಂಡಿಸಿದ್ದ ವಿಷಯಕ್ಕೆ ತಮ್ಮೆಲ್ಲರ ಒಪ್ಪಿಗೆಯನ್ನು ಕೊಟ್ಟಿದ್ದೀರಿ. ಈ ಠರಾವು ಅಧಿಕೃತವಾಗಿ ಬೇಕಾಗುತ್ತದೆ ಎಂದು ತಮ್ಮ ಎದುರಿಗೆ ಇಟ್ಟಿದ್ದಾಗಿದೆ. ತಾವೆಲ್ಲರೂ ಇದಕ್ಕೆ ಬೆಂಬಲವನ್ನು ಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ

MR. DEPUTY SPEAKER. Now I will put the Resolution to the vote of the House. The question is:—"That the draft of the Rules called the Cotton Transport (Mysore) (Amendment) Rules, 1972 which it is proposed to make in exercise of the powers conferred by Section 7 of the Cotton Transport Act 1923 (Central Act 3 of 1923), be approved."

The Resolution was adopted

MR. DEPUTY SPEAKER.—Now we will take up half-an-hour discussion. Hon. Member Sri J.L. Kabadi to raise the discussion.

Half-an-Hour Discussion arising out of replies to Question No. 82

Re: Financial Assisstant to SCS/STs etc. for digging Irrigation wells and Installation of Pumpsets

†ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ) ಅಧ್ಯಕ್ಷರೇ, ಅನುಸೂಚಿತ ಜಾತಿ ಅನುಸೂಚಿತ ಆದಿಮ ಜಾತಿ, ಅಲೆಮಾರಿ ಅರೆ ಅಲೆಮಾರಿ ಜಾತಿಗಳಿಗೆ ಸಂಬಂಧಪಟ್ಟಂತೆ ಮೈಸೂರು ಸರ್ಕಾರದಲ್ಲಿ ನೀರಾವರಿ ಬಾವಿಗಳನ್ನು ತೋಡಿಸಲು ಮತ್ತು ಪಂಪ್‌ಸೆಟ್‌ಗಳನ್ನು ಜೋಡಿಸಲು ಧನ ಸಹಾಯ ಮತ್ತು ಸಾಲದ ರೂಪದಲ್ಲಿ ಹಣವನ್ನು ಕೊಡಬೇಕೆಂದು ಏನೊಂದು ಯೋಜನೆಯನ್ನು ಕೈಕೊಂಡಿದ್ದರು ಆದರ ಮೇಲೆ ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ. ಆ ಪ್ರಶ್ನೆಗೆ ಸರಿಯಾದ ಮಾಹಿತಿ ಈ ಸರ್ಕಾರದಿಂದ ದೊರಕದೆ ಇರುವುದಕ್ಕೆ ನಾನು ಧನ ಸಹಾಯದ ಬಗ್ಗೆ ಸವಿಸ್ತಾರವಾಗಿ ಹೇಳಿಕೆ ನೀಡಬೇಕು ಎನ್ನುವುದಕ್ಕಾಗಿ ಅರ್ಧ ಗಂಟೆ ಚರ್ಚೆಯನ್ನು ಕೇಳಿದೆ ಅದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಮೊದಲು ನಾನು ವಂದಿಸುತ್ತೇನೆ.

ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಸರ್ಕಾರದವರು ಪ್ರಾವಿಷನ್ ಮಾಡಿದ್ದಾರೆ. ಇದರಂತೆ ಈ ಸಹಾಯವನ್ನು ಷೆಡ್ಯೂಲ್ ಕ್ಯಾಸ್ಟ್‌ನವರಿಗೆ, ಷೆಡ್ಯೂಲ್ ಟ್ರೈಬ್‌ನವರಿಗೆ, ಡೀ ನೋಟಿಫೈಡ್ ನೊಮ್ಯಾಡಿಕ್ ಸೆಮಿ ನೊಮ್ಯಾಡಿಕ್ ಟ್ರೈಬ್ಸ್‌ಗೆ ಧನ ಸಹಾಯ ಮಾಡುವುದಕ್ಕೆ ಡೆಪ್ಯುಟಿ ಕಮೀಷನರ್ ಅರ್ಜಿಗಳನ್ನು ಕರೆಯಬೇಕು, ಹರಿಜನರಿಗೆ ಈ ಸವಲತ್ತುಗಳನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರವರ ಆಫೀಸಿನಿಂದ ಎನ್ನುವ ಒಂದು ಸರ್ಕ್ಯುಲರ್ ಎಲ್ಲ ಡೆಪ್ಯುಟಿ ಕಮೀಷನರುಗಳಿಗೂ ಹೋಯಿತು. ಅದು ಡೆಪ್ಯುಟಿ ಕಮೀಷನರುಗಳಿಗೆ ಹೋದ ತಕ್ಷಣ ಅವರು ಜಿಲ್ಲೆಯಲ್ಲಿರುವ ಎಲ್ಲ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳಿಗೂ ಒಂದು ನಿರ್ದೇಶನವನ್ನು ಕೊಟ್ಟರು. ಅವರ ಪತ್ರದಲ್ಲಿ ಈ ರೀತಿಯಾಗಿ ಹೇಳಿದ್ದಾರೆ —

"A prov'sion is available with the Director of Social Welfare, Bangal.re for grant of assistance for sinking of Irrigat'on Wells and installat on of pumpsets under the schemes for the welfare of Scheduled Castes/Scheduled Tribes/Denotified Tribes/Nomadic Tribes and Semi Nomadic Tribes during the current year *i.e.* 1970-71. The scheme will assiet both individuals and also group cultivators."

ಈ ಬೆನಿಫಿಟ್ ಕೊಡಬೇಕಾದರೆ, ಇಂಡಿವಿಜ್ಯುಯಲ್ಸ್‌ಗೂ ಹತ್ತು ಸಾವಿರ ರೂಪಾಯಿ ಗ್ರೂಪ್ಸ್ ಹತ್ತು ಸಾವಿರ ರೂಪಾಯಿ ಕೊಟ್ಟರು. ಇದನ್ನು ೨೦ ಇನ್‌ಸ್ಟಾಲ್‌ಮೆಂಟುಗಳಲ್ಲಿ ಕೊಡುವುದು ಎಂದು ಯೋಜನೆ ಮಾಡಿದೆ. ಇಂಡಿವಿಜ್ಯುಯಲ್ಸ್ ಬೆನಿಫಿಟ್‌ಗಾಗಿ ಕೊಡುವ ಯೋಜನೆಗೆ ೫೦ ಪರ್ಸೆಂಟ್ ಸಬ್ಸಿಡಿ ಎಂದು ಕೊಡುತ್ತಾರೆ. ೧೦೦ಕ್ಕೆ ೭೫ಭಾಗ ಸಬ್ಸಿಡಿ ಕೊಡುತ್ತಾರೆಂದು ಅರ್ಜಿಯನ್ನು ಕರೆದರು ಅರ್ಜಿಯನ್ನು ಕರೆಯುವುದೇ ನಮ್ಮ ರಾಜ್ಯದಲ್ಲಿ ಹರಿಜನ ಗಿರಿಜನ ಬಾಂಧವರಿಗೆ ಸಂತೋಷದ ಸಂಗತಿ ಎಂದು ತಿಳಿದುಕೊಂಡು ಬಹಳ ಆನಂದವಾಗಿ ಸಾಕಷ್ಟು ಅರ್ಜಿಗಳನ್ನು ಕಳುಹಿಸಿದರು. ಆದರೆ ಸರ್ಕಾರದವರು ಒಂದು ಕಂಡಿಷನ್ ಹಾಕಿದರು. ಆ ಕಂಡೀಷನ್ ಏನೆಂದರೆ .—

1 Records of Rights
2. Certificate of Encumbrance of property for 12 years.
3. Genealogical tree
4. Plans and Estimates for sinking of irrigation wells and installation of pumpsets which could be done by the appropriate authority as in the case of Taluka Development Board works.
5. Caste Certificate issued by the Block Development Officer

6. Occupationa land Annual Income of the beneficiary from all sources.

7. Inspection report of the B'ock Development Officer and Agricultural Extension Officers indicationg the feasibility of sinking the well and the extent of land that can be irriga ed and the probable amount required for sinking irrigation well and fixing pumpsets.

8. Land sketch showing survey numbers and spots selected and the proposed area to be brought under irrigation may be enclsed A This is a very good scheme and calls for your personal attention, ಎಂದೂ ಹೇಳಿ ಈ ಎಲ್ಲಾ ವಿಷಯಗಳನ್ನು ಒದಗಿಸಬೇಕು ಎಂದು ಅರ್ಜಿಗಳನ್ನು ಕರೆದರು ಇಷ್ಟೊಂದು ಮಾಡಬೇಕಾದರೆ ಬಡಪಾಯಿ ಹರಿಜನರು ಯಾರ ಯಾರ ಹತ್ತಿರ ಪರದಾಡಬೇಕು ? ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಅರ್ಜಿ ಕೊಟ್ಟು ಸಬ್ಸಿಡಿ ಬೇಗ ಸಿಕ್ಕಲಿ ಅಂತ ಅದಕ್ಕೆ ತಗಲುವಂಥ ೩೦-೩೫ ರೂಪಾಯಿ ಲಂಚ ಕೊಟ್ಟು ಕಷ್ಟಕ್ಕೆ ಒಳಪಟ್ಟ ನಿದರ್ಶನ ನೋಡಿದ್ದೇನೆ ನಮ್ಮಲ್ಲಿ ಸಾಕಷ್ಟು ಇದರ ಬಗ್ಗೆ ಹೆರಾಸ್‌ಮೆಂಟ್ ಆಯಿತು ಎಂದು ಗೊತ್ತಾಗಿದೆ ಅಲ್ಲದೆ ರಿಕಾರ್ಡ್ ಆಫ್ ರೈಟ್ಸ್ ತೆಗೆದುಕೊಳ್ಳಬೇಕಾದರೆ ಅದನ್ನು ತಾಲ್ಲೂಕಾಫೀಸಿಗೆ ತಲುಪಿಸಬೇಕಾದರೆ, ಅವರು ಬಹಳ ತೊಂದರೆಗೆ ಒಳಪಟ್ಟಿದ್ದಾರೆ. ಹರಿಜನರಿಗೆ ಇವತ್ತಿನ ದಿವಸ ಏತಕ್ಕೆ ಬೆನಿಫಿಟ್ ಸಿಕ್ಕಲಿಲ್ಲ ಎನ್ನುವ ಪ್ರಶ್ನೆ ಉದ್ಭವಿಸಿದಾಗ ಈ ಸದನದ ಮುಂದೆ ಈ ಪರಿಸ್ಥಿತಿಯನ್ನು ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳ ಯೋಜನೆಯಲ್ಲಿ ಈ ಸ್ಕೀಂ ಅನ್ನು ಕೈಬಿಟ್ಟಿದ್ದಾರೆ. ಎಂದು ಹೇಳಿದಂಥ ಮಾತು ವಿಷಾದಕರವಾದ ಸಂಗತಿ. ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ನಮ್ಮ ರಾಜ್ಯದ ಅಭಿವೃದ್ಧಿ ಮತ್ತು ಪಂಚಾಯಿತಿ ಸಮಾಜಕಲ್ಯಾಣ ಖಾತೆಯ ಮಂತ್ರಿಯಾಗಿರುವಾಗ ಈ ಸ್ಕೀಂ ಅನ್ನು ಪುನಃ ಜಾರಿಗೆ ತರಬೇಕು. ಮಹಾರಾಷ್ಟ್ರ ಸರ್ಕಾರದಲ್ಲಿಯೂ ಈ ಯೋಜನೆಯನ್ನು ಕೈಗೊಂಡಿದ್ದಾರೆ. ಹರಿಜನರಿಗಾಗಿ ಮತ್ತು ಗಿರಿಜನರಿಗಾಗಿ ಅಲೆಮಾರಿ ಜನಾಂಗದ ಸಲುವಾಗಿ ಈ ಯೋಜನೆಯನ್ನು ಕೈಗೊಂಡಿದ್ದಾರೆ. ಆಗಿನ ಸರ್ಕಾರ ೧೯ನೇ ಜನವರಿ ೧೯೭೦ನೇ ಇಸವಿಯಲ್ಲಿ ಈ ಸ್ಕೀಂನಿಂದ ಹಿಂದುಳಿದವರಿಗೆ ಅನುಕೂಲವಾಗುತ್ತದೆ. ಎನ್ನುವ ಸದುದ್ದೇಶದಿಂದ ತಂದು ಇದುವರೆಗೂ ಇದು ಕಾರ್ಯಗತವಾಗಿಲ್ಲ ಎಂದರೆ, ನನಗೆ ಬಹಳ ಖೇದ ಆಗುತ್ತದೆ. ಆಮೇಲೆ ಅನುಸೂಚಿತ ಜಾತಿ, ಆದಿವಾಸಿ ಜಾತಿಯ ಸಂಖ್ಯೆ ೫೦ ಲಕ್ಷದ ಮೇಲ್ಪಟ್ಟು ಇದೆ ಆರೆ ಅಲೆಮಾರಿ ಜನಾಂಗದವರು ೨೦ಲಕ್ಷದ ಮೇಲ್ಪಟ್ಟು ಒಟ್ಟು ೭೦ಲಕ್ಷ ಜನರಿದ್ದಾರೆ. ಇವರ ಜೀವನದ ಪ್ರಶ್ನೆ ಇದು, ಇಂಥಾದನ್ನು ಸರ್ಕಾರದವರು ಗಮನಿಸಿ ಇದಕ್ಕೆ ಎಷ್ಟು ಹಣ ಒದಗಿಸಿದರೂ ಅಡ್ಡಿ ಇಲ್ಲ ಈ ಸಮಸ್ಯೆಯನ್ನು ಬಗೆಹರಿಸಬೇಕು ಇವತ್ತು ಸರ್ಕಾರ ತನ್ನ ಕೈಯಿಂದ ಕೊಡಬೇಕಾಗಿಲ್ಲ. ಲ್ಯಾಂಡ್ ಡೆವೆಲಪ್‌ಮೆಂಟ್ ಬ್ಯಾಂಕಿನಿಂದ ಸಾಲ ಎತ್ತಿಯಾದರೂ ಕೊಡತಕ್ಕ ಸಬ್ಸಿಡಿ ನೇರವಾಗಿ ಹರಿಜನರಿಗೆ ಮುಟ್ಟಿದೆ, ನೀವೆ ಸರ್ಕಾರದವರು ಅವರಿಗೆ ತಲಪುವಂತೆ ಮಾಡಿದರೆ ಈ ಯೋಜನೆ ಯಶಸ್ವಿಯಾಗುತ್ತದೆ. ಆದ್ದರಿಂದ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೆ ಅವತ್ತು ತೆಗೆದುಕೊಂಡಂತೆ ಸ್ಕೀಂ ಏನು ಇದೆ ಅದನ್ನು ಪುನಃ ಜಾರಿಯಲ್ಲಿ ತರಬೇಕು. ಮತ್ತು ಅದಕ್ಕೆ ಬೇಕಾಗುವ ದುಡ್ಡನ್ನು ಒದಗಿಸಿ ಸಾಕಷ್ಟು ರೀತಿಯಲ್ಲಿ ಸಹಾಯ ಮಾಡಬೇಕು. ಅಲ್ಲದೆ ಅದರಲ್ಲಿರುವ ಕೆಲವೊಂದು ಕಾಲಂಗಳನ್ನು ಸಡಿಲಗೊಳಿಸುವುದು ಅತಿ ಮುಖ್ಯ. ಮಹಾರಾಷ್ಟ್ರ ಸರ್ಕಾರದವರು ತಂದಿರತಕ್ಕ ಯೋಜನೆಯಂತೆ ನಮ್ಮ ಸರ್ಕಾರದವರು ಸಹಿತ ೧೯೭೦ರಲ್ಲಿ ಸ್ಕೀಂ ಹಾಕಿ ಒಂದು ಪ್ರಾವಿಷನ್ ಏರ್ಪಾಡು ಮಾಡಿದರು ಅದೇಪ್ರಕಾರ ತಾವು ಇಲ್ಲಿಯೂ ತರುತ್ತೀರಿ ಎಂದು ನಾನು ತಿಳಿದುಕೊಂಡಿರುತ್ತೇನೆ ಅದರಲ್ಲಿಯೂ ಶ್ರೀಮಾನ್ ಮಲ್ಲಿಕಾರ್ಜುನಸ್ವಾಮಿಯವರು ಮಂತ್ರಿಗಳಾದಂಥ ಕಾಲದಲ್ಲಿ ಈ ಸ್ಕೀಂ ಅನ್ನು ಕೈಬಿಡುವುದಿಲ್ಲ ಎನ್ನುವ ಆತ್ಮವಿಶ್ವಾಸ ಇದೆ ಎಂದು ತಮ್ಮ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ. ಆದ್ದರಿಂದ ಈ ಯೋಜನೆಯನ್ನು ಪುನಃ ಜಾರಿಗೆ ತಂದು ಕೆಳದರ್ಜೆಯ ಜನರನ್ನು ಕಡೆಗಾಣಿಸದಂತೆ ಉಚ್ಚಮಟ್ಟದ ವಿಶಾಲ ರೀತಿಯ ಸೌಕರ್ಯ ಕೊಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ಆಶೆ ಪಡುತ್ತೇನೆ,

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸದಸ್ಯರಾದ ಕಬಾಡಿಯವರು ಹರಿಜನರ ಅಭಿವೃದ್ಧಿಯ ಬಗ್ಗೆ ಪ್ರಮುಖವಾದ ವಿಷಯವನ್ನು ಪ್ರಶ್ನೆಯ ರೂಪದಲ್ಲಿ ಕೇಳಿದರು. ಆದರೆ ಪ್ರಶ್ನೆಯ ರೂಪದಲ್ಲಿ ಸರಿಯಾಗಿ ಉತ್ತರ ದೊರಕಲಿಲ್ಲ ಎಂದು ಅರ್ಧ ಗಂಟೆ ಕಾಲ ಚರ್ಚೆ ಆಗಬೇಕು ಎಂದ ಇವತ್ತಿನ ದಿವಸ ಈ ವಿಷಯವನ್ನು ತೆಗೆದುಕೊಂಡಿದ್ದಾರೆ.

MR. DEPUTY SPEAKER.—Tho Hon ble Minister will reply, if there are any clarifications then hon members can raise them. There is no need for full fledged Debate ovre it

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.— ಹಿಂದೆ ನಾವು ಈ ಬಗ್ಗೆ ಚರ್ಚೆಯ ಸಮಯ ದಲ್ಲಿ ಈ ಪ್ರಶ್ನೆ ಎತ್ತಿದಾಗ ಅವಕಾಶ ಕೊಡಲಿಲ್ಲ. ನಾವು ಈ ವಿಷಯವನ್ನು ಪ್ರಸ್ತಾಪ ಮಾಡ ಬೇಕೆಂದಾಗ ಅಧ್ಯಕ್ಷರು ಅವರಿಗೆ ಕಳುಹಿಸಬೇಕು ಎಂದಿದ್ದಕ್ಕೆ, ಕಳುಹಿಸಿಕೊಟ್ಟಿದ್ದೇವೆ. ಆದ್ದರಿಂದ ಈಗ ನಮಗೆ ಈ ವಿಷಯದ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕೊಡದಿದ್ದರೆ ಹೇಗೆ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಮಾನ್ಯ ಸದಸ್ಯರು ಹಾಕಿದಂಥ ಪ್ರಶ್ನೆಗೆ ನಾನು ಅವತ್ತಿನ ದಿವಸ ಉತ್ತರ ಕೊಟ್ಟೆ ಅವರು ಈ ಬಗ್ಗೆ ಸರ್ಕಾರದ ಹುಕುಂ ಆಗಿದೆ ಎಂದು ಹೇಳಿದರು. ಅದು ಸರ್ಕಾರದ ಹುಕುಂ ಅಲ್ಲ, ಅದು ಡೈರೆಕ್ಟರ್ ಅವರು ಸರ್ಕಾರಕ್ಕೆ ಬರೆದ ಕಾಗದ ಅದೇ ಕಾಗದವನ್ನು ಎಲ್ಲಾ ಜಿಲ್ಲಾಧಿಕಾರಿ ಗಳಿಗೂ ಬರೆದು, ಆ ರೀತಿ ಸ್ಕೀಂ ಮಾಡಬೇಕು ಎಂದು ಆಯಿತು. ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಸರ್ಕಾರದವರು ಅದನ್ನು ಪರಿಶೀಲನೆಮಾಡಿ ಮಾಡುವುದಕ್ಕಾಗುವುದಿಲ್ಲ. ಎಂದು ಅಭಿಪ್ರಾಯ ಪಟ್ಟರು ಆದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಸದಸ್ಯರಾಗಿರತಕ್ಕವರು ಇದ್ದರೆ ಅವರಿಗೆ ಷೇರ್ ಕ್ಯಾಪಿಟಲ್ ೪೯–೫೦ ಪೈಸೆ ಅಷ್ಟು ಕೊಡತಕ್ಕದ್ದು. ಅದರ ಜೊತೆಗೆ ಅಡಿಷನಲು ಷೇರ್ ಕ್ಯಾಪಿಟಲ್ ೨೫೦ ರೂಪಾಯಿ ವರೆಗೆ ಕೊಟ್ಟು ಸಾಲವನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡೋಣ ಎಂದು ಒಂದು ತೀರ್ಮಾನ ತೆಗೆದುಕೊಂಡರು.

6–00 P.M.

೧೯೬೯–೭೦ ಅಂದರೆ ನಾಲ್ಕನೇ ಪಂಚವಾರ್ಷಿಕ ಯೋಜನೆ ಮೊದಲನೆ ವರ್ಷದಲ್ಲಿ ಸುಮಾರು ೨ ಲಕ್ಷ ೭೫ ಸಾವಿರ ರೂಪಾಯಿ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಮತ್ತು ಡಿನೋಟಿಫೈಡ್ ಟ್ರೈಬ್ಸ್‌ಗೆ ೧೫ ಸಾವಿರ ರೂಪಾಯಿ ಹಾಗೂ ನೊಮ್ಯಾಡಿಕ್, ಸೆಮಿ ನೋಮ್ಯಾಡಿಕ್ ಟ್ರೈಬ್ಸ್‌ಗೆ ೭೫ ಸಾವಿರ ರೂಪಾಯಿ ಗಳಷ್ಟು ಹಣವನ್ನು ಷೇರ್‌ಕ್ಯಾಪಿಟಲ್ ಹಾಗೂ ರಿಜಿಸ್ಟ್ರೇಷನ್ ಫೀ ವಗೈರೆಗಳಿಗಾಗಿ ಕೊಡಲಾಗಿದೆ. ಸನ್ಮಾನ್ಯ ಸದಸ್ಯರಾದಂಥ ಕಬಾಡಿಯವರು ಹೇಳಿದ ಪ್ರಕಾರ ಬಿಜಾಪುರ ಜಿಲ್ಲೆಯಿಂದ ಷೆಡ್ಯೂಲ್ಡ್ ಕಾಸ್ಟ್ಸ್ ಜನರಿಂದ ೫೪ ಅರ್ಜಿಗಳು, ಡಿನೋಟಿಫೈಡ್ ಟ್ರೈಬ್ಸ್‌ನಿಂದ ೧೭ ಅರ್ಜಿಗಳು ಮತ್ತು ನೋಮ್ಯಾಡಿಕ್, ಸೆಮಿ ನೋಮ್ಯಾಡಿಕ್ ಟ್ರೈಬ್ಸ್‌ನಿಂದ ೨ ಅರ್ಜಿಗಳು ಡೆಪ್ಯುಟಿ ಕಮೀಷನರ್‌ಗೆ ಬಂದು, ಸರ್ಕಾರಕ್ಕೂ ಕೂಡ ಬಂದಿದೆ. ಬ್ಲಾಕ್ ಡೆವಲಪ ಮೆಂಟ್ ಆಫೀಸರ್ಸ್ ಹತ್ತಿರ ಹೋಗಿ ಎನ್‌ಕಂಬರೆನ್ಸ್ ಸರ್ಟಿಫಿಕೇಟ್, ರೆಕಾರ್ಡ್ ಆಫ್ ರೈಟ್ಸ್ ಮುಂತಾದುವಕ್ಕೋಸ್ಕರ ಹಣ ಖರ್ಚುಮಾಡಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿಲ್ಲ ನೀವು ಉತ್ತರಕೊಡಿ, ಎಂದು ಮಾನ್ಯ ಸದಸ್ಯರು ಹೇಳುವರು. ಇದರ ಜೊತೆಗೆ ಮಹಾರಾಷ್ಟ್ರದಲ್ಲಿ ಒಂದು ಸ್ಕೀಮು ಇದೆ ಎಂದು ಕೂಡ ಹೇಳುತ್ತಿದ್ದಾರೆ. ನಮ್ಮ ಸೋಷಿಯಲ್ ವೆಲ್‌ಫೇರ್ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಮೇಲೆ ಚರ್ಚೆಮಾಡತಕ್ಕ ಕಾಲದಲ್ಲಿ ಇಂಥ ಸ್ಕೀಮು ಮಹಾರಾಷ್ಟ್ರದಲ್ಲೂ ಇದೆ ಎಂದು ಸನ್ಮಾನ್ಯ ಜಯಪ್ರಕಾಶ್‌ನಾರಾಯಣ್ ಹೇಳಿದರು, ಮಹಾರಾಷ್ಟ್ರದಲ್ಲಿ ಕೊಡತಕ್ಕ ಸಾಲದಲ್ಲಿ ಅರ್ಧ ಭಾಗ ಸಬ್ಸಿಡಿ, ಇನ್ನು ಅರ್ಧ ಭಾಗ ಸಾಲ. ಈ ಸಾಲವನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮುಖಾಂತರ ತೆಗೆದುಕೊಳ್ಳುವ ನಿಯಮ ಇದೆ. ಬಾವಿ ತೆಗೆದು, ಬಾವಿಯಲ್ಲಿ ನೀರು ಕಂಡಮೇಲೆ ಸಬ್ಸಿಡಿಯನ್ನು ಹರಿಜನ ರೈತರಿಗೆ ಕೊಡುವುದಕ್ಕೆ ಬದಲು ಆ ಹಣನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಕೊಡುವುದರಿಂದ ಅರ್ಧ ಸಾಲ ತೆಗೆದುಕೊಳ್ಳುವಾಗಲೇ ತೀರಿಸಿದ ಹಾಗೆ ಆಗುತ್ತದೆ. ಉಳಿದ ಹಣವನ್ನು ಜಮೀನಿನಿಂದ ಬರತಕ್ಕ ಉತ್ಪತ್ತಿಯಲ್ಲಿ ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಸ್ಕೀಮನ್ನು ಮಾಡಿದ್ದಾರೆ ಎಂದು ನನಗೆ ವಿಚಾರ ಮಾಡಿದಾಗ ತಿಳಿದುಬಂದಿದೆ. ಮಹಾರಾಷ್ಟ್ರದಲ್ಲಿ ಯಾವ ರೀತಿ ಯೋಜನೆ ಇದೆ ಅದನ್ನು ತರಿಸಿಕೊಳ್ಳಿ ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ. ಮಹಾರಾಷ್ಟ್ರದ ಯೋಜನೆ ಪ್ರಕಾರ ನಿಜವಾಗಿ ಹರಿಜನರಿಗೆ ತಮ್ಮ ಭೂಮಿಯನ್ನು ಅಭಿವೃದ್ಧಿಪಡಿಸಿ ಕೊಂಡು ಉತ್ತಮವಾದ ಜೀವನವನ್ನು ಸಾಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಕಂಡುಬಂದರೆ ಅದನ್ನು ಸೂಕ್ತವಾಗಿ ಪರಿಶೀಲನೆಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇನೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಮಾನ್ಯ ಮಂತ್ರಿಗಳು ಕೊಟ್ಟಂತಹ ಉತ್ತರವನ್ನು ನೋಡಿದರೆ ಮಹಾರಾಷ್ಟ್ರದಲ್ಲಿ ಇರತಕ್ಕ ಯೋಜನೆಯನ್ನು ಈ ರಾಜ್ಯದಲ್ಲೂ ಜಾರಿಗೆ ತಂದು ಆ ಪಂಪ್‌ಸೆಟ್ಟು ಮತ್ತು ನೀರಾವರಿ ಬಾವಿಗಳನ್ನು ಕೊಡತಕ್ಕ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಎನ್ನತಕ್ಕ ರೀತಿಯಲ್ಲಿ ಉತ್ತರ ಕೊಟ್ಟರು. ಆದರೆ ಈ ಏಳೂವರೆ ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ನೀರಾವರಿ ಬಾವಿ ಮತ್ತು ಪಂಪ್ ಸೆಟ್ಟುಗಳಿಗೆ ಈ ವರ್ಷ ಇಟ್ಟಿದ್ದಾರೆ. ಈ ಹಣವನ್ನು ಖರ್ಚು ಮಾಡುವಾಗ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಅವರಿಗೆ ಒಂದು ಸರ್‌ಕುಲರ್ ಇಷ್ಯೂ ಮಾಡಿದ್ದಾರೆ. ಅವರು ಸರ್ಕಾರಕ್ಕೆ ಪ್ರೊಪೋಸಲ್ ಕಳುಹಿಸಿದರು. ಪ್ಲಾನಿಂಗ್ ಸೆಕ್ಷನ್ನಿನಲ್ಲಿ ಇರತಕ್ಕ ಕಾರ್ಯದರ್ಶಿಗಳು ಈ ವೆಲ್‌ಫೇರ್ ಸ್ಕೀಮನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಕಳುಹಿಸಬೇಕು ಎಂದು ಹೇಳಿದರು. No. SWD 8 S 'A 71, dated 5th October 1971 ಈ ಗವರ್ನ್‌ಮೆಂಟ್ ಆರ್ಡರ್ ಪ್ರಕಾರ ೧,೦೦೦ ವೆಲ್ಸ್ ತೆಗೆಸುವುದಕ್ಕೆ ಹಣ ದೊರೆಯುತ್ತದೆ. ಎಷ್ಟು ಜನಕ್ಕೆ ಷೇರ್ ಕೊಟ್ಟು ಮೆಂಬರ್‌ಗಳನ್ನು ಮಾಡಿದ್ದಾರೆ, ಎಷ್ಟು ಬಾವಿ ತೋಡಿಸಿದ್ದಾರೆ, ಎಷ್ಟು ಷೇರ್ ಹೋಲ್ಡರ್ ಇದ್ದಾರೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಮಾನ್ಯ ಸದಸ್ಯರು ಪ್ರತ್ಯೇಕವಾಗಿ ಪ್ರಶ್ನೆಯನ್ನು ಹಾಕಲಿ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಡೈರೆಕ್ಟರು ಒಂದು ಸ್ಕೀಮ್ ಸರ್ಕಾರಕ್ಕೆ ಕಳುಹಿಸಿದರು ಅದು ಸರ್ಕಾರದಲ್ಲಿ ಅಪ್ರೂವ್ ಆಗಲಿಲ್ಲ. ಸರ್ಕಾರದ ಮನ್ನಣೆ ಇಲ್ಲದೆ ಇರತಕ್ಕ ಇಂಥಾ ಸ್ಕೀಮುಗಳನ್ನು ತಾಲ್ಲೂಕು ಬಿಡಿಓ ಆಫೀಸುಗಳಿಗೆ ತಾಲ್ಲೂಕು ಬೋರ್ಡ್‌ಗಳಿಗೆ ಕಳುಹಿಸುವಂಥ ಔಚಿತ್ಯವಾದರೂ ಏನು ? ಯಾತಕ್ಕೆ ಕಳುಹಿಸಬೇಕಿತ್ತು ? ಹಣ ಸಿಕ್ಕುತ್ತದೆ ಎನ್ನುವ ಆಸೆಯಿಂದ ನಾನು ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷನಾಗಿದ್ದಾಗ ನೂರಾರು ಅರ್ಜಿಗಳು ನಮಗೆ ಬಂದವು ಅದು ಸಿಕ್ಕುವುದು ಕಷ್ಟ ಇದೆ, ಆತುರ ಪಡಬೇಡಿ ಎಂದು ಹೇಳಿದರೂ ಕೂಡ ಕೇಳಲಿಲ್ಲ. ನನ್ನ ಮೇಲೆ ಅವರು ಇಟ್ಟಿದ್ದ ನಂಬಿಕೆಯನ್ನು ಸಾಕಷ್ಟು ಕಳೆದುಕೊಳ್ಳುವ ಪರಿಸ್ಥಿತಿ ಆಗ ಉದ್ಭವವಾಗಿತ್ತು. ಸರ್ಕಾರದ ಪೂರ್ಣವಾದ ಮನ್ನಣೆ ಇದೆಯೋ ಇಲ್ಲವೋ ತಿಳಿದುಕೊಳ್ಳದೆ ಅಧಿಕಾರಿಗಳು ಈ ರೀತಿ ಕ್ರಮ ಏತಕ್ಕೆ ತೆಗೆದುಕೊಂಡರೋ ಗೊತ್ತಿಲ್ಲ. ಇವೊತ್ತಿನ ದಿವಸ ನೂರಾರು ಅರ್ಜಿಗಳು ಮಂಜೂರಾಗದೆ ನಿಂತಿವೆ. ಅವಕ್ಕೆ ಆಗಿರತಕ್ಕ ಖರ್ಚು, ನಷ್ಟವನ್ನು ಸರ್ಕಾರ ಭರ್ತಿಮಾಡುವುದಕ್ಕೆ ಸಾಧ್ಯವಿದ್ದರೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬಡ್ಜೆಟ್ಟಿನಲ್ಲಿ ಹಣ ಇದೆ, ಖರ್ಚುಮಾಡಬೇಕು ಎನ್ನುವ ಸದುದ್ದೇಶದಿಂದ ಒಂದು ಸ್ಕೀಮನ್ನು ತಯಾರುಮಾಡಿ ಡೈರೆಕ್ಟರವರು ಸರ್ಕಾರಕ್ಕೆ ಕಳುಹಿಸಿದರು. ಸರ್ಕಾರದವರು ಅದನ್ನು ಒಪ್ಪಿಕೊಳ್ಳಲಿಲ್ಲ. ಸರ್ಕಾರದವರು ಒಪ್ಪಿಕೊಳ್ಳುತ್ತಾರೆ ಎನ್ನತಕ್ಕ ಆಶಾಭಾವನೆಯಿಂದ ಸಾಧ್ಯವಾದಷ್ಟು ಬೇಗ ಹಣ ವರ್ಷದ ಅಂತ್ಯದಲ್ಲಿ ಖರ್ಚಾಗಲಿ ಎಂದು ಜಿಲ್ಲಾಧಿಕಾರಿಗಳು ಕೂಡ ಕಾಗದವನ್ನು ಬರೆದರು. ತಪ್ಪು ಕಂಡುಹಿಡಿಯುವುದು ಅಷ್ಟು ಉಚಿತವಲ್ಲ ಎಂದು ಹೇಳುತ್ತೇನೆ. ಸರ್ಕಾರ ಖರ್ಚುಮಾಡಿರುವ ಹಣಕ್ಕೆ ತುಂಬಿಕೊಡುತ್ತೀರಾ ಎಂದರೆ ಹೇಗೆ ತುಂಬಿಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂದು ಕೇಳುತ್ತೇನೆ ?

ಶ್ರೀ ಸಿ. ಬೈರೇಗೌಡ.—ರಾತ್ರಿ ಕಂಡ ಬಾವಿಯಲ್ಲಿ ಹಗಲು ಬಿದ್ದರು ಎನ್ನುವಂತೆ ಒಂದೊಂದು ರೆಕಾರ್ಡು ತಯಾರಾಗುವುದಕ್ಕೆ ನೂರಾರು ರೂಪಾಯಿ ಖರ್ಚಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇಡೀ ನಿಮ್ಮ ಜಿಲ್ಲೆಯಿಂದ ಬಂದಿರತಕ್ಕ ಅರ್ಜಿಗಳು ೧೬.

ಶ್ರೀ ಕೆ. ಪ್ರಭಾಕರ್ ಹರಿಜನರ ಬಗ್ಗೆ ಇರತಕ್ಕ ಯೋಜನೆಗಳನ್ನು ಯಾವುದು ಬೇಕು, ಯಾವುದು ಬೇಡ ಎಂಬುದನ್ನು ತೀರ್ಮಾನ ಮಾಡಿ ಬೇಡದೇ ಇರುವುದನ್ನು ರದ್ದುಮಾಡಿ, ಬೇಕಾದ್ದನ್ನು ಮುಂದುವರೆಸಿ, ಮುಂದೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಈಗಾಗಲೇ ಉತ್ತರ ಕೊಟ್ಟಿದ್ದಾರೆ, ಪ್ರಕೃತ ಸಂದರ್ಭದಲ್ಲಿ ಈ ವಿಷಯದಲ್ಲಿ ಡೈರೆಕ್ಟರು--ತಾವು ತಾವೇ ಯೋಜನೆಯನ್ನು ಕಳಿಸಿ ಸರ್ಕಾರಕ್ಕೆ ಅದು ಇಷ್ಟವಿಲ್ಲದೆ ವಾಪಸ್ ಕಳುಹಿಸಿದರು ಎಂಬ ಅನುಮಾನ ಬರುತ್ತದೆ. ಈ ಒಂದು ಪೊಟೆನ್ಷಿಯಲ್ ಸ್ಕೀಮ್‌ನಿಂದ ನೇರವಾಗಿ ಜನಗಳಿಗೆ ಸಹಾಯ ಆಗುವ ರೀತಿ ಮಾಡುತ್ತೀರಾ ? ೨ ಲಕ್ಷ ೭೦ ಸಾವಿರ ರೂಪಾಯಿ ಹಣ ಇಟ್ಟಿದ್ದೇವೆ ಎಂದು ಹೇಳುತ್ತೀರಿ. ಇದು ಬರೀ ಬಡ್ಜೆಟ್ಟಿನಲ್ಲಿ ಕಾಲಂಗೆ ಭರ್ತಿಯಾಗಿ ಇಟ್ಟಿರುವ ದುಡ್ಡು ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ —ಬಜೆಟ್ಟಿನಲ್ಲಿ ಕೊಟ್ಟಿರತಕ್ಕ ದುಡ್ಡು ವಿನಿಯೋಗವಾಗಬೇಕು. ಮಾನ್ಯ ಸದಸ್ಯರು ಏನು ಈಗ ಸಲಹೆಯನ್ನು ಕೊಟ್ಟಿದ್ದಾರೋ ಆ ಸಲಹೆಯನ್ನು ಪೂರ್ಣವಾಗಿ ಪರಿಶೀಲನೆ ಮಾಡಿ ಸೂಕ್ತವಾದ ತೀರ್ಮಾನವನ್ನು ತೆಗೆದುಕೊಂಡು ಜನರಿಗೆ ಸಹಾಯಮಾಡಬೇಕು ಎನ್ನತಕ್ಕ ಪ್ರಬಲವಾದ ಇಚ್ಛೆ ಸರ್ಕಾರದಲ್ಲಿ ಇರುವುದರಿಂದ ಅದನ್ನು ಮಾಡಲು ಸಾಧ್ಯವಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಜೆ. ಎಲ್. ಕಬಾಡಿ —ಮಹಾರಾಷ್ಟ್ರ ಸರ್ಕಾರದಲ್ಲಿ ಇರುವಂತಹ ಸ್ಕೀಮನ್ನು ಪರಿಶೀಲನೆಮಾಡಿ ಇಲ್ಲಿ ತರಲು ಸೂಕ್ತಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿರುವುದು ಸೂಕ್ತವಾಗಿದೆ. ಆದರೆ ಅದೇ ಮಹಾರಾಷ್ಟ್ರದ ಸ್ಕೀಮನ್ನು ಇನ್ನೂ ಚೆನ್ನಾಗಿ ಪರಿಶೀಲಿಸಿ ಅದನ್ನೇ ಬೇಗನೆ ಮುಂದುವರಿಸುತ್ತೀರಾ ? ಇದರ ಬಗ್ಗೆ ಆಶ್ವಾಸನೆ ಕೊಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದನ್ನೂ ಪರಿಶೀಲನೆ ಮಾಡೋಣ. ಇವರಿಗೆ ಹಣವನ್ನು ನೇರವಾಗಿ ಕೊಟ್ಟರೆ ಅದರಿಂದ ಅನುಕೂಲವಾಗುತ್ತದೆಯೋ ನೋಡಬೇಕು. ನನಗನಿಸುವುದು ಈಗ ಬಾವಿ ಮಾಡಲು ತೆಗೆದುಕೊಂಡ ಹಣ ಸರಿಯಾಗಿ ಉಪಯೋಗವಾಗುತ್ತಿಲ್ಲ ಮತ್ತು ಸಾಲವಾಗಿ ಕೊಟ್ಟ ಹಣ ಸರಿಯಾಗಿ ಖರ್ಚು ಮಾಡಬೇಕೆಂದು ಸರ್ಕಾರದ ಉದ್ದೇಶವಾದರೂ ಅದು ಸರಿಯಾಗಿ ಉಪಯೋಗವಾಗುತ್ತಿಲ್ಲ. ಇದನ್ನೆಲ್ಲಾ ನಿವಾರಣೆ ಮಾಡುವುದಕ್ಕೋಸ್ಕರ ಮಹಾರಾಷ್ಟ್ರದಲ್ಲಿರುವ ಸ್ಕೀಮ್‌ನಂತೆ ಇಲ್ಲಿಯೂ ತರಬೇಕೆಂದು ಸರ್ಕಾರದ ಆಸೆಯಾಗಿದೆ. ಆದರೆ ಈ ಸ್ಕೀಂಗಿಂತ ಇನ್ನೂ ಮುಂದುವರಿದಂತಹ ಸ್ಕೀಂನಿಂದ ಹರಿಜನರಿಗೆ ಯಾವ ರೀತಿ ಅನುಕೂಲಗಳನ್ನು ಮಾಡಬಹುದು ಎನ್ನುವುದನ್ನೂ ಪರಿಶೀಲಿಸಿ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

MR. DEPUTY SPEAKER.—Now the House stands adjourned to meet tomorrow at 1 P.M.

The House adjourned at Eleven Minutes past Six of the clock to mee again at one the clock on Thursday the 27th July 1972.

WD 18293—GPB—550—23-4-73